---

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ:16ನೇ ಡಿಸೆಂಬರ್ 2021
ಗುರುವಾರ

**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಮುಂದುವರೆದ ಚರ್ಚೆ**

**ವಿಷಯ: "ಸರ್ಕಾರದಲ್ಲಿರುವ ಒಬ್ಬ ಹಾಲಿ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆನ್ನುವ ಬಗ್ಗೆ"**

-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ನಸೀರ್ ಅಹ್ಮದ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**2. ಸಂತಾಪ ಸೂಚನೆ**

**"ಭಾರತದ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ನಿಧನದ ಬಗ್ಗೆ."**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**501-ಶಿಶುಪಾಲನಾ ರಜೆ ಆದೇಶದ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ**

-ಶ್ರೀ ಆಯನೂರು ಮಂಜುನಾಥ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**462- ಗೃಹ ಇಲಾಖೆಯ ಸಿವಿಲ್ ವಿಭಾಗದ ಅಧಿಕಾರಿಗಳಿಗೆ ಪದೋನ್ನತಿ ನೀಡುವಲ್ಲಿ ಅನ್ಯಾಯವಾಗುತ್ತಿರುವ ಬಗ್ಗೆ**

-ಶ್ರೀ ಪುಟ್ಟಣ್ಣ
-ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

**425-ಎತ್ತಿನಹೊಳೆ ಕಾಮಗಾರಿಗಳು ಕುಂಠಿತಗೊಂಡಿರುವ ಬಗ್ಗೆ**

-ಶ್ರೀ ಎಂ.ಎ.ಗೋಪಾಲಸ್ವಾಮಿ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**448-ರಾಜ್ಯದಲ್ಲಿ ಬಿಟ್‌ಕಾಯಿನ್ ಹಗರಣದ ಕುರಿತು**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

**517-ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಕುರಿತು**

-ಶ್ರೀ ಪಿ.ಆರ್.ರಮೇಶ್
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**511+519-ನೀರಾವರಿ ನಿಗಮದ SCP-TSP ಅನುದಾನದಲ್ಲಿ MLC ಗಳಿಗೆ ತಾರತಮ್ಯ ಮಾಡಿರುವ ಬಗ್ಗೆ**

-ಶ್ರೀ ಕಾಂತರಾಜ್(ಬಿಎಂಎಲ್)
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**481- ಸರ್ಕಾರದ ಸ್ವತ್ತುಗಳಲ್ಲಿ ಮಳೆ ಕೊಯ್ಲು ಕುರಿತು**

-ಶ್ರೀ ಅಲ್ಲಂ ವೀರಭದ್ರಪ್ಪ
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**536-ಮದ್ಯದ ಬಾಟಲಿಗಳ ಮೇಲಿನ ಅಂಟು ಚೀಟಿಯನ್ನು ಮುದ್ರಿಸುವ ಗುತ್ತಿಗೆ ವಿಚಾರದ ಬಗ್ಗೆ**

-ಡಾ: ಕೆ.ಗೋವಿಂದರಾಜ್
-ಶ್ರೀ ಕೆ.ಗೋಪಾಲಯ್ಯ(ಅಬಕಾರಿ ಸಚಿವರು)

**540-ಮೇಕೆದಾಟು ಯೋಜನೆಯ ವಿವರ ಹಿನ್ನೆಲೆ ಕುರಿತು**

-ಡಾ: ತೇಜಸ್ವಿನಿ ಗೌಡ
-ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)

**440-ಸೈಬರ್ ಕ್ರೈಂ ಮತ್ತು ಆರ್ಥಿಕ ಅಪರಾಧ ಪ್ರಕರಣಗಳ ಕುರಿತು**

-ಶ್ರೀ ಮುನಿರಾಜು ಗೌಡ ಪಿ.ಎಂ.
-ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)

**465-ಬೆಂಗಳೂರಿನ ವಿದ್ಯುತ್ ಚಿತಾಗಾರಗಳ ಸ್ಥಳಾಂತರ ಕುರಿತು**

-ಶ್ರೀ ಆರ್.ಬಿ.ತಿಮ್ಮಾಪೂರ
-ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**461-ರಾಜ್ಯದಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಬಗ್ಗೆ**
-ಶ್ರೀ ಹೆಚ್.ಎಂ.ರಮೇಶ ಗೌಡ
-ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಕಾರ್ಮಿಕ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ರೈತರಿಂದ ಭತ್ತ ಖರೀದಿಸಲು ಮಿತಿಯನ್ನು ನಿಗದಿಪಡಿಸಿರುವ ಬಗ್ಗೆ.**
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಅ) ಎಲ್ಲಾ ಕ್ರೀಡೆಗಳ ಜೊತೆಗೆ ಕಬ್ಬಡ್ಡಿ ಆಟಗಾರರನ್ನು "ಎ" ಮತ್ತು "ಬಿ" ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ.**
-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅನುದಾನದ ಕೊರತೆಯಿಂದ ಪಾವತಿಯಾಗದಿರುವ ವಿದ್ಯುತ್ ಬಿಲ್ ಬಾಕಿಯನ್ನು ಶೀಘ್ರವಾಗಿ ಪಾವತಿಸುವ ಬಗ್ಗೆ.**
-ಶ್ರೀ ಮರಿತಿಬ್ಬೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಕನಿಷ್ಟ 10 ವರ್ಷಕ್ಕಿಂತಲೂ ಹೆಚ್ಚು ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರನ್ನು ಸೇವೆಯಲ್ಲಿ ವಿಲೀನಗೊಳಿಸಿ ಖಾಯಂ ಮಾಡುವ ಬಗ್ಗೆ.**
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ಕೋಲಾರ ನಗರದ ದರ್ಗಾ ಮೊಹಲ್ಲಾದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲ ಸೌಕರ್ಯಗಳ ಕೊರತೆ ಬಗ್ಗೆ.**
-ಶ್ರೀ ಗೋವಿಂದರಾಜು
-ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಊ) ಮರಾಠ ಸಮಾಜದ ಜನರನ್ನು ಪ್ರವರ್ಗ-2ಎ ಗೆ ಸೇರಿಸುವ ಬಗ್ಗೆ.**
-ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ಚಿಕ್ಕಪೇಟೆಯ ಪಾರ್ವತಿಪುರದಲ್ಲಿ ಒಳಚರಂಡಿ ಕೊಳವೆ ಬದಲಿಸುವ ಕಾಮಗಾರಿಯನ್ನು BWSSB ಬದಲಿಗೆ BBMP ಕೈಗೊಂಡಿರುವ ಬಗ್ಗೆ.**
-ಶ್ರೀ ಪಿ.ಆರ್.ರಮೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಎ) ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ 'ರನ್ನ ಶುಗರ್ಸ್ ಕಾರ್ಖಾನೆ' ಕಳೆದ 2 ವರ್ಷಗಳಿಂದ ಸ್ಥಗಿತಗೊಂಡಿದ್ದು, ಕಾರ್ಮಿಕರು ಕಷ್ಟಕ್ಕೆ ಸಿಲುಕಿರುವ ಬಗ್ಗೆ.**

-ಶ್ರೀ ಆರ್.ಬಿ.ತಿಮ್ಮಾಪೂರ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ಡಾ||ನಂಜುಂಡಪ್ಪ ವರದಿಯಂತೆ ಪ್ರಾದೇಶಿಕ ಅಸಮಾನತೆ ಸರಿದೂಗಿಸಲು ಬಾಗಲಕೋಟೆಯಲ್ಲಿ ವೈದ್ಯಕೀಯ ಕಾಲೇಜ್ ಪ್ರಾರಂಭಿಸುವ ಬಗ್ಗೆ.**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರಿಂದ ಉತ್ತರ**

**"ವೈದ್ಯಕೀಯ ಸೀಟು ದೊರೆತು ಇಂಜಿನಿಯರಿಂಗ್ ಸೀಟು ಬಿಟ್ಟುಕೊಟ್ಟಲ್ಲಿ ಆ ಸೀಟನ್ನು ಮುಂದಿನ ಶ್ರೇಣಿಯಲ್ಲಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ನೀಡಿ ಪ್ರಕ್ರಿಯೆ ಮುಂದುವರೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ."**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರ ಪರವಾಗಿ)

**6. ಪ್ರಕಟಣೆ**

**7. ಚುನಾವಣಾ ಪ್ರಸ್ತಾವ**

**8. ನಿಯಮ 68ರ ಮೇರೆಗೆ ಚರ್ಚೆ**

**ವಿಷಯ: "ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಟಿಯಿಂದ ರೈತರ ಬೆಳೆಗಳು ನಾಶವಾಗಿ, ಜಾನುವಾರುಗಳ ಪ್ರಾಣ ಹಾನಿಯಾಗಿ ಸಾರ್ವಜನಿಕ ಆಸ್ತಿಗಳಿಗೆ ಧಕ್ಕೆ ಉಂಟಾಗಿರುವ ಸಮಸ್ಯೆಗಳ ಕುರಿತು."**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ಚರ್ಚೆ ಮುಂದುವರೆದಿತ್ತು)**

~~~~~~~~~~~~

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~~~~~~

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(1116)/16.12.2021/11.50/ಬಿಕೆಪಿ-ಆರ್‌ಎನ್**

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 16ನೇ ಡಿಸೆಂಬರ್ 2021**

**ಸದನವು ಬೆಳಗಾವಿಯ ಸುವರ್ಣಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 52 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಈಗ ಸದನದಲ್ಲಿ ಕೋರಂ ಇರುವುದಿಲ್ಲ.

**ಶ್ರೀ ಪುಟ್ಟಣ್ಣ( ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ಸದನದಲ್ಲಿ ಕೋರಂ ಇರುವುದಿಲ್ಲ.

**ಸಭಾಪತಿಯವರು :-** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 11 ಗಂಟೆ 55 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(1117) ಎಸ್‌ಪಿಆರ್/ಎಕೆ 1:20 16/12/2021

**(ಬೆಳಗ್ಗೆ 11 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 01 ಗಂಟೆ 22 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಮುಂದುವರೆದ ಚರ್ಚೆ**

**ವಿಷಯ: “ಸರ್ಕಾರದಲ್ಲಿರುವ ಒಬ್ಬ ಹಾಲಿ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್** ಮೊಕದ್ದಮೆಯನ್ನು **ದಾಖಲಿಸಬೇಕೆನ್ನುವ ಬಗ್ಗೆ.”**

\- - - - - -

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮತ್ತು ಶ್ರೀ ಬಿ.ಕೆ.ಹರಿಪ್ರಸಾದ್‌ರವರುಗಳನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ತಮ್ಮ ಸ್ಥಾನದಿಂದ ಸದನದ ಬಾವಿಯೆಡೆಗೆ ತೆರಳಲನುವಾದರು)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಿ. ಶ್ರೀ ಬಿ.ಕೆ.ಹರಿಪ್ರಸಾದ್ ರವರೇ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದ್ದೀರಲ್ಲ; ಅದನ್ನು ಇಲ್ಲಿ ಪ್ರಸ್ತಾಪಿಸಿ; ಇದನ್ನು ಸದನದ ಬಾವಿಯೊಳಗೆ ಪ್ರಸ್ತಾಪಿಸುವುದಕ್ಕೆ ಬರುವುದಿಲ್ಲ. ಸದನದ ಬಾವಿಯೊಳಗಿರುವ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಿ; ಆಗ ಚರ್ಚೆಯನ್ನು ಪ್ರಾರಂಭಿಸೋಣ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ತಮ್ಮ ಸ್ಥಾನದಲ್ಲಿಯೇ ನಿಂತರು)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ವ್ಯವಸ್ಥೆಯ ಪ್ರಶ್ನೆಯಾಗಿರುವುದರಿಂದ ಕೆಲವು ವಿಚಾರಗಳ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಹೀಗಾಗಿ ನಮಗೆ ಸ್ವಲ್ಪ ಕಾಲಾವಕಾಶವನ್ನು ನೀಡಬೇಕೆಂದು ವಿನಂತಿಸುತ್ತಿದ್ದೇನೆ. ಒಂದು ವೇಳೆ ಚರ್ಚೆ ಮಾಡೋಣ ಎಂದು ಹೇಳಿದರೆ, ಚರ್ಚಿಸೋಣ. It has nothing to do with... ನಿನ್ನೆಯ ದಿವಸ ಆಗಿರುವ ವಿಚಾರವಲ್ಲ. ಇದು ವ್ಯವಸ್ಥೆಯ ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಹರಿಪ್ರಸಾದ್‌ರವರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ವಿಚಾರ ಮಾಡಿ, ಇತ್ಯರ್ಥಕ್ಕೆ ಬರಬೇಕಾಗಿದೆ ಹಾಗೂ ನಿರ್ಣಯವನ್ನು ಕೈಗೊಳ್ಳಬೇಕಾಗಿದೆ. ಆ ದೃಷ್ಟಿಯಿಂದ ಮತ್ತು ಈಗಾಗಲೇ ಭೋಜನದ ಸಮಯವಾಗಿರುವುದರಿಂದ ಅಪರಾಹ್ನದವರೆಗೆ ತಾವು ಸದನವನ್ನು ಮುಂದೂಡಿದರೆ, ಈ ಮಧ್ಯದಲ್ಲಿ ನಾವು ಒಂದು ಇತ್ಯರ್ಥಕ್ಕೆ ಬರುತ್ತೇವೆ. ಈಗ ಪ್ರಶ್ನೋತ್ತರವನ್ನು ತೆಗೆದುಕೊಂಡರೆ, ಒಂದು ಗಂಟೆಗಳ ಕಾಲಾವಕಾಶವಾಗುತ್ತದೆ. ಈಗಾಗಲೇ ಸಮಯ ಮಧ್ಯಾಹ್ನ 1:30 ಗಂಟೆಯಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿ, ಸುಮಾರು ಇಷ್ಟೊಂದು ಸಮಯ ನಿಮ್ಮ ಜೊತೆಗೆ ನಾವುಗಳೆಲ್ಲರೂ ಕುಳಿತುಕೊಂಡು ಕಾದಿದ್ದೇವೆ. ಪ್ರಸಕ್ತ ಅಧಿವೇಶನವು ಕೇವಲ 8-10 ದಿನಗಳವರೆಗೆ ಮಾತ್ರವೇ ನಡೆಯುತ್ತದೆ. ಈ ಸಂದರ್ಭದಲ್ಲಿ ನಾವು ಶೀಘ್ರವಾಗಿ ಕಾರ್ಯಕಲಾಪಗಳನ್ನು ನಡೆಸಿ, ವಿಧೇಯಕಗಳನ್ನು ಅನುಮೋದಿಸಿದರೆ, ಇದರಿಂದ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಗೌರವ ಬರುತ್ತದೆ. ಅಧಿವೇಶನದ ಪ್ರತಿಯೊಂದು ದಿನವೂ ನಾವು ಹೀಗೆಯೇ ಸದನದ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕುತ್ತಾ ಹೋದರೆ, ಇದರಿಂದ ಏನು ಪ್ರಯೋಜನವಾಗುತ್ತದೆಂದು ನಾವು ನಿಮ್ಮ ವಿವೇಚನೆಗೆ ಬಿಡುತ್ತೇವೆ. ನೀವು ತೆಗೆದುಕೊಳ್ಳುವ ನಿರ್ಣಯಕ್ಕೆ ನಾವು ಬದ್ಧರಾಗಿರುತ್ತೇವೆ. ನಾವು ಯಾವತ್ತೂ ಸಹ

ಪೀಠದಿಂದ ಬರುವ ತೀರ್ಮಾನವನ್ನು ಅಲ್ಲಗಳೆಯಲು ಹಾಗೂ ಪ್ರಶ್ನಿಸಲು ಸಿದ್ಧರಿಲ್ಲ. ಆದರೂ ಸಹ ಆಡಳಿತದ ಹಿತದೃಷ್ಟಿಯಿಂದ ಸ್ವಲ್ಪ ಯೋಚನೆ ಮಾಡಬೇಕು. ಇಲ್ಲಿನ ಚರ್ಚೆಗಳನ್ನು ಪೂರ್ಣಗೊಳಿಸಿ, ಸರ್ಕಾರವು ಈ ಸದನದಲ್ಲಿ ವಿಧೇಯಕಗಳನ್ನು ಮಂಡಿಸಬೇಕಾಗಿದೆ. ಒಂದು ವೇಳೆ ವಿಧೇಯಕಗಳ ಮೇಲೆ ಚರ್ಚಿಸಲು ಸಾಕಷ್ಟು ಕಾಲಾವಕಾಶವನ್ನು ನೀಡದಿದ್ದರೆ, ತರಾತುರಿಯಲ್ಲಿ ವಿಧೇಯಕಗಳ ಅನುಮೋದನೆಯಾಗುತ್ತದೆ ಎಂಬ ದೂರುಗಳು ನಮಗೆ ಬರುತ್ತವೆ. ಇದರ ಬಗ್ಗೆ ನಾವು ಯೋಚಿಸಬೇಕು. ಇಲ್ಲಿ ಏನು ಚರ್ಚೆ ಮಾಡಬೇಕೆನ್ನುವುದು ನನಗೆ ಗೊತ್ತಿಲ್ಲ. ನಿನ್ನೆಯ ಘಟನೆಗೆ ನಾವು ವಿಷಾದಿಸುತ್ತೇವೆ. ದಿಢೀರ್ ಆಗಿ resolution move ಮಾಡಿರುವುದು ಸರಿಯಿಲ್ಲ ಎಂದು ನಾನು ಈಗಾಗಲೇ ಹೇಳಿದ್ದೇನೆ. ಇದು ಆಗಬಾರದಾಗಿತ್ತು; ಆದರೆ ಆಗಿ ಹೋಗಿ ಬಿಟ್ಟಿದೆ. ಈ ಬಗ್ಗೆ ನಾವು ಕುಳಿತುಕೊಂಡು ರಾಜಿ ಮಾಡಿಕೊಳ್ಳೋಣ. ನಾವು ಯಾವುದೇ ಹಠಕ್ಕೆ ಬಿದ್ದು ಯಾರದ್ದೋ ದ್ವೇಷ ಅಥವಾ ಇನ್ನ್ಯಾವುದೇ ಕಾರಣಕ್ಕೆ ಸರ್ಕಾರವನ್ನು ನಡೆಸುತ್ತಿಲ್ಲ. ಕೆಲವು ವಿಷಯಗಳ ಬಗ್ಗೆ ತಾವು ನಮ್ಮ ವಾದವನ್ನು ಕೇಳಬೇಕು ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನೂ ಸಹ ಅವಲೋಕಿಸಬೇಕು. ಪೀಠವು ಈಗಾಗಲೇ ನಿರ್ಣಯವನ್ನು ನೀಡಿದೆ. ನಿನ್ನೆಯ ದಿವಸ ವಿರೋಧ ಪಕ್ಷದವರು ಸರ್ಕಾರವನ್ನು ಟೀಕಿಸಿದ್ದು, ಅದನ್ನು ನಾವು ಸ್ವಾಗತಿಸಿದ್ದೇವೆ. ನಿಯಮಾನುಸಾರ ಕ್ರಮಗಳನ್ನು ತೆಗೆದುಕೊಳ್ಳಿ. ಸರ್ಕಾರಕ್ಕೆ ಶಕ್ತಿಯಿದ್ದರೆ ನಾವು ಉತ್ತರಿಸುತ್ತೇವೆ. ಪೀಠ ಮತ್ತು ಇದರ ತೀರ್ಮಾನವನ್ನು ಪ್ರಶ್ನಿಸುವುದು ಮತ್ತು ಪೀಠದ ತೀರ್ಮಾನಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಾಗಬಾರದು. ಇದಿಷ್ಟೇ ನಮ್ಮ ವಾದವಾಗಿದೆ. ತಾವು ಯಾವ ತೀರ್ಮಾನವನ್ನು ಬೇಕಾದರೂ ತೆಗೆದುಕೊಳ್ಳಿ. ಪೀಠದ ಬಗ್ಗೆ ನನಗೆ ಅತ್ಯಂತ ಹೆಚ್ಚು ಗೌರವವಿದೆ. ಈ ಸದನದಲ್ಲಿ ಶ್ರೀ ಬಿ.ಕೆ.ಹರಿಪ್ರಸಾದ್, ಶ್ರೀ ಆಯನೂರು ಮಂಜುನಾಥ್, ಡಾ||ತೇಜಸ್ವಿನಿಗೌಡ ರವರುಗಳಂತಹ ಬಹಳ ಅನುಭವಿ ಸದಸ್ಯರುಗಳಿದ್ದಾರೆ. ಇವರುಗಳು ರಾಜ್ಯಸಭೆಯಲ್ಲಿಯೂ ಸಹ ಕರ್ತವ್ಯ ನಿರ್ವಹಿಸಿದ್ದಾರೆ. ಇವರುಗಳು ಈ ಸದನದ ಘನತೆ-ಗೌರವಗಳನ್ನು ಹೆಚ್ಚಿಸಬೇಕೆನ್ನುವುದು ನಮ್ಮ ಬಯಕೆಯಾಗಿದೆ. ನಾವು ಬಹಳ ವಿನಮ್ರವಾಗಿ ವಿನಂತಿಸಿಕೊಳ್ಳುವುದೇನೆಂದರೆ, ನಮ್ಮದೇ ಪಕ್ಷವು ಅಧಿಕಾರದಲಿ ಅಥವಾ ಇಲ್ಲದಿರಲಿ but we cannot demoralize the dignity and status of a House in a democratic setup. ನಾವುಗಳೇ ಸಭಾಪತಿಗಳ ಅಥವಾ ಸಭಾಧ್ಯಕ್ಷರ ನಿರ್ಣಯಗಳನ್ನು ಪ್ರಶ್ನಿಸುವಂತಹ ಪರಿಸ್ಥಿತಿಗಳು ನಿರ್ಮಾಣವಾದರೆ, ನಾವು ಯಾರಿಗೆ ಹೇಳಬೇಕು? If you can question the decision of the Chief Justice, you are equal to him. ಈ ಪೀಠದಿಂದ ಬರುವ ತೀರ್ಮಾನಗಳು ಅಂತಿಮವಾಗಿರುತ್ತವೆ. ಅದನ್ನು ಪ್ರಶ್ನಿಸಿದ್ದು ನಮಗೆ ನೋವಾಗಿದೆ. ನಮ್ಮ ವಿರುದ್ಧ ಮಾತನಾಡಿದ್ದಾರೆಂಬ ಕಾರಣಕ್ಕಾಗಿ ನಾವು ಈ ಪರಿಸ್ಥಿತಿಯನ್ನು ಇತ್ಯರ್ಥಪಡಿಸಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿಲ್ಲ; ಆದರೆ, ವಿರೋಧ ಪಕ್ಷದವರು ಪೀಠದ ತೀರ್ಮಾನವನ್ನು ವಿರೋಧಿಸಿದರು. ಅಕಸ್ಮಾತ್ತಾಗಿ ನಮ್ಮ ಕಡೆಯಿಂದ ಈ ರೀತಿಯ ತುರ್ತು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಎಂದಾದರೆ, ಈ ಬಗ್ಗೆ ನಾವು ವಿಷಾದಿಸುತ್ತೇವೆ. ಹಾಗೂ ನಾವು ಇದನ್ನು ಈಗಾಗಲೇ ಹೇಳಿದ್ದೇವೆ. ಆದರೆ, ಸಭಾಪತಿಯವರು ಈಗಾಗಲೇ ನಿರ್ಣಯವನ್ನು ನೀಡಿದ್ದಾರೆ. ನಿನ್ನೆಯ ದಿವಸ stalemate clear ಆಗಿದೆ ಎಂದು ಹೇಳಿದ್ದಾರೆ. ಸರ್ಕಾರದ ಪರವಾಗಿ ಕೈಮುಗಿದು ವಿರೋಧ ಪಕ್ಷದವರನ್ನು ನಾನು ಕೇಳುವುದೇನೆಂದರೆ, ಸದನವನ್ನು ನಡೆಸಲು ಅವರು ಅನುವು ಮಾಡಿಕೊಡಬೇಕು. ಇನ್ನು ಕೇವಲ 4-5 ದಿನಗಳವರೆಗೆ ಮಾತ್ರವೇ ಅಧಿವೇಶನವು ನಡೆಯುತ್ತದೆ. ವಿರೋಧ ಪಕ್ಷದ ಅನೇಕ ಸದಸ್ಯರು ತಮ್ಮ ಅಧಿಕಾರಾವಧಿಯ ಕೊನೆಯ ಅಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ. ಹೀಗಾಗಿ ನಾವುಗಳೆಲ್ಲರೂ ಹರ್ಷದಿಂದ ಸದನವನ್ನು ನಡೆಸೋಣ. ಇದರಲ್ಲಿ ಯಾರದ್ದೇ ಸ್ವಂತ ಹಿತಾಸಕ್ತಿ ಇಲ್ಲ; ನಾವುಗಳು ಸರ್ಕಾರವನ್ನು ನಡೆಸುತ್ತಿದ್ದೇವೆ. 2003 ನೇ ಇಸವಿಯಲ್ಲಿ ದಾಖಲಾದ ಪ್ರಕರಣವೊಂದನ್ನು ಆಧಾರವಾಗಿಟ್ಟುಕೊಂಡು..... ಯಾಕಿಷ್ಟು ಹಠ ಎಂದು ಯಾರೋ ಬಂದು ನನ್ನನ್ನು ಕೇಳಿದರು. Sir, he has not committed anything as a Minister. Whether he has committed or not...

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಾವು ಚರ್ಚಿಸುತ್ತಿದ್ದೇವೆ.

**ಸಭಾಪತಿಯವರು:-** ನಂತರದಲ್ಲಿ ನಿಮಗೆ ಮಾತನಾಡಲು ಅವಕಾಶವನ್ನು ನೀಡುತ್ತೇನೆ; ಮೊದಲು ಅವರು ಮಾತನಾಡಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ವಿರೋಧ ಪಕ್ಷದವರಿಗೆ ಚರ್ಚೆ ಬೇಡವೆಂದಾದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಸಭಾಪತಿಯವರ ಕೊಠಡಿಗೆ ನಾವು ಬಂದು ಅಲ್ಲಿ ಇದರ ಬಗ್ಗೆ ಚರ್ಚೆಯನ್ನು ಮಾಡುತ್ತೇವೆಂದು ಹೇಳಿದ್ದೇವೆ; ಆದರೆ ನೀವು ಆ ಚರ್ಚೆಯನ್ನು ಮಾಡುವುದಿಲ್ಲವೆಂದಾದರೆ, no, I am not here to speak on that. ಬೇರೆ ವಿಷಯಗಳ ಬಗ್ಗೆ ವಿರೋಧ ಪಕ್ಷದವರು ಚರ್ಚೆ ಮಾಡಲಿ, ಕಾಲಾವಕಾಶವನ್ನು ತೆಗೆದುಕೊಳ್ಳಿ. ಸಭಾಪತಿಯವರು ಯಾವಾಗ ಕರೆದರೂ ನಾವು ಬರುತ್ತೇವೆ. It is for the Chairman to take a decision. We have no objection.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೆಳಗ್ಗೆಯಿಂದ ಇಲ್ಲಿಯವರೆಗೆ ಕಾದಿರುವುದಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉಲ್ಲೇಖಿಸಿದರು. ನಾವು ಬೆಳಗ್ಗೆಯಿಂದ ಇಲ್ಲಿಯವರೆಗೆ, ಸದನಕ್ಕೆ ಬರುವುದಕ್ಕೆ ಪ್ರಯತ್ನಿಸಿದೆವು. ಆದರೆ, ಪೊಲೀಸರು ಸುವರ್ಣ ವಿಧಾನಸೌಧದ ಗೇಟಿನಲ್ಲಿ ನಮ್ಮನ್ನು ತಡೆದು ನಿಲ್ಲಿಸಿದ್ದರು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಈ ಬಗ್ಗೆ ನಾನು ನಿಮ್ಮನ್ನು ಕೇಳಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ಸದನಕ್ಕೆ ಬರುವುದು ವಿಳಂಬವಾಯಿತು ಎನ್ನುವುದನ್ನು ನಾವು ನಿಮಗೆ ಹೇಳಲೇಬೇಕು. ನೀವು ಈ ಬಗ್ಗೆ ಕೇಳಿಲ್ಲವೆಂದಾದರೂ ಸಹ ನಾವು ನಿಮಗೆ ಹೇಳಬೇಕು. I should voluntarily make my own statement. It is my bounden duty.

**ಸಭಾಪತಿಯವರು:-** ನಾನು ಹೇಳುವುದನ್ನು ಮೊದಲು ಕೇಳಿ. ನಂತರದಲ್ಲಿ ನೀವು ಮಾತನಾಡಿ. ನಿನ್ನೆಯ ವಿಷಯವು ಈಗಾಗಲೇ ಪೂರ್ಣಗೊಂಡಿದೆ. ಎಲ್ಲಾ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ಮಾತನಾಡಿದ ನಂತರ ತಾವು ಮಾತನಾಡಬೇಕೆಂದು ವಿನಂತಿಸುತ್ತೇನೆ. ಏಕೆಂದರೆ, ಬೆಳಗ್ಗೆಯಿಂದ ಇಲ್ಲಿಯವರೆಗೆ ಕಾದಿರುವುದಾಗಿ ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು ಹೇಳಿದ್ದಾರೆ. ಉಲ್ಲೇಖಿಸಿದರು. ಬೆಳಗ್ಗೆ 11 – 11:15 ಗಂಟೆಗೆ ನಾವು ಸುವರ್ಣ ವಿಧಾನಸೌಧದ ಗೇಟ್ ಬಳಿ ಇದ್ದೆವು. ಆಗ ಪೊಲೀಸರು ಅವರಲ್ಲೂ ವಿಶೇಷವಾಗಿ ಇಲ್ಲಿನ ಪೊಲೀಸ್ ಅಧೀಕ್ಷಕರು, ಪೊಲೀಸ್ ಆಯುಕ್ತರು ಮತ್ತು ಐ.ಜಿ.ಪಿ. ಅವರುಗಳು ನಮ್ಮನ್ನು ತಡೆಹಿಡಿದು, ಒಳಗೆ ಬರಲು ಅವಕಾಶ ನೀಡಲಿಲ್ಲ. ನಾವು ಇದ್ದ ಟ್ರ್ಯಾಕ್ಟರ್‌ಗೆ ಅನುಮತಿ ಬೇಕೆಂದು ತಿಳಿಸಿದರು. ಟ್ರ್ಯಾಕ್ಟರ್ ರೈತರ ವಾಹನವಾಗಿದೆ; ಈ ದೇಶಕ್ಕೆ ಅನ್ನ ನೀಡುವ ದಣಿಗಳ ವಾಹನವಾಗಿದೆ. ನಾವುಗಳು ಟ್ರ್ಯಾಕ್ಟರ್ ಅಥವಾ ಚಕ್ಕಡಿಯಲ್ಲಾದರೂ ಸದನಕ್ಕೆ ಬರಬಹುದು. ಟ್ರ್ಯಾಕ್ಟರ್‌ನ್ನು ಬಹಳ ಗೌರವದಿಂದ ಕಾಣಬೇಕು. ಏಕೆಂದರೆ, ಈ ದೇಶದ ರೈತರು ಹಗಲು ರಾತ್ರಿಗಳೆನ್ನದೆ, ನಿದ್ದೆ-ನೀರಡಿಕೆಗಳನ್ನು ಬಿಟ್ಟು ಅಹೋರಾತ್ರಿ ಹೋರಾಟಗಳನ್ನು ಮಾಡಿ ಅನ್ನದಾತರೆನಿಸಿಕೊಂಡಿದ್ದಾರೆ. ಇವರು ಆಹಾರವನ್ನು ಬೆಳೆದಾಗ ನಮ್ಮ ದೇಶದ 130 ಕೋಟಿ ಜನರು ಊಟ ಮಾಡುತ್ತಾರೆ. ಇಂತಹವರ ವಾಹನದಲ್ಲಿ ನಾವು ಬಂದಿದ್ದೇವೆ. ಕಾರು ಹಾಗೂ ಇನ್ನಿತರೆ ವಾಹನಗಳಿಗಿಂತ ಹೆಚ್ಚು ನಾವು ಟ್ರ್ಯಾಕ್ಟರ್ ಹಾಗೂ ಚಕ್ಕಡಿಗಳಿಗೆ ಗೌರವ ನೀಡುತ್ತೇವೆ.

(ಮುಂದು)

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

(1118) 1.30 16-12-2021 CS.AK

**ಶ್ರೀ ಎಸ್. ಆರ್. ಪಾಟೀಲ್(ಮುಂದು):-**

ನಾವು ಸದನಕ್ಕೆ ಹಾಜರಾಗುವುದು ಮುಖ್ಯವಾಗುತ್ತದೆ. ನಾವು ಗೌರವಾನ್ವಿತ ಮುಖ್ಯಮಂತ್ರಿಗಳ ಸುಪರ್ಧಿನಲ್ಲಿಲ್ಲ. During the session, the Members of the Upper House are under the custody of Hon. Chairman. ಕೆಳಮನೆಯವರು ಗೌರವಾನ್ವಿತ ಸಭಾದ್ಯಕ್ಷರ ಕಸ್ಟಡಿಯಲ್ಲಿರುತ್ತಾರೆ. ನಮ್ಮನ್ನು ಪೊಲೀಸಿನವರು ಟಚ್ ಮಾಡಬೇಕೆಂದರೆ ತಮ್ಮ ಅನುಮತಿಯನ್ನು ಪಡೆಯಬೇಕು. Without taking permission from the Hon. Chairman, no police can touch the Members of the Legislative Council. That is the procedure. ಮತ್ತು ನಾವುಗಳು ಸದನಕ್ಕೆ ಬರುವ ವ್ಯವಸ್ಥೆಯನ್ನು ಮಾಡುವುದು ಮುಖ್ಯಮಂತ್ರಿಗಳ ಕೆಲಸವಲ್ಲ. ಅದು ಮಾನ್ಯ ಸಭಾಪತಿಗಳ ಜವಾಬ್ದಾರಿ. ಮೇಲ್ಮನೆ ಸದಸ್ಯರನ್ನು ಯಾರಾದರೂ prevent ಮಾಡಿದರೆ ತತಕ್ಷಣ you have to pass an instruction. We will not ask the Hon'ble Chief Minister. ನಾವು ಮುಖ್ಯಮಂತ್ರಿಗಳನ್ನು ಏಕೆ ಕೇಳಬೇಕು. ನಾವು ತಮ್ಮ ಕಸ್ಟಡಿಯಲ್ಲಿದ್ದೇವೆ. ಸದನಕ್ಕೆ ಬರುವ ವ್ಯವಸ್ಥೆಯನ್ನು ಮಾಡುವುದು ನಿಮ್ಮ ಜವಾಬ್ದಾರಿ. ಪೊಲೀಸಿನವರು 3 ತಾಸುಗಳ ಕಾಲ ನಮ್ಮನ್ನು ಗೇಟಿನಲ್ಲೇ ತಡೆ ಹಿಡಿದು ನಿಲ್ಲಿಸಿದ್ದರು. Is it not a breach of privilege? ಕೆಳಮನೆಯ ವಿಪಕ್ಷನಾಯಕರು ಹಾಗೂ ಮೇಲ್ಮನೆಯ ವಿಪಕ್ಷದ ನಾಯಕರು ಹಾಗೂ ಸದಸ್ಯರನ್ನು ಒಳಗೆ ಬಿಡದಂತೆ ಪೊಲೀಸಿನವರು ತಡೆದು ಸದನಕ್ಕೆ ಬರದ ಹಾಗೆ ಮಾಡಿದ್ದಾರೆಂದರೆ is it not a breach of privilege? ಅಂತಿಮವಾಗಿ ಇದು ಸಭಾಪತಿಯವರಿಗೆ ಆಗಿರುವ ಅವಮಾನ. ಸಭಾಪತಿಯವರ ಸುಪರ್ದಿಯಲ್ಲಿರುವ ಸದಸ್ಯರನ್ನು ಸದನಕ್ಕೆ ಕರೆಯಿಸಿ, ಚರ್ಚೆಗೆ ಅವಕಾಶ ಮಾಡಿಕೊಡುವ ಜವಾಬ್ದಾರಿ ತಮ್ಮ ಮೇಲಿದೆ. We will not question the Chief Minister. ಈಗ ಮುಖ್ಯಮಂತ್ರಿಗಳು ಸದನದಲ್ಲಿದ್ದರೂ ಸಹ ನಾವು ಅವರನ್ನು ಪ್ರಶ್ನೆ ಮಾಡುವುದಿಲ್ಲ. ಆ ಕಾರಣದಿಂದಲೇ ನಾವು ಸದನಕ್ಕೆ ಬರುವುದು ತಡವಾಗಿದೆ. ಆ ಪೊಲೀಸ್ ಅಧಿಕಾರಗಳ ಮೇಲೆ ಏನು ಮಾಡಬೇಕು, ಹಕ್ಕುಚ್ಯುತಿ ಪ್ರಸ್ತಾಪ ಮಾಡಬೇಕಾದ ಬಗ್ಗೆ ನಾವು ನಂತರ ನಿರ್ಣಯವನ್ನು ಕೈಗೊಳ್ಳುತ್ತೇವೆ.

ಈ ವಿಚಾರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು ಹೇಳಿದರು. ನಾವು ನಿನ್ನೆಯೂ ಸಹ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಈಗ ಉತ್ತರ ಕರ್ನಾಟಕ ಭಾಗದಲ್ಲಿ ಅಧಿವೇಶನ ನಡೆಯುತ್ತಿದೆ. ಅದರಲ್ಲಿಯೂ ಬೆಳಗಾವಿಯೂ ರಾಜ್ಯದ ಎರಡನೆಯ ರಾಜಧಾನಿ, ಇಲ್ಲಿ ನಡೆಯುವ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಅನೇಕ ಜಲ್ವಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ ನಮಗೆ ಆಸಕ್ತಿ ಇದೆ. ಬಹಳ ಮಹತ್ವ ಸಂಗತಿಗಳನ್ನು ನಾವಿಲ್ಲಿ ಚರ್ಚೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಾಗಿದೆ. ನಮಗೆ ಇಲ್ಲಿ ಒಂದು ನಿಮಿಷ ಕೂಡ ವ್ಯರ್ಥ ಮಾಡುವುದಕ್ಕೆ ಇಷ್ಟವಾಗುವುದಿಲ್ಲ. ಇವತ್ತು ನಮ್ಮ 3 ಗಂಟೆಗಳ ಸಮಯ ಈ ರಾಜ್ಯದ ಪೊಲೀಸಿರಿಂದ ಹಾಳಾಯಿತು. ಇಲ್ಲಿನ ಐ.ಜಿ.ಪಿ, ಎಸ್.ಪಿ, Commissionerate of Police, ಇವರು ನಮ್ಮನ್ನು ಸದನಕ್ಕೆ ಬಾರದ ಹಾಗೆ ತಡೆ ಹಿಡಿದರು. ಅವರು ನಮ್ಮನ್ನು ಒಳಕ್ಕೆ ಬಿಡದೇ ನಮ್ಮ ಪೊಲೀಸ್ ವಾಹನದಲ್ಲಿ ಬನ್ನಿ ಎಂದು ಕರೆದರು. ಪೊಲೀಸ್ ಜೀಪಿನಲ್ಲಿ ಬರುವುದಕ್ಕೆ ನಾವೇನು ಆರೋಪಿಗಳೇ? Is it a way of behaving? It is rude behaviour of the police. I condemn that incident. ಏನು ಮಾಡಬೇಕೆಂದು ಪೊಲೀಸಿನವರು ನಿಮ್ಮ ಪರವಾನಗಿ ಪಡೆಯಬೇಕಾಗಿತ್ತು. ಅಥವಾ ಕೆಳಮನೆಯ ಸಭಾಧ್ಯಕ್ಷರನ್ನು ಕೇಳಬೇಕಾಗಿತ್ತು. ಸದಸ್ಯರನ್ನು ತಡೆ ನಿಲ್ಲಿಸುವುದು ಏಂದರೆ – ಈಗ ಸಮಯ 1.30 ಆಗಿದೆ. ನಾವು ತಮ್ಮ ಛೇಂಬರ್‌ನಲ್ಲಿ ಮಾತನಾಡುತ್ತೇವೆ. ಒಟ್ಟಿನಲ್ಲಿ ಸದನ ನಡೆಯಬೇಕು ಎನ್ನುವವರು ನಾವು. How dare they are? I will not talk about that matter at this juncture. ಸದನದ ಒಂದು ನಿಮಿಷವೂ ನಮಗೆ waste ಆಗಬಾರದು.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**:- ಮಾನ್ಯ ಸಭಾಪತಿಗಳೇ, ತಾವು ಮತ್ತು ಸಭಾಧ್ಯಕ್ಷರೆ ಸದನಗಳನ್ನು ನಡೆಸುವುದು. ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಣೆ ಮಾಡದೆ ಸಭಾಪತಿ ಮತ್ತು ಸಭಾಧ್ಯಕ್ಷರನ್ನು ಸದನ ನಡೆಸಿ ಎನ್ನುವ ನಿರ್ಧಾರಕ್ಕೆ ಬರುವುದಕ್ಕೆ ಮುಖ್ಯಮಂತ್ರಿಗಳಿಗೆ ಆಗುವುದಿಲ್ಲ. ಇವತ್ತು ಸದನ ನಡೆಸುವಾಗ ಎಷ್ಟು ಜನರು ಬರುತ್ತಾರೆ, ಯಾವ್ಯಾವ ತರಹದ್ದು ಜನರು ಬರುತ್ತಾರೆನ್ನುವುದು ತಮಗೆ ಗೊತ್ತಿದೆ. ಎಲ್ಲರೂ ಸದನಕ್ಕೆ ಬಂದು ಪ್ರಜಾಪ್ರಭುತ್ವದಲ್ಲಿ ನಮಗೆ ಹಕ್ಕಿದೆ ಎನ್ನುವ ವಾದಗಳನ್ನು ಮಾಡುತ್ತಾರೆ. ನಿಮ್ಮನ್ನು ಪೊಲೀಸಿನವರು ಗೇಟಿನಲ್ಲಿ ತಡೆದಿದ್ದು ನಮಗೆ ಗೊತ್ತಿಲ್ಲ. ನಮಗೆ ಹೇಳಿದ ತಕ್ಷಣ ನಾವು react ಮಾಡಿದ್ದೇವೆ. ಇದರಲ್ಲಿ ನಮ್ಮದಾಗಲೀ, ಮುಖ್ಯಮಂತ್ರಿಗಳಾದಗಾಲೀ, ಸಭಾಪತಿಯವದ್ದಾಗಲೀ ಯಾವುದೇ ಪಾತ್ರವಿಲ್ಲ. ತಕ್ಷಣ ನಾವು react ಮಾಡಿ, ನಾನೇ ಅಲ್ಲಿಗೆ ಬರುವುದಕ್ಕೆ ಹೊರಟೆ, ಅಷ್ಟರಲ್ಲಿ ಶ್ರೀ ಗೋವಿಂದ ಕಾರಜೊಳ ಸಾಹೇಬರು ಮಾತನಾಡಿದ್ದಾರೆ, ಅವರನ್ನು ಕಳುಹಿಸುತ್ತಾರೆ ಬನ್ನಿ ಸರ್ ಎಂದು ನನ್ನನ್ನು ಕರೆದರು.

**ಸಭಾಪತಿಯವರು:-** ಇಷ್ಟೆಲ್ಲಾ ನನ್ನ ಛೇಂಬರ್‌ನಲ್ಲಿಯೇ ನಡೆಯಿತು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೇ, ಅವರಿಗಾಗಿರುವ ಅವಮಾನ ಸರಿ ಎಂದು ನಾನು ಹೇಳುವುದಿಲ್ಲ. ಮಾನ್ಯ ಗೋವಿಂದ ಕಾರಜೋಳರವರು ಪೊಲೀಸಿನವರ ಜೊತೆಯಲ್ಲಿ ಮಾತನಾಡಿದ್ದರು. ನಾನು ಮತ್ತು ಗೃಹಸಚಿವರು, ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದಾಗ, ಮಾನ್ಯ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಬರುತ್ತಿರುವ ಟ್ರಾಕ್ಟರ್‌ಗಳನ್ನು ಒಳಗೆ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಿಡುತ್ತಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಸಹ ನನಗೆ ಹೇಳಿದರು. ಎಲ್ಲೋ ಒಂದು ಕಡೆ confusion ಆಗಿದೆ. We regret it.

**ಸಭಾಪತಿಯವರು:-** ಬಾವಿಯಲ್ಲಿರುವವರು ಮಾತನಾಡಬೇಡಿ.

**Sri J.C. MADHUSWAMY:** Police Commissionerate, D.G, A.D.G.P ರವರು ಸಭಾಧ್ಯಕ್ಷರಿಗೆ ಬರುವುದಿಲ್ಲ. ನಮ್ಮ ಗೌರವಾನ್ವಿತ ಗೃಹ ಸಚಿವರು ಮಾತನಾಡಿದರು. ಸದಸ್ಯರು ಯಾವುದೇ mode of transport ನಲ್ಲಿ ಬರಲಿ ನಿಮಗೆ ಏನು ತೊಂದರೆ ಎಂದು ಅವರನ್ನು ಪ್ರಶ್ನೆ ಮಾಡಿದಾಗ, ಸಾರ್, ಈ ಬಗ್ಗೆ ಸಭಾಧ್ಯಕ್ಷರು ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತಿದ್ದಾರೆ ಎಂದು ಹೇಳಿದರು. ಆಗ ನಾನು ಮುಖ್ಯಮಂತ್ರಿಗಳಿಗೆ ಪೋನ್ ಮಾಡಿ ಈ ಬಗ್ಗೆ ನೀವು ಒಂದು ನಿರ್ದೇಶನ ಕೊಡಿ ಎಂದು ಹೇಳಿದೆನು. ತಕ್ಷಣ ಮಾನ್ಯ ಮುಖ್ಯಮಂತ್ರಿಗಳು, ಇಲ್ಲ ನಾನು ಈಗಾಗಲೇ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಇರುವ ಟ್ರಾಕ್ಟರ್‌ಗಳನ್ನು ಬಿಡಿಸುತ್ತಿದ್ದೇನೆ ಎಂದು ಹೇಳಿದರು. ಇಲ್ಲಿ ಏನೋ ಸ್ವಲ್ಪ ಗಲಿಬಿಲಿ ಆಗಿದೆ. ಇದನ್ನು ತಮಗೆ ಅವಮಾನ ಮಾಡುವುದಕ್ಕೆ ಆಗಿದೆ ಎಂದು ದಯಮಾಡಿ ಬಾವಿಸಬಾರದು. ಇದನ್ನು ನಾವು ಮಾಡಿಸಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಪೊಲೀಸಿನವರಿಗೆ ಕೇಳಿ ನಮ್ಮನ್ನು ನೀವು ಒಳಗೆ ಬಿಡಿಸಬೇಕಾ? It is our inherent right to attend the session and to discuss the matter.

**Sri J.C. MADHUSWAMY:** The Leader of Opposition is right. This is accidental.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:-ಅದಕ್ಕೇನೂ ನಿಮ್ಮ ದಾಕ್ಷಿಣ್ಯ ಹಾಗೂ ನಿಮ್ಮ ಪರವಾನಗಿ ಪಡೆದು ನಾವು ಸದನಕ್ಕೆ ಬರಬೇಕಾ? We will respect the Chair. ನಾವೆಲ್ಲರೂ ಅವರ ಕಸ್ಟಡಿಯಲ್ಲಿ ಇದ್ದೇವೆ. The Hon. Chairman is our custodian. ಇಲ್ಲಿರುವ ಎಲ್ಲಾ ಸದಸ್ಯರ custodian ನೀವು. ನಮಗೆ ಸದನಕ್ಕೆ ಬರಲು ತೊಂದರೆ ಆಗಿದ್ದನ್ನು ತಮಗೆ inform ಮಾಡಿದ್ದೇವೆ. ಈಗ ನಮಗೆ ಪೊಲೀಸ್ ಅಧಿಕಾರಿಗಳು, under the instruction of A.D.G.P, Law and Order, ನಮ್ಮನ್ನು ಸದನಕ್ಕೆ ಬಾರದ ಹಾಗೆ ತಡೆದು ನಿಲ್ಲಿಸಿದ್ದಾರೆ. Such police officers must be punished. It should not happen again.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ನಾವು ಟ್ರಾಕ್ಟರ್‌ನಲ್ಲಿ ಬರುತ್ತಿದ್ದೇವೆ, ನಮಗೆ ಸೆಕ್ಯೂರಿಟಿ ಅರೇಂಜ್ ಮಾಡಿಕೊಡಿ ಎಂದು ನೀವು ಆದರೂ ನಮಗೆ ಒಂದು ಮಾತನ್ನು ಹೇಳಬಹುದಿತ್ತು, ನಮಗೆ ನೀವು ಹೇಳಿರಲಿಲ್ಲ. ನಮಗೆ ಹೇಳಿದ ತಕ್ಷಣ ನಾವು react ಮಾಡಿದ್ದೇವೆ.

**Sri B.K. HARIPRASAD:** It is failure of intelligence.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಎಸ್. ಆರ್. ಪಾಟೀಲ್**:- ನಿಮಗೆ ಹೇಳಲಿಕ್ಕೆ ನಮ್ಮನ್ನು ಒಳಗೆ ಬಿಟ್ಟರೆ ತಾನೇ? ಒಳಗೆ ಬಿಡಲಿಲ್ಲವೆಂದರೆ ನಾವು ಯಾರಿಗೆ ಹೇಳಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಇಂತಹ ಕಾರಣಗಳಿಗೆ ಸದನವನ್ನು stall ಮಾಡುತ್ತೀರಾ ಎಂದರೆ , ಇಂತಹ ಕಾರಣಗಳಿಗೆ ಆಗಿದೆ.

**ಶ್ರೀ ಎಸ್ ಆರ್ ಪಾಟೀಲ್:-** ಅವರು ನಮ್ಮನ್ನು ಒಳಗೆ ಬಿಡಲಿಲ್ಲವೆಂದರೆ ನಾವೇನು ಮಾಡೋಣ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಅವರು ಒಳಗೆ ಬಿಡಲಿಲ್ಲವೆನ್ನುವುದನ್ನು ನಾನು ಒಪ್ಪುತ್ತೇನೆ. ಅವರಿಂದ ತಪ್ಪಾಗಿದೆ. ನಾನು, ಗೃಹಸಚಿವರು ಮತ್ತು ಮುಖ್ಯಮಂತ್ರಿಗಳು ಸಹ ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದಾರೆ.

**ಶ್ರೀ ಎಸ್ ಆರ್ ಪಾಟೀಲ್**:- ನಮಗೆ ಮುಖ್ಯಮಂತ್ರಿಗಳು, ಗೃಹ ಸಚಿವರು ಅಷ್ಟಾಗಿ concern ಇಲ್ಲ. For us, our Chairman is much concerned.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಮಾನ್ಯ ಸಭಾಪತಿಗಳೇ, ನಮ್ಮ integrity ನಿಮಗೆ ಗೊತ್ತಿದೆ. ನಿಮ್ಮ ಎದುರಿಗೆ ಕುಳಿತುಕೊಂಡು ಇಷ್ಟೆಲ್ಲಾ ಕೆಲಸವನ್ನು ನಾವು ಮಾಡಿದ್ದೇವೆ. ಅವರಿಗೆ ಅವಮಾನ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಲ್ಲ. ಇದು ಆಕಸ್ಮಿಕವಾಗಿ ನಡೆದಿದೆ. ಸೆಕ್ಯೂರಿಟಿ ಅರೇಂಜ್‌ಮೆಂಟ್ಸ್‌ನಿಂದ ಕೆಲವು ಸಲ ಹೀಗೆ ಆಗುತ್ತದೆ. ಅದನ್ನು ಏಕೆ ದೊಡ್ಡದು ಮಾಡುತ್ತೀರಿ?

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೇ, ಅಲ್ಲಿರತಕ್ಕ ಅಧಿಕಾರಿಗಳಿಗೆ "ನೋಡಿ, it amounts to breach of privilege. ಮೇಲ್ಮನೆ ಮತ್ತು ಕೆಳಮನೆ ಸದಸ್ಯರು ನಾವುಗಳು ಅಧಿವೇಶನ ಕರೆದಿರುವುದರಿಂದ ಸದನಕ್ಕೆ ಹೋಗಬೇಕಾಗಿದೆ, ನೀವು ನಮ್ಮನ್ನು ನಿಲ್ಲಿಸಿದರೆ it amounts to breach of privilege" ಎಂದು ನಾನು ಕರೆದು ಹೇಳಿದೆನು. ಇದು ನೀವು ನಮಗೆ insult ಮಾಡುವುದು ಮಾತ್ರವಲ್ಲ, ಸಭಾಪತಿಯವರು ನಮ್ಮ custodian, ಇದರಿಂದ ಸಭಾಪತಿ ಮತ್ತು ಸಭಾಧ್ಯಕ್ಷರಿಗೆ ಅವಮಾನ ಮಾಡಿದಂತೆ. It amounts to breach of privilege. Actually, you have to move a motion for the breach of privilege. ಇದು ತಮಗೆ ಅವಮಾನ ಮಾಡಿದಂತೆ, ನಿಮಗೆ ಅವಮಾನ ಮಾಡಿದರೆ, ಅದು ನಮಗೆ ಅವಮಾನ ಆದಂತೆ. ನಾನು ಆ ಅಧಿಕಾರಿಗಳಿಗೆ "breach of privilege ಆದರೆ, you will go to the custody" ಎಂದು ಹೇಳಿದ್ದೇನೆ. I have told them straightaway. ಆ ಉದ್ಧಟತನದ ಅಧಿಕಾರಿಗಳ ಮೇಲೆ ತಾವು ಕ್ರಮ ಕೂಡ ಜರುಗಿಸಬೇಕಾಗುತ್ತದೆ. 3 ತಾಸು ನಮ್ಮನ್ನು ತಡೆದು ನಿಲ್ಲಿಸಿದ್ದರಿಂದ 3 ತಾಸು ಸದನ ನಡೆಯಲಿಲ್ಲ. ಅದರಿಂದ ಎಷ್ಟು ಬೊಕ್ಕಸಕ್ಕೆ ನಷ್ಟ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಆಗುತ್ತದೆ? ಅದನ್ನು ಸಹ ನಾನು ಅಧಿಕಾರಿಗಳಿಗೆ ಹೇಳಿದೆನು, ಪ್ರತಿ ನಿಮಿಷಕ್ಕೂ ಸಹ ರಾಜ್ಯದ ಬೊಕ್ಕಸದಿಂದ ಇಷ್ಟು ಹಣ ಖರ್ಚಾಗುತ್ತದೆ, ಎಂದು ಅಧಿಕಾರಿಗಳ ಜೊತೆ ಬಹಳ ಸುದೀರ್ಘವಾಗಿ ನಾನು ಮಾತನಾಡಿದ್ದೇನೆ.

**ಸಭಾಪತಿಯವರು:-** ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ ಈ ವಿಚಾರವನ್ನು ಗೋವಿಂದರಾಜ್‌ರವರು ನನ್ನ ಮುಂದೆಯೇ ಬಂದು ಹೇಳಿದರು, ತಕ್ಷಣ ಕಾನೂನು ಸಚಿವರು ಫೋನ್ ಮಾಡಿದರು,

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೇ, ಈ ಸರ್ಕಾರ ತಮ್ಮನ್ನು ಕತ್ತಲೆಯಲ್ಲಿಟ್ಟಿದೆ. They know everything. The Government knows everything. The police have been instructed to stop the opposition leaders either of the Lower House or the Upper House. ನಮ್ಮನ್ನು ಒಳಗೆ ಬಿಡಬೇಡಿ ಎಂದು ಹೇಳಿದ್ದಾರೆ. ನಾವು ಈ ಬಗ್ಗೆ ನಿಮ್ಮ ಬಗ್ಗೆ ಮಾತನಾಡಬೇಕಾಗಿದೆ. ಏಕೆಂದರೆ ನೀವು ನಮ್ಮ custodian.

**ಸಭಾಪತಿಯವರು:-** ನನಗೆ ಈ ವಿಚಾರವನ್ನು ಶ್ರೀ ಗೋವಿಂದರಾಜ್‌ರವರು ಬಂದು ಹೇಳಿದ ತಕ್ಷಣ ನಾನು ಈ ವಿಚಾರವನ್ನು ಕಾನೂನು ಸಚಿವರಿಗೆ, ಕಾರಜೋಳರವರಿಗೆ ಮತ್ತು ಗೃಹ ಸಚಿವರಿಗೆ ತಿಳಿಸಿದೆನು. ಕಾನೂನು ಸಚಿವರು ಸ್ಥಳಕ್ಕೆ ಬರಲು ಹೊರಟಿದ್ದರು, ಅಷ್ಟರಲ್ಲಿ ಕಾರಜೋಳರವರು ಬಿಟ್ಟಿದ್ದಾರೆ ಎಂದು ತಿಳಿಸಿದ್ದರಿಂದ ಸುಮ್ಮನಾದರು. ಅವರು ಜಿಲ್ಲಾ ಉಸ್ತುವಾರಿ ಸಚಿವರು. ನಮ್ಮ ಜನರನ್ನು ಬಿಡಿ ಎಂದು ನಾವು ಅಧಿಕಾರಿಗಳಿಗೆ ತಿಳಿಸಿದ್ದೆವು.

**ಶ್ರೀ ಎಸ್. ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೇ, you are supreme. You are our custodian. ನಮಗೆ ಏನಾದರೂ ಆದರೆ ಅದರ ಜವಾಬ್ದಾರಿ ನಿಮ್ಮದು. ಮೇಲ್ಮನೆ ಶಾಸಕರು ಅಧಿವೇಶನಕ್ಕೆ ಬಂದು ಕಲಾಪದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲವೆಂದರೆ ಯಾರು prevent ಮಾಡಿದ್ದಾರೆ ಅವರ ಮೇಲೆ ನೀವು ತತಕ್ಷಣ ನಿಮ್ಮ ಅಧಿಕಾರವನ್ನು ಚಲಾಯಿಸಿ.

(ಮುಂದು)

(119) 01.40 16-12-2021 LM(CS)-RN

**Sri S.R.PATIL (Contd..,):**
You take stringent action on such a guilty officer. They should be punished very severely.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
---

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೆ, ನೀವೇ ಸದನ order ನಲ್ಲಿ ಇಲ್ಲ ಎಂದು ಹೇಳಿದ್ದೀರಿ, ನಾನು ತಮಗೆಲ್ಲರಿಗೂ ಮಾತನಾಡಲಿಕ್ಕೂ ಅವಕಾಶ ನೀಡಿದ್ದೇನೆ. ತಮ್ಮ ಸದಸ್ಯರೆಲ್ಲರನ್ನೂ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ನೀವು ಅವರಿಗೆ ಹೇಳಿ.

**ಶ್ರೀ ಎಸ್. ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೇ, ಅದರ ಬಗ್ಗೆ ಎರಡು ಮಾತಿಲ್ಲ. ನಿನ್ನೆ ಎಲ್ಲಾ ಚರ್ಚೆ ನಡೆದಿದೆ. ತಾವು ಕೂಡ ರೂಲಿಂಗ್ ನೀಡಿದ್ದೀರಿ. ನಾವು ಈ ಸದನದ ಬಾವಿಯಲ್ಲಿ ತಮ್ಮ ruling against ಬಂದಿಲ್ಲ. ದಯಮಾಡಿ ತಪ್ಪು ಸಂದೇಶ ಹೋಗಬಾರದು. ಅದು ಏನಾಗಿದೆ ಎಂದರೆ ನೈತಿಕ ಜವಾಬ್ದಾರಿಯನ್ನು ಹೊತ್ತು ಸಂಬಂಧಪಟ್ಟ ಸಚಿವರು when he is facing... ಅದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಜಾರ್ಜ್‌ರವರು ಗೃಹ ಸಚಿವರಾಗಿದ್ದರು.

**ಸಭಾಪತಿಯವರು:-** ಈಗ ಚರ್ಚೆ ಬೇಡ.

**ಶ್ರೀ ಎಸ್. ಆರ್. ಪಾಟೀಲ್:-** ನಾನು ಚರ್ಚೆಯನ್ನು ಮಾಡುತ್ತಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಚರ್ಚೆ ಬೇಡ ಎಂದು ಇಲ್ಲಿ ಚರ್ಚೆಯನ್ನೇ ಪ್ರಾರಂಭ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೆ, ಒಂದೊಂದು ದಿವಸಕ್ಕೆ ಒಂದೊಂದು ಕಾನೂನು ಮಾಡುವುದು ಬೇಡ. ಇಲ್ಲಿ ಎಲ್ಲರಿಗೂ ಸಹ ಒಂದೇ ಕಾನೂನು. ನೀವು ಇದ್ದಾಗ ಒಂದು ಕಾನೂನು ನಾವು ಬಂದಾಗ ಒಂದು ಕಾನೂನು ಆಗುವುದಿಲ್ಲ. **(ಗೊಂದಲ)** ನೀವು ಇದ್ದಾಗ ಏನು ಮಾಡಿದ್ದೀರಿ ಎನ್ನುವುದು ಸದನದಲ್ಲಿ ಎಲ್ಲಾ ಚರ್ಚೆ ಆಗಲಿ.

**(ಗೊಂದಲ)**

**ಸಭಾಪತಿಯವರು:-** ನಾರಾಯಣಸ್ವಾಮಿಯವರೆ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದು ಇಡೀ ಸದನದ ಸಮಯ. ಅವರೊಬ್ಬರ personal gain ಗಾಗಿ ಮಾತನಾಡುವುದು ಸರಿಯೇ?

**(ಗೊಂದಲ)**

**Sri M.NARAYANASWAMY:** Sir, immediately they have to sack him and come back.

**ಸಭಾಪತಿಯವರು:-** ನಾರಾಯಣಸ್ವಾಮಿಯವರೆ, ಕುಳಿತುಕೊಳ್ಳಿ.

**( ಈ ಹಂತದಲ್ಲಿ ಬಾವಿಯಲ್ಲಿದ್ದ ಮಾನ್ಯ ಸದಸ್ಯರಾದ ಶ್ರೀ ನಸೀರ್ ಅಹಮದ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ನಸೀರ್ ಅಹಮದ್**:- ಮಾನ್ಯ ಸಭಾಪತಿಗಳೇ, ಗಣಪತಿ ಪ್ರಕರಣದಲ್ಲಿ ಏನೇನು ನಡೆಯಿತು, ಮುಖ್ಯಮಂತ್ರಿಗಳು ಏನೇನು ಮಾತನಾಡಿದರು ಎನ್ನುವುದು ಇಲ್ಲಿ ದಾಖಲೆ ಇದೆ.

**ಸಭಾಪತಿಯವರು:-** ನೀವು ಕುಳಿತುಕೊಳ್ಳಿ. ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಸೂಚನೆ ಮೇರೆಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು**:- ಒಬ್ಬೊಬ್ಬರು ಮಾತನಾಡಿ.

**(ಗೊಂದಲ)**

**ಸಭಾಪತಿಯವರು**:- ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಸೂಚನೆ ಮೇರೆಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೇ, ಸದನ ಸರಿಯಾಗಿ ನಡೆಯುವುದಕ್ಕೆ ಅವರೇ ಮುತುವರ್ಜಿ ವಹಿಸಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಸದನ ಸರಿಯಾಗಿ ನಡೆಯಬೇಕೆಂಬ ಭಾವನೆ ನಿಮಗೆ ಇದೆಯೇ ಎಂದು ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ.

**ಶ್ರೀ ಎಸ್. ಆರ್. ಪಾಟೀಲ್**:- 200 ಪರ್ಸೆಂಟ್ ಇದೆ. ನಾನು ಹುಟ್ಟಿನಿಂದ ಇಲ್ಲಿಯವರೆಗೂ ನಾನು ಎಂದಿಗೂ ಸಹ ನನ್ನ conscious ವಿರುದ್ಧ ನಡೆದುಕೊಂಡಿರುವುದಿಲ್ಲ. ಬೇಕಾದ್ದು ಇರಲಿ. I am ready to pay penalty.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೆ, ನಮ್ಮನ್ನು ಕ್ಷಮಿಸಿ ಬಿಡಿ. ಇದಕ್ಕೆ full stop ಹಾಕಿ. ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ. ವಿನಾಕಾರಣ ಈ ಸದನದ ಸಮಯ ಹಾಳಾಗುತ್ತಿದೆ.

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೇ, ತಪ್ಪು ಸಂದೇಶ ಹೋಗಬಾರದು. ತಾವು ಒಂದು ರೂಲಿಂಗನ್ನು ನೀಡಿದ್ದೀರಿ. ತಮ್ಮ ಪೀಠಕ್ಕೆ ನಾವು ಅಪಾರವಾದ ಗೌರವವನ್ನು ನೀಡುತ್ತೇವೆ. ನಿಮ್ಮ ಬಗ್ಗೆ ಸಹ ನಮಗೆ ಅಪಾರವಾದ ಗೌರವ ಇದೆ. ನಿಮ್ಮ length of service ನಮಗೆ ಗೊತ್ತಿದೆ. ಎಷ್ಟು ಸುದೀರ್ಘ ಅವಧಿಗೆ ನೀವು ಮೇಲ್ಮನೆ ಸದಸ್ಯರಾಗಿದ್ದೀರಿ, ದೇಶದಲ್ಲಿಯೇ ಸೀನಿಯರ್. ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ವಿಶೇಷವಾಗಿ ಪೀಠದ ಬಗ್ಗೆ ಕೂಡ ನಮಗೆ ಗೌರವವಿದೆ. ಪೀಠದ ನಿರ್ಣಯವನ್ನು ಧಿಕ್ಕರಿಸಿ ನಾವು ಬಾವಿಗೆ ಎಂಟ್ರಿ ಆಗಿರಲಿಲ್ಲ. ಇಲ್ಲಿ ನೈತಿಕತೆಯ ಪ್ರಶ್ನೆ ಇದೆ. Owing to the moral responsibility, ಯಾರು ಆರೋಪವನ್ನು ಎದುರಿಸುತ್ತಾರೋ, ಅಂತಹ ಮಂತ್ರಿಗಳು ರಾಜಿನಾಮೆಯನ್ನುಕೊಡಬೇಕೆನ್ನುವ ಸಲುವಾಗಿ ಸರ್ಕಾರದ ಮೇಲೆ ಒತ್ತಡ ತಂದು ಮುಖ್ಯಮಂತ್ರಿಗಳ ಗಮನಕ್ಕೆ ಅದನ್ನು ತರಬೇಕೆಂದು ನಾವು ಮಾತನಾಡುತ್ತಿದ್ದೇವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೇ, ಈ ವಿಚಾರ ಮಾತನಾಡಲ್ಲ ಎಂದು ಹೇಳಿದ್ದರು. ಈಗ ಅದನ್ನೇ ಮಾತನಾಡುತ್ತಿದ್ದಾರೆ.

**ಶ್ರೀ ಎಸ್. ಆರ್. ಪಾಟೀಲ್:-**ಮಾನ್ಯ ಸಭಾಪತಿಗಳೇ, ಅವರು ಹೇಳಿದಂತೆ ನಾವು ಮಾತನಾಡಬೇಕೇ? ಈ ಸದನವನ್ನು ಅವರು ನಡೆಸುತ್ತಿದ್ದಾರೋ? ನೀವು ನಡೆಸುತ್ತಿದ್ದೀರೋ? Sir you have to give them instructions.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ಈ ಸದನವನ್ನು ನಾವು ನಡೆಸುತ್ತಿಲ್ಲ. ನೀವು ನಡೆಸುತ್ತಿದ್ದೀರಿ.

**ಶ್ರೀ ಎಸ್. ಆರ್. ಪಾಟೀಲ್**:- ಮಾನ್ಯ ಸಭಾಪತಿಗಳೇ, He may be Law & Parliamentary Affairs Minister or anybody, ನೀವು ಅವರಿಗೆ ತಿಳಿಹೇಳಬೇಕು.

**Sri J.C.MADHUSWAMY:** No. The Leader of Opposition....

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್**:-ಮಾನ್ಯ ಸಭಾಪತಿಗಳೇ, ನಾವು ಮಾತನಾಡುವುದಕ್ಕೆ ಅಡ್ಡಿಪಡಿಸುತ್ತಾರೆಂದರೆ ಹೇಗೆ? ಆ ವಿಚಾರವನ್ನು ನಾನು ಪುನಃ ಹೇಳುವುದಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ, ನಿಮ್ಮ ನಿರ್ಣಯಕ್ಕೆ ವಿರುದ್ಧವಾಗಿಯಾಗಲಿ, ನಿಮ್ಮ ನಿರ್ಣಯಕ್ಕೆ ವ್ಯತಿರಿಕ್ತವಾಗಿಯಾಗಲಿ ನಮ್ಮ ಪಕ್ಷದ ಸದಸ್ಯರು ಬಾವಿಯಲ್ಲಿದ್ದಾರೆ ಎನ್ನುವುದು ಶುದ್ಧ ತಪ್ಪು. ಒಬ್ಬ ಸಚಿವರ ಮೇಲೆ ಗುರುತರವಾದ ಅಪಾದನೆ ಇದ್ದಾಗ, ಅವರಿಂದ ರಾಜಿನಾಮೆ ಕೊಡಿಸುವುದಕ್ಕೆ ಗೌರವಾನ್ವಿತ ಮುಖ್ಯಮಂತ್ರಿಗಳ ಗಮನಕ್ಕೆ ತರುವ ಸಲುವಾಗಿ ಬಾವಿಯಲ್ಲಿದ್ದಾರೆ. Adjournment Motion under Rule.59 has been rejected by you. ಹೀಗಾಗಿ ಅದರ ಮೇಲೆ ನಾವು ಚರ್ಚೆಯನ್ನು ಮಾಡಲು ಅವಕಾಶವೇ ಇಲ್ಲ. ಈ ಘಟನೆ ಬಗ್ಗೆ Metropolitan Magistrate cognizance ತೆಗೆದುಕೊಂಡ ಬಗ್ಗೆ ಗೌರವಾನ್ವಿತ ಮುಖ್ಯಮಂತ್ರಿಗಳ ಗಮನಕ್ಕೆ ಅದನ್ನು ತರಲಿ. Hon'ble Chief Minister has got a prerogative power. ಮಂತ್ರಿಮಂಡಲದಲ್ಲಿ ಯಾರನ್ನು ಇಟ್ಟುಕೊಳ್ಳಬೇಕು, ಯಾರನ್ನು ಬಿಡಬೇಕು ಎನ್ನುವ ಸಂವಿಧಾನಾತ್ಮಕ ಹಕ್ಕು ಅವರಿಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಎಸ್. ಆರ್. ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿ ನಮಗೆಲ್ಲರಿಗೂ ಮಾರ್ಗ ದರ್ಶನ ಮಾಡಿದವರು.

**ಶ್ರೀ ಎಸ್. ಆರ್. ಪಾಟೀಲ್**:-ಮಾನ್ಯ ಸಭಾಪತಿಗಳೇ, ಇವರಿಗೆ ಇತ್ಯರ್ಥ ಮಾಡುವುದು ಬೇಕೋ ಬೇಡವೋ? I am very doubtful. ನಮ್ಮ ಉತ್ತರ ಕರ್ನಾಟಕದಲ್ಲಿ ಅಧಿವೇಶನದಲ್ಲಿ ಕಲಾಪ ನಡೆಯಬಾರದು , ಇಲ್ಲಿನ ಸಮಸ್ಯೆಗಳು ಹಾಗೆಯೇ ಇರಬೇಕು, Regional Imbalance ಹೀಗೆಯೇ ಮುಂದುವರೆಯಬೇಕು ಎನ್ನುವ ಉದ್ದೇಶ ಇವರಿಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ರಾಜಕೀಯ ಅನುಭವ ಇದೆ.

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೇ, ಸಭಾನಾಯಕರು ಸಂಜೆಯವರೆಗೆ ಮಾತನಾಡಲಿ. ನಾನು ಇಲ್ಲಿ ಒಂದು ಪಾಯಿಂಟ್ ಅನ್ನು ಕ್ಲಾರಿಫೈ ಮಾಡಬೇಕಾಗಿದೆ. ಮಾನ್ಯ ಜಾರ್ಜ್‌ರವರ ಮೇಲೂ ಇಂತಹ ಒಂದು ಕೇಸ್ ಆಯಿತು. Private Complaint ಆಯಿತು, ಸಮನ್ಸ್ ಇಶ್ಯೂ ಮಾಡಿದರು. ಆಗ ಅವರು ರಾಜಿನಾಮೆಯನ್ನು ನೀಡಿದರು. ಇಲ್ಲಿ ಒಬ್ಬ ಸಚಿವರು ಅದೇ ರೀತಿಯ ಆರೋಪವನ್ನು ಎದುರಿಸುತ್ತಿದ್ದಾರೆ. . . .

**(ಗೊಂದಲ)**

**ಸಭಾಪತಿಯವರು**:- ಈಗ ನನ್ನ ಮುಂದೆ ಆ ವಿಚಾರ ಇಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೇ, ನಿನ್ನೆಯ ದಿವಸ ತಮ್ಮ ಛೇಂಬರ್‌ನಲ್ಲಿ ಮಾತನಾಡಿದ ವಿಚಾರಕ್ಕೆ ನಾವು ಬದ್ಧರಾಗಿದ್ದೇವೆ. ಒಬ್ಬ ಕಾನೂನು ಸಚಿವನಾಗಿ ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು, ನಿಮ್ಮ ಬೇಡಿಕೆ ಏನಿದೆ, ಅದನ್ನು ಅಲ್ಲಿ conclude ಮಾಡುತ್ತೇನೆಂದು ನಾನು ಅವರಿಗೆ ಮಾತನ್ನು ನೀಡಿದ್ದೇನೆ. ಈಗ ಮುಖ್ಯಮಂತ್ರಿಗಳೇ ಸದನದಲ್ಲಿದ್ದಾರೆ, ನಿನ್ನೆಯೇ ಈ ವಿಚಾರವನ್ನು ಅವರ ಗಮನಕ್ಕೆ ತರಲಾಗಿದೆ.

***ಶ್ರೀ ಎಸ್. ಆರ್. ಪಾಟೀಲ್***.-ನಿಮಗೆ ಏಕೆ offend ಆಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನಮಗೆ ಗೊತ್ತಿಲ್ಲ, ನಾವು ಅದು sort out ಆಗಿದೆ ಎಂದು ಕುಳಿತಿದ್ದೇವೆ. Yes Sir, it is our commitment. ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಪರಿಶೀಲನೆ ಮಾಡುತ್ತಾರೆ.

**ಸಭಾಪತಿಯವರು:-** ನಿನ್ನೆಯ ದಿವಸ ನಾವು ಮಾತನಾಡಿದಂತೆ, ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದು, ಅಂದರೆ ಕಾನೂನು ಸಚಿವರು ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕೆಂದು ಹೇಳಲಾಗಿತ್ತು. ಅದನ್ನು ಎಲ್ಲರೂ ಒಪ್ಪಿಕೊಂಡು ಈ ಸದನ ನಡೆಸುವುದಕ್ಕೆ ಪ್ರಾರಂಭಿಸಿದೆವು. ಈಗ ಹೊಸ development ಏನೆಂದರೆ ಅದರ ಬಗ್ಗೆ ತಡವಾಯಿತು...

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೇ, ನಾವು ಈ ಸದನಕ್ಕೆ ಬರುವುದಕ್ಕೆ ಏಕೆ ತಡ ಆಗಿದೆ ಎಂದು ಆಗಲೇ ಹೇಳಿದ್ದೇನೆ. ತಮ್ಮನ್ನು ಧಿಕ್ಕರಿಸಿ, ನಿಮಗೆ ಅವಮಾನ ಮಾಡಿ, ನಿಮ್ಮನ್ನು ಗಣನೆಗೆ ತೆಗೆದುಕೊಳ್ಳದೇ ಈ ರಾಜ್ಯದ ಪೊಲೀಸರು ನಮ್ಮನ್ನು ಹೊರಗೆ ನಿಲ್ಲಿಸಿದ್ದರು.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೆ, ನಮ್ಮ ಮಾತನ್ನು ಕೇಳದಿದ್ದರೆ ನಾನೇನು ಮಾಡುವುದು? ಇದೊಂದು ಹೊಸ development ಆಗಿ, ಈಗ ಈ ವಿಚಾರ ಇಲ್ಲಿ ಬಂದಿದೆ. ಆದರೆ ನಿನ್ನೆಯ ವಿಚಾರಕ್ಕೆ ಸರ್ಕಾರ ಬದ್ಧವಾಗಿದೆ, ಸರ್ಕಾರ ಒಪ್ಪಿಕೊಂಡಿದೆ. ಅದರ ಪ್ರಕಾರ ನೀವು ನಡೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಸರ್ಕಾರ ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರೆಲ್ಲರೂ ತಮ್ಮ ಸ್ಥಾನಗಳಿಗೆ ತೆರಳಬೇಕು.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1120)16-12-2021(01-50)bsd-rn

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, whatever we speak, we will never eat our words. ನಾವು ಬಸವಣ್ಣನವರ ನಾಡಿನವರಾಗಿ ನುಡಿದಂತೆ ನಡೆಯುವವರಾಗಿದ್ದೇವೆ. ನಾವು ನುಡಿಯುವುದೊಂದು ಮಾಡುವುದೊಂದು ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಹೇಳಬೇಕು. ನಡೆ-ನುಡಿ ನಮ್ಮದ್ದು ಒಂದೇ ಆಗಿದೆ.

**(ಗೊಂದಲ)**

**Sri B.K.HARIPRASAD:-** Sir, I am on a Point of Order.

**ಸಭಾಪತಿಯವರು:-** ಬಾವಿಯಲ್ಲಿ ಇರುವವರು ಹೊರಗೆ ಬನ್ನಿ. House is not in order.

**Sri J.C.MADHUSWAMY:-** When House is not in order how can a Point of Order raised?

**Sri B.K.HARIPRASAD:-** When House was not in order how can a Law Minister make a statement and how did you suspend us?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಅದು ನನಗೆ ಗೊತ್ತಿಲ್ಲ. ಈಗ ಹೌಸ್ ಆರ್ಡರ್‌ನಲ್ಲಿಲ್ಲ.

**(ಗೊಂದಲ)**

**Sri B.K.HARIPRASAD:-** No Sir, you are making statement when House is not in order.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನಾನು ಕಾನೂನು ಸಚಿವನಾಗಿ ಮಾತನಾಡಲು ಪ್ರಾರಂಭಿಸಿದಾಗ ಒಂದು ಮಾತನ್ನು ಹೇಳಿದ್ದೇನೆ, I regret for moving that resolution ಎಂದು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾನು ಆ ವಿಚಾರಕ್ಕೆ ಬರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಅವರು ಹೇಳಲಿ, let him express regret for that.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಆ resolution move ಮಾಡುವ ಸ್ಥಿತಿಗೆ regret ಮಾಡಿದ್ದೇವೆ ಎಂದು ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. House was not in order we should not have moved it. It should have been discussed. Yes, I have committed. ನಾನು ಹಿಂದಕ್ಕೆ ಹೋಗುವುದಿಲ್ಲ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿನ್ನೆಯೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಅದಕ್ಕೆ ನಾವು ಮಾನ್ಯ ಸಭಾಪತಿಯವರ ಕಛೇರಿಯಲ್ಲಿ ಕುಳಿತು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಕರ್ನಾಟಕ ರಾಜ್ಯದ ಶತಮಾನದ ಇತಿಹಾಸದಲ್ಲಿ ಪ್ರತಿಪಕ್ಷದ ನಾಯಕರನ್ನು ಸದನದಿಂದ ಸಸ್ಪೆಂಡ್ ಮಾಡಿದ್ದು ಕಪ್ಪುಚುಕ್ಕೆಯಾಗಿದೆ. It is disgrace to this Government. It is disgrace to the Hon'ble Bommayi Government.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಅದು ಏನೋ, ಆಯಿತು, ಅದನ್ನು ಬಿಟ್ಟುಬಿಡಲಿ. ನಾವೆಲ್ಲರೂ ದಿವಸವೆಲ್ಲಾ ಕುಳಿತು ಚರ್ಚೆ ಮಾಡಿದ್ದೇವಲ್ಲವೇ? ಅದಕ್ಕೆ ಮಾನ್ಯ ಬಸವರಾಜ ಬೊಮ್ಮಾಯಿರವರು ಏನು ಮಾಡುತ್ತಾರೆ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರವಾಗಿ ಮಾಡಲಿಲ್ಲ, ಎರ್ರಿಬಿರ್ರಿಯಾಗಿ ಮಾನ್ಯ ಸಭಾನಾಯಕರು ಮಂಡನೆ ಮಾಡಿಬಿಟ್ಟರು, ಇನ್ನೊಬ್ಬರು second ಮಾಡಿಬಿಟ್ಟರು, ಅವರು ಕೂಡ ಆತುರವಾಗಿ ತೆಗೆದುಕೊಂಡರು. ನಮಗೆ notice serve ಮಾಡಲಿಲ್ಲ. ಏನೂ ಮಾಡಲಿಲ್ಲ. ಆ ರೀತಿ ಮಾಡಿದ್ದು ಸರಿಯೇ?

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಬಸವರಾಜ ಬೊಮ್ಮಾಯಿಯವರ ಸರ್ಕಾರಕ್ಕೂ ಇದಕ್ಕೂ ಸಂಬಂಧ ಇಲ್ಲ. ಅದು ಪೀಠ ಕೊಟ್ಟ ಆದೇಶ.

**ಶ್ರೀ ಎಸ್.ಆರ್.ಪಾಟೀಲ್:-** ಯಾರಿಗೂ ಸಂಬಂಧ ಇಲ್ಲ ಅಂದುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಅವರು ಯಾರು ಏನೇ ಮಾಡಿದರೂ ಸರ್ಕಾರ ಮಾಡಿದಂತೆ ಆಗುವುದು.

**(ಗೊಂದಲ)**

**ಡಾ|| ತೇಜಸ್ವಿನಿಗೌಡ:-** ಸಭಾಪತಿಯವರ ಪೀಠಕ್ಕೆ ಯಾವ ರೀತಿ ಅಪಮಾನ ಮಾಡಿದ್ದಾರೆ.....

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(ಗೊಂದಲ)**

**Sri S.R.PATIL:** It is a shameful act on the part of this Government. ಅದರಲ್ಲೂ ಪ್ರತಿಪಕ್ಷದ ನಾಯಕರನ್ನು ಸಸ್ಪೆಂಡ್ ಮಾಡುತ್ತಾರೆಂದರೆ,...ಇದರಂತಹ shameful act ಅನ್ನು ನೋಡಿಲ್ಲ, ನಾನು ೨೪ ವರ್ಷ ಮೇಲ್ಮನೆ ಸದಸ್ಯನಾಗಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಪೀಠದ ಆದೇಶವನ್ನು ........ ಆಗ ಸುಮ್ಮನೆ ಇರಬೇಕೆ?

**ಶ್ರೀ ಎಸ್.ಆರ್.ಪಾಟೀಲ್:-** ೨೪ ವರ್ಷಗಳಲ್ಲಿ ಇಂತಹ ಘಟನೆ ನೋಡಿಲ್ಲ, ಈ ಶತಮಾನದ ಇತಿಹಾಸ ಇರುವಂತಹ ಈ ಮೇಲ್ಮನೆಯಲ್ಲಿ ಕಪ್ಪುಚುಕ್ಕೆಯಾಗುವ ಘಟನೆ ನಡೆದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇತಿಹಾಸದಲ್ಲಿ ಪೀಠದ ಆದೇಶವನ್ನು ಪ್ರಶ್ನೆ ಮಾಡಿ ಬಾವಿಗೆ ಇಳಿದ ಉದಾಹರಣೆ ಇಲ್ಲ, ಪೀಠದ ಆದೇಶವನ್ನು ವಿರೋಧ ಮಾಡಿಲ್ಲ, ಅಂತಹ ಸಂದರ್ಭದಲ್ಲಿ ಸುಮ್ಮನಿರಬೇಕೆ? ಪೀಠದ ಗೌರವವನ್ನು ಕಾಪಾಡಬೇಕಾದ್ದು ಸರ್ಕಾರದ ಜವಾಬ್ದಾರಿ.

**Sri S.R.PATIL:-** It is nothing but a murder of democracy. ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳಬೇಕಾಗುತ್ತದೆ. ಈಗ ಮಾನ್ಯ ಮಾಧುಸ್ವಾಮಿರವರು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ ಎಂದು commit ಮಾಡಿಕೊಂಡಿದ್ದಾರೆ. ಅವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದು, ನಮಗೆ ಮಾನ್ಯ ಮುಖ್ಯಮಂತ್ರಿಯವರ ಮೇಲೆ ನಂಬಿಕೆ, ವಿಶ್ವಾಸ ಇದೆ. ನಿಶ್ಚಿತವಾಗಿ ಅವರಿಗೆ prerogative power and constitutional ಹಕ್ಕು ಇದೆ. ಯಾರನ್ನು ಇಟ್ಟುಕೊಳ್ಳಬೇಕು, ಯಾರನ್ನು ತೆಗೆಯಬೇಕು, ಯಾರಿಗೆ ಯಾವ portfolio ಕೊಡಬೇಕು, ಏನು ಬದಲಾವಣೆ ಮಾಡಬೇಕು ಎನ್ನುವ ಸಂವಿಧಾನದತ್ತವಾದ ಹಕ್ಕು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಇದೆ. ನಮಗೆ ವಿಶ್ವಾಸ ಇದೆ. ಆ ದೃಷ್ಟಿಯಿಂದ ಯಾವುದೇ ಸ್ಥಿತಿಯಲ್ಲಿ ಪೀಠದ ನಿರ್ಣಯದ ವಿರುದ್ಧ ಬಾವಿಗೆ ಪ್ರವೇಶ ಮಾಡಿಲ್ಲ. ಈ ಸರ್ಕಾರ ನೈತಿಕತೆಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ಸರ್ಕಾರದಲ್ಲಿ ಒಬ್ಬ ಮಂತ್ರಿ ಕ್ರಿಮಿನಲ್ ಅಫೆನ್ಸ್ ಎದುರಿಸುವ ಸಂದರ್ಭದಲ್ಲಿ ನಾಳೆ Accused Dock ಗೆ ಹೋಗಿ ನಿಲ್ಲುವುದನ್ನು ತಪ್ಪಿಸಬೇಕು ಎನ್ನುವ ಸಲುವಾಗಿ ಆ ವಿಚಾರವನ್ನು highlight ಮಾಡುವುದಕ್ಕೆ ನಮ್ಮ ಸದಸ್ಯರು ಬಾವಿಗೆ ಹೋಗಿದ್ದಾರೆ. ಅದಕ್ಕೆ ನಾವು...we will agree by your commitment.

**ಸಭಾಪತಿಯವರು:-** ನಿನ್ನೆ ಮಾತನಾಡಿದಂತೆ ಸರ್ಕಾರವು ಅವರ ಭಾವನೆಗಳಿಗೆ ಒಪ್ಪಿಕೊಂಡಿದ್ದು, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಾಗಿ ಹೇಳಿದ್ದಾರೆ. ದಯಮಾಡಿ

ವಿರೋಧ ಪಕ್ಷದ ನಾಯಕರು, ಸಭಾನಾಯಕರು ಬನ್ನಿ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು 01ಗಂಟೆ 54 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಭೋಜನ ವಿರಾಮದ ನಂತರ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)**

1121/16-12-2021 3-30/bkp-bns

**(ಮಧ್ಯಾಹ್ನ 1 ಗಂಟೆ 54 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**( ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಯಲ್ಲಿ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:-** ಈಗ ವಿರೋಧ ಪಕ್ಷದ ನಾಯಕರೇ, ತಮ್ಮ ಸದಸ್ಯರುಗಳಿಗೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳುವಂತೆ ಸೂಚಿಸುವುದರ ಮೂಲಕ ಸದನ ನಡೆಸಲಿಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಎರಡೂವರೆ ವರ್ಷಗಳ ನಂತರ ಅಪರೂಪಕ್ಕೆ ರಾಜ್ಯದ ಎರಡನೆಯ ರಾಜಧಾನಿ ಎನಿಸಿಕೊಳ್ಳುವಂತಹ ಕಿತ್ತೂರು ಕರ್ನಾಟಕದ ಬೆಳಗಾವಿಯಲ್ಲಿ ಅಧಿವೇಶನ ನಡೆಯುವುದರಿಂದ ಈ ಭಾಗದ ಅನೇಕ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕಾಗಿದೆ. ಸದನದ ಸಮಯವನ್ನು ಹಾಳು ಮಾಡುವುದಕ್ಕೆ ನಮಗೆ ಯಾರಿಗೂ ಇಷ್ಟವಿಲ್ಲ. ನಿನ್ನೆ ನಡೆದಂತಹ ವಿಚಾರದ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಉತ್ತರ ಕರ್ನಾಟಕದ ಜನತೆಯ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಆ ಸಮಸ್ಯೆಗಳಿಗೆ ನೀಡಬಹುದಾಗಿರುವ ಪರಿಹಾರಗಳ ಬಗ್ಗೆ ಬೆಳಕು ಚೆಲ್ಲುವಂತಹ ಚರ್ಚೆಗಳು ನಡೆಯಲಿ ಎನ್ನುವ ಸದುದ್ದೇಶದಿಂದ ನಾವು ನಿನ್ನೆ ನಡೆದಂತಹ ಘಟನೆಯ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡೋಣ, ಇವತ್ತು ನಾನು ನನ್ನ ಪಕ್ಷದ ಎಲ್ಲ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವೆಲ್ಲರೂ ತಮ್ಮತಮ್ಮ ಸ್ಥಾನಗಳಿಗೆ ಮರಳಿ ಬಂದು ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಮರಳಿದರು)**

## 2. <u>ಸಂತಾಪ ಸೂಚನೆ</u>

**ವಿಷಯ: ಭಾರತದ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ನಿಧನದ ಬಗ್ಗೆ.**

----

**ಸಭಾಪತಿಯವರು:-** ದಿನಾಂಕ:08.12.2021ರಂದು ಕುನ್ನೂರು ಕಾನನದಲ್ಲಿ ಘಟಿಸಿದ ದುರಂತದಲ್ಲಿ ಗಾಯಗೊಂಡು ಬದುಕುಳಿದಿದ್ದ ಭಾರತದ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ದಿನಾಂಕ:15.12.2021ರಂದು ನಿಧನ ಹೊಂದಿರುತ್ತಾರೆ.

ಉತ್ತರ ಪ್ರದೇಶದ ಕನೋಳಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಪದವಿ ಪೂರ್ವ ಶಿಕ್ಷಣವನ್ನು ಚಂಡೀಘಡ್‌ನಲ್ಲಿ ಪೂರೈಸಿದ ನಂತರ 2004ರಲ್ಲಿ ಎನ್.ಡಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದರ ಮೂಲಕ ಟೆಸ್ಟ್ ಪೈಲಟ್ ಆಗಿ ವಾಯುಪಡೆಗೆ ನೇಮಕಗೊಂಡಿದ್ದ ಇವರು 2017ರಲ್ಲಿ ವಿಂಗ್ ಕಮಾಂಡರ್ ಆಗಿ, ತಮಿಳುನಾಡಿನ ಡಿಫೆನ್ಸ್ ಸರ್ವೀಸ್ ಸ್ಟಾಫ್ ಕಾಲೇಜಿನಲ್ಲಿ ಡೈರೆಕ್ಟಿಂಗ್ ಸ್ಟಾಫ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ದೇಶಕ್ಕೆ ಹೆಮ್ಮೆಯ, ಶೌರ್ಯದ ಮತ್ತು ಪರಮೋನ್ನತ ವೃತ್ತಿಪರತೆಯ ಸೇವೆ ಸಲ್ಲಿಸಿದ್ದ ಶ್ರೀಯುತರು ಶೌರ್ಯ ಚಕ್ರ ಪ್ರಶಸ್ತಿಗೆ ಭಾಜನರಾಗಿದ್ದರು. ಹೆಲಿಕಾಪ್ಟರ್ ದುರಂತದಲ್ಲಿ ಬದುಕುಳಿದಿದ್ದ ಏಕೈಕ ವೀರ ಯೋಧ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಚಿಕಿತ್ಸೆ ಫಲಕಾರಿಯಾಗದೇ ನಿಧನ ಹೊಂದಿರುವುದು ದು:ಖಕರ ಸಂಗತಿಯಾಗಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಹಿರಿಯ ವೀರ ಯೋಧರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮೂರು ವಿಭಾಗಗಳ ಕಮಾಂಡರ್ ಆದ ಸನ್ಮಾನ್ಯ ರಾವತ್‌ರವರು ಪ್ರಯಾಣ ಮಾಡುತ್ತಿದ್ದ ಹೆಲಿಕಾಪ್ಟರ್ ದುರಂತಕ್ಕೀಡಾಗಿದ್ದು ಆ ದುರಂತದ ನೋವಿನ ನಡುವೆ ಕುತೂಹಲದ ಸಂಗತಿಯೆಂದರೆ, ಆ ದಿವಸ ಕ್ಯಾಪ್ಟನ್ ವರುಣ್ ಸಿಂಗ್‌ರವರು ಆಸ್ಪತ್ರೆ ಸೇರಿರುವ ವಿಷಯವನ್ನು ಕೇಳಿ ಏಕೈಕ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಜೀವವಾದರು ಉಳಿಯುತ್ತದೆ ಎನ್ನುವ ಆಶಾ ಭಾವದಿಂದ ಇಡೀ ಭಾರತ ದೇಶ ಕಾಯುತ್ತಿತ್ತು. ಆದರೆ, ನಿನ್ನೆ ನಡೆದಂತಹ ಒಟ್ಟು ವ್ಯವಸ್ಥೆಯಲ್ಲಿ ಕ್ಯಾಪ್ಟನ್ ವರುಣ್ ಸಿಂಗ್‌ರವರು ನಿಧನರಾಗಿರುವುದು ಈ ದೇಶ ಮತ್ತೊಂದು ನೋವು ಮತ್ತು ಸಂಕಟವನ್ನು ಅನುಭವಿಸುವಂತಹ ವಾತಾವರಣ ನಿರ್ಮಾಣವಾಗಿದೆ.

**(ಮುಂದು)**

**(1122) 16.12.2021 03.40 ಎಸ್‌ವಿ-ಜಿಆರ್**

(ಸಭಾಪತಿಯವರು ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಮಾನ್ಯ ಸಭಾಪತಿಯವರೇ, ತಾವು ಉಲ್ಲೇಖ ಮಾಡಿದಂತೆ ಉತ್ತರ ಪ್ರದೇಶದ ಕನೋಳಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಶಿಕ್ಷಣವನ್ನು ಚಂಡೀಗಢದಲ್ಲಿ ಪೂರೈಸಿದ್ದು, 2004ರಲ್ಲಿ ಎನ್.ಡಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದರ ಮೂಲಕ ಟೆಸ್ಟ್ ಪೈಲಟ್ ಆಗಿ ವಾಯುಪಡೆಗೆ ಸೇರ್ಪಡೆಗೊಂಡರು. 2017ರಲ್ಲಿ ವಿಂಗ್ ಕಮಾಂಡರ್ ಆಗಿ ತಮಿಳುನಾಡಿನ ಡಿಫೆನ್ಸ್ ಸರ್ವೀಸ್ ಸ್ಟಾಫ್ ಕಾಲೇಜಿನಲ್ಲಿ ಡೈರೆಕ್ಟಿಂಗ್ ಸ್ಟಾಫ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ದೇಶಕ್ಕೆ ಹೆಮ್ಮೆಯ, ಶೌರ್ಯದ ಮತ್ತು ಪರಮೋನ್ನತ ವೃತ್ತಿಪರತೆಯ ಸೇವೆ ಸಲ್ಲಿಸಿದ್ದ ಶ್ರೀಯುತರು ಶೌರ್ಯಚಕ್ರ ಪ್ರಶಸ್ತಿಗೆ ಭಾಜನರಾಗಿದ್ದರು. ಇವೆಲ್ಲವೂ ದೇಶದ ಪ್ರತಿಯೊಂದು ಪ್ರಜೆಗೂ ಹೆಮ್ಮೆಯನ್ನು ಕೊಡುವ ವಿಚಾರ. ಇಂತಹ ಶ್ರೀ ವರುಣ್ ಸಿಂಗ್ ಅವರು ಬದುಕುಳಿಯುತ್ತಾರೆ, ಆ ದುರಂತದ ಬಗ್ಗೆ ಒಂದಷ್ಟು ಮಾಹಿತಿಯು ನಮಗೆ ನೈಜವಾಗಿ ದೊರೆಯುತ್ತದೆ ಎನ್ನುವ ಭಾವನೆಗಳು ಇದ್ದಂತಹ ಸಂದರ್ಭದಲ್ಲಿ ಅವರು ವಿಧಿವಶರಾಗಿರುವುದರಿಂದ ಇಡೀ ದೇಶವೇ ದುಃಖ ಪಡುವಂತಹ ವಾತಾವರಣ ನಿರ್ಮಾಣವಾಗಿದೆ. ತಾವು ಮಂಡನೆ ಮಾಡಿರುವ ಸಂತಾಪ ಸೂಚನಾ ಪ್ರಸ್ತಾಪಕ್ಕೆ ಇಡೀ ಸದನದ ಪರವಾಗಿ ಸಹಮತವನ್ನು ವ್ಯಕ್ತಪಡಿಸಿ ಇಡೀ ರಾಷ್ಟ್ರಕ್ಕೆ ಅವರ ನಿಧನದಿಂದಾಗಿರುವ ನೋವನ್ನು ಸಹಿಸುವ ಶಕ್ತಿಯನ್ನು ಶ್ರೀದೇವರು ಕೊಡಲಿ. ಮೃತರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ಕರುಣಿಸಲಿ. ಅವರ ಕುಟುಂಬ ವರ್ಗದವರಿಗೆ ನೋವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಕೋರುತ್ತಾ, ಸರ್ಕಾರದ ಪರವಾಗಿ ಸಂತಾಪ ಸೂಚನಾ ಪ್ರಸ್ತಾಪಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದಂತಹ ಸಂತಾಪ ಸೂಚಕ ಗೊತ್ತುವಳಿಯನ್ನು ಬೆಂಬಲಿಸಿ, ತಮ್ಮ ವಿಚಾರಕ್ಕೆ ಅನುಗುಣವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅವಕಾಶ ಕಲ್ಪಿಸಿದಂತಹ ತಮಗೆ ಮೊಟ್ಟಮೊದಲನೆಯದಾಗಿ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಈ ರಾಷ್ಟ್ರಕ್ಕೆ ಅದ್ಭುತವಾದ ಸೇವೆಯನ್ನು ಸಲ್ಲಿಸಿದಂತಹ ಮೂರು ಪಡೆಗಳ ಮೊಟ್ಟಮೊದಲನೆಯ ಮುಖ್ಯಸ್ಥರಾದ ಶ್ರೀ ಬಿಪಿನ್ ರಾವತ್ ಅವರೊಂದಿಗೆ 13 ಜನರು ಮೃತರಾದ ಸಂದರ್ಭದಲ್ಲಿ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಬದುಕುಳಿಯಬಹುದು ಎಂದು ನಮಗೆ ಬಹಳ ಆಸೆ ಇತ್ತು. ಹಿಂದಿನ ಸಂತಾಪ ಸೂಚನೆಯ ಸಂದರ್ಭದಲ್ಲಿ ನಾನು ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರು ಬದುಕುಳಿಯುತ್ತಾರೆ ಎನ್ನುವ ಆಶಯದಲ್ಲಿ ಅವರು ಬದುಕುಳಿಯಲಿ ಎಂದು ಪ್ರಾರ್ಥನೆ ಮಾಡಿಕೊಂಡಿದ್ದೆನು. ನನಗೆ ಆಶಾವಾದವೂ ಇತ್ತು. ದುರ್ದೈವವೆಂಬಂತೆ ಭಾರತದ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರನ್ನು ಉಳಿಸಿಕೊಳ್ಳಲಿಕ್ಕೆ ಆಗಲಿಲ್ಲ. ಬೆಂಗಳೂರಿನ ಕಮಾಂಡೊ ಆಸ್ಪತ್ರೆಗೆ ಅವರನ್ನು ಸ್ಥಳಾಂತರ ಮಾಡಿ ಅತ್ಯುತ್ತಮವಾದ ಚಿಕಿತ್ಸೆಯನ್ನು ನೀಡಿ ಉಳಿಸಿಕೊಳ್ಳಬೇಕೆಂದು ವೈದ್ಯರು ಶತಪ್ರಯತ್ನ ಮಾಡಿದರೂ ಕೂಡ ನಿನ್ನೆ ಅವರು ನಿಧನರಾಗಿದ್ದಾರೆ. ಅವರು ಶೌರ್ಯಚಕ್ರ ಪ್ರಶಸ್ತಿಗೆ ಭಾಜನರಾದಂತಹವರು. ಅದ್ಭುತವಾದಂತಹ ಸೇವಾ ಮೆಡಲ್‌ಗಳನ್ನು ಪಡೆದವರು. ಅವರು ಒಬ್ಬರಾದರೂ ಉಳಿಯಲಿ ಎಂದು ರಾಷ್ಟ್ರದ ಜನತೆ ಹಾರೈಸಿದ್ದರು. ದುರ್ದೈವವೆಂಬಂತೆ ಸಿ.ಡಿ.ಎಸ್. ಬಿಪಿನ್ ರಾವತ್ ಅವರೊಂದಿಗೆ ಇವರೂ ನಮ್ಮನ್ನು ಅಗಲಿದ್ದಾರೆ. ಇದರಿಂದಾಗಿ ದೇಶಕ್ಕೆ ಸಾಕಷ್ಟು ಆಘಾತ ಉಂಟಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ತಮಿಳುನಾಡಿನ ಕೂನೂರಿನಲ್ಲಿ ನಡೆದ ಹೆಲಿಕಾಪ್ಟರ್ ಅಪಘಾತ ಎನ್ನುವ ಎಪಿಸೋಡ್ ಬಗ್ಗೆ ಕೇಂದ್ರ ಸರ್ಕಾರ ಸಾಕಷ್ಟು ಮುತುವರ್ಜಿ ವಹಿಸಿ ಇದರ ಹಿನ್ನೆಲೆ ಏನು? ಕಾರಣವೇನು ಎನ್ನುವುದನ್ನು ಕಂಡು ಹಿಡಿಯುವುದು ದೇಶದ ಹಿತದೃಷ್ಟಿಯಿಂದ, ದೇಶದ ಭದ್ರತೆಯ ದೃಷ್ಟಿಯಿಂದ, ದೇಶದ ಐಕ್ಯತೆಯ ದೃಷ್ಟಿಯಿಂದ, ದೇಶದ ಸಾರ್ವಭೌಮತ್ವದ ದೃಷ್ಟಿಯಿಂದ ಬಹಳ ಅವಶ್ಯಕವಾಗಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲು ಬಯಸುತ್ತೇನೆ.

ದೇಶದ ಪರಮಾಣು ಪಿತಾಮಹ ಆಗಿದ್ದಂತಹ ದಿ: ಹೋಮಿ ಜಹಾಂಗೀರ್ ಬಾಬಾ ಅವರನ್ನು ನಾವು ವಿಮಾನ ಅಪಘಾತದಲ್ಲಿ ನಾವು ಕಳೆದುಕೊಂಡಿದ್ದೇವೆ. ಈಗ ಮೂರ್ನಾಲ್ಕು ದಿನಗಳಿಂದ ಈ ವಿಮಾನಾಪಘಾತವು ಬಾಂಬ್ ಸ್ಫೋಟದಿಂದ ಸಂಭವಿಸಿದೆ ಎಂದು ಚರ್ಚೆಯಾಗುತ್ತಿದೆ. ಇಡೀ ಪ್ರಪಂಚದಲ್ಲಿ ದೊಡ್ಡದಾದ ಪ್ರಜಾಸತ್ತಾತ್ಮಕ ರಾಷ್ಟ್ರವಾದ ನಮ್ಮ ದೇಶದ ಮಿಲಿಟರಿ ಪಡೆಯು ಪ್ರಪಂಚದಲ್ಲಿಯೇ ನಾಲ್ಕನೇ ಶಕ್ತಿಶಾಲಿಯಾದುದಾಗಿದೆ. ಬಹಳಷ್ಟು ರಾಷ್ಟ್ರಗಳಿಗೆ ನಮ್ಮ ಮೇಲೆ ಕಣ್ಣಿದೆ. We have lost fourteen finest officers. ಇದು ಹೃದಯ ವಿದ್ರಾವಕವಾದಂತಹ ಘಟನೆ. ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಉಳಿದಿದ್ದರೆ ಈ ಅನೇಕ ವಿಚಾರಗಳನ್ನು ನಾವು ಅವರಿಂದ ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು ಎನ್ನುವ ವಿಚಾರವನ್ನು ವ್ಯಕ್ತ ಮಾಡುತ್ತಾ ಅವರ ಅಗಲಿಕೆಯ ನೋವು ಕೇವಲ ಅವರ ಕುಟುಂಬ ವರ್ಗಕ್ಕಷ್ಟೇ ಅಲ್ಲ, ದೇಶದ 130 ಕೋಟಿ ಜನತೆ ದುಃಖ ಪಡುವ ಈ

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಸಂದರ್ಭದಲ್ಲಿ ಅವರ ಆತ್ಮಕ್ಕೆ ಭಗವಂತ ಸದ್ಗತಿಯನ್ನು ನೀಡಲಿ. ಅವರ ಅಗಲುವಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ತಾವು ತಂದಿರುವಂತಹ ಸಂತಾಪ ಸೂಚನಾ ಪ್ರಸ್ತಾಪಕ್ಕೆ ನನ್ನ ದನಿಗೂಡಿಸುತ್ತಾ ಭಾರತ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ನಿಧನ ನಮಗೆ ದುಃಖವನ್ನು ತಂದಿರುವ ಮತ್ತೊಂದು ಘಟನೆ. ಇದೇ ತಿಂಗಳ 8ನೇ ತಾರೀಖಿನಂದು ಹೆಲಿಕಾಪ್ಟರ್ ದುರಂತದಲ್ಲಿ ನಮ್ಮ ಸೇನೆಯ ಸಿಡಿಎಸ್ ಆಗಿದ್ದಂತಹ ದಿವಂಗತ ಬಿಪಿನ್ ರಾವತ್ ಅವರನ್ನು ವೆಲ್ಲಿಂಗ್ಟನ್ ಮಿಲಿಟರಿ ಅಕಾಡೆಮಿಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಕೇವಲ 20-25 ನಿಮಿಷಗಳ ಹಾರಾಟ ಮಾಡುವ ಮಾರ್ಗದಲ್ಲಿ ದುರಂತ ಸಂಭವಿಸಿದೆ. ಬಿಪಿನ್ ರಾವತ್ ಹಾಗೂ ಅವರ ಪತ್ನಿಯನ್ನೊಳಗೊಂಡಂತೆ 13 ಜನರು ಅಂದೇ ಅಸು ನೀಗಿದ್ದರು. ಅದರ ಬಗ್ಗೆ ಬಹಳಷ್ಟು ದುಃಖವನ್ನು ಎಲ್ಲರೂ ಕೂಡ ವ್ಯಕ್ತ ಪಡಿಸಿದ್ದಾರೆ. ಇದು ನಿಜಕ್ಕೂ ದಿಗ್ಭ್ರಾಂತಿಯುಂಟು ಮಾಡುವ ವಿಷಯ. ಸಾಮಾನ್ಯವಾಗಿ ಸಿ.ಡಿ.ಎಸ್., ಅವರಿಗೆ ಬಹಳಷ್ಟು ಸೆಕ್ಯೂರಿಟಿ, ಸೇಫ್ಟಿ ಮತ್ತು ಪೂರ್ವ ಜಾಗ್ರತಾ ಡ್ರಿಲ್ಲಿಂಗ್ ಎಲ್ಲವೂ ಕೂಡ ಆಗಿರುತ್ತದೆ. ಅಂತಹದ್ದರಲ್ಲಿ ಈ ಘಟನೆ ಆಗಿರುವುದು ನಮಗೆಲ್ಲರಿಗೂ ಚಿಂತಾಕ್ರಾಂತರನ್ನಾಗಿ ಮಾಡಿದೆ. ನಮ್ಮ ಆರ್ಮಿಯವರು ಯಾವುದೇ ವ್ಯಾಖ್ಯಾನ ಮಾಡಬಾರದೆನ್ನುವ ಕಾರಣದಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಆದರೆ ಇಷ್ಟು ಮಾತ್ರ ಸತ್ಯ. ಇದು ಏಕೆ ಆಯಿತು, ಕಾರಣಗಳೇನು ಎಂದು ತಿಳಿದುಕೊಳ್ಳುವ ವಿಚಾರ ಭಾರತದ ಪ್ರತಿಯೊಬ್ಬ ನಾಗರಿಕರಿಗೂ ಇದೆ. ಏಕೆಂದರೆ ಸೇನಾ ಮುಖ್ಯಸ್ಥರಿಗೆ ಹೀಗಾದರೆ ನಾವೆಲ್ಲಾ ಯೋಚನೆ ಮಾಡಬೇಕು.

ದಿವಂಗತ ಬಿಪಿನ್ ರಾವತ್ ಅವರ ನಾಯಕತ್ವ, ಅವರ ಶೌರ್ಯ ಅಲ್ಲದೆ ಅವರು frontline leader ಆಗಿ ಕೆಲಸವನ್ನು ಮಾಡಿದ್ದರು. Chief of Army Staff ಆದಾಗಲೂ ಕೂಡ front line ನಲ್ಲಿದ್ದು ಕೆಲಸವನ್ನು ಮಾಡಿದ್ದರು. ಅದು Western Range ಇರಬಹುದು ಅಥವಾ Northern Range ಇರಬಹುದು, frontline ನಲ್ಲಿದ್ದು ಭಾರತದ ಸೇವೆಯನ್ನು ಮಾಡಿದ್ದಾರೆ. ಅವರ ಮಾತಿನಿಂದ ಪ್ರತಿಯೊಬ್ಬ ಸೈನಿಕನಿಗೆ ಮನೋಬಲ ಹೆಚ್ಚಾಗುತ್ತಿತ್ತು, ಆತ್ಮ ವಿಶ್ವಾಸ ಹೆಚ್ಚಾಗುತ್ತಿತ್ತು.

(ಮುಂದು)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

(1123) 16-12-2021 (3.50) ಕೆಜಿ – ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಅವರು ಹೊಸ ನಾಯಕತ್ವವನ್ನು ಕೊಟ್ಟಿದ್ದರು. ಒಂದು ಹೊಸ dimension ಕೊಟ್ಟಿದ್ದರು. ಒಂದು ಬಹಳ positive ಆಗಿ, aggressive ಆಗಿ ಇಡೀ ನಮ್ಮ ಭಾರತ ದೇಶದ ಮೂರು ಪಡೆಗಳ ಒಂದು strategy ಅನ್ನು ಸಂಪೂರ್ಣವಾಗಿ ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್‌ರವರು ಬದಲಾವಣೆ ಮಾಡಿದ್ದರು.

ಮಾನ್ಯ ಸಭಾಪತಿಯವರೇ, ಮೂರನೆಯದಾಗಿ, indianisation of weapons and modernisation of weapons ಇವರೆಡನ್ನು ಅವರು ಬಹಳ ಅದ್ಭುತವಾಗಿ ಮಾಡಿದ್ದಾರೆ. ಇದರಿಂದ ಬಹಳ ದೊಡ್ಡ ಪರಿಣಾಮವಾಗಿದೆ. ಪ್ರಥಮ ಬಾರಿಗೆ ಖಾಸಗಿ ವಲಯದಲ್ಲಿ ಭಾರತ ದೇಶದಲ್ಲಿ ನಮ್ಮ Army ಗೆ ಬೇಕಾಗಿರುವಂತಹ weaponry ಗಳನ್ನು ತಯಾರು ಮಾಡಿದರು. ನಾವು ಮೊದಲು import ಮಾಡಿಕೊಳ್ಳುತ್ತಿದ್ದೇವು. ಈಗ ಅದನ್ನು export ಮಾಡುವ ರೀತಿಯಲ್ಲಿ ಅವರ strategy ಇತ್ತು. ಅವರ ಈ ಎಲ್ಲಾ ಬುದ್ಧಿವಂತಿಕೆಯನ್ನು ನೋಡಿ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಅವರನ್ನು C.D.S., (Chief of Defence Staff) ಮಾಡಿದ್ದರು. Chief of Defence Staff ಕೆಲವೇ ಕೆಲವು ಜನರಿಗೆ ಇರುತ್ತದೆ. ನಾವು ಅದರಲ್ಲಿ ಕೆಲವೇ ಕೆಲವು ಜನರನ್ನು ನೆನಪು ಇಟ್ಟುಕೊಳ್ಳುತ್ತೇವೆ. ಜನರಲ್ ಕರಿಯಪ್ಪ ಇರಬಹುದು, ಜನರಲ್ ತಿಮ್ಮಯ್ಯ ಇರಬಹುದು, ಇವರಿಬ್ಬರು ಕನ್ನಡಿಗರು. ಇವರು Chief of Defence Staff ಆಗಿದ್ದರು. ಇವರಲ್ಲದೆ, ನಮಗೆ ನೆನಪು ಇರುವಂಥದ್ದು ಶ್ರೀ ಮಾಣಿಕ್ ಷಾ ಮತ್ತು ಈಗ ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್‌ರವರು. 1971ರಲ್ಲಿ Indo-Pak war ಆಗಿತ್ತು. ಈಗ ಅದರ 50 ವರ್ಷಗಳ celebration ಅನ್ನು ಮಾಡುತ್ತಿದ್ದೇವೆ. ನಾನು ಇಂದು ಬೆಳಗ್ಗೆ Marata Regiment ಗೆ ನನ್ನ ಗೌರವವನ್ನು ಅರ್ಪಿಸಿ ಬಂದಿದ್ದೇನೆ. ನಮ್ಮ ಸೈನ್ಯ ಯಾವಾಗಲೂ ನಮ್ಮ ಭಾರತ ದೇಶದ ಸುರಕ್ಷತೆಯನ್ನು ಎತ್ತಿಹಿಡಿದಿದೆ. ನಮ್ಮ ದೇಶದ ಧ್ವಜವನ್ನು ಎತ್ತಿಹಿಡಿದಿದೆ. ನಮಗೆ ಎಂದೂ ಸಹ ನಿರಾಶೆಯನ್ನು ಮಾಡಿಲ್ಲ. ಆದರೆ, ಈಗ warfare ಏನಿದೆ, ಅದು ಬದಲಾವಣೆಯಾಗುತ್ತದೆ. ಮೊದಲು men to men combat ಇತ್ತು. Tanks to tanks combat ಇತ್ತು. ಈಗ ಎಲ್ಲವೂ ಹೋಗಿ ಎಲ್ಲಾ weapons ಕೂಡ remote sensing devise ನಲ್ಲಿ ಆಪರೇಟ್ ಆಗುತ್ತದೆ. ಅದಕ್ಕಾಗಿ ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್‌ರವರು ಮತ್ತು ಅವರ ತಂಡ ಎಲ್ಲಾ ಸಿದ್ಧತೆಗಳನ್ನು ಕಳೆದ ಹಲವಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅದರಲ್ಲೂ ಸಹ, ನಮ್ಮ ಭಾರತ ಮುಂದಿದೆ. ನಿರಂತರವಾಗಿ ಅದರ modernisation ಪ್ರಕ್ರಿಯೆ ಇದ್ದರೆ, ಮಾತ್ರ ನಾವು ನಮ್ಮ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ದೇಶವನ್ನು ಆಧುನಿಕ ಸಶಸ್ತ್ರೀಕರಣದಲ್ಲಿ ರಕ್ಷಣೆ ಮಾಡಬಹುದು. ಇವರು ಶೌರ್ಯ ಚಕ್ರವನ್ನು ಪಡೆದಿದ್ದಾರೆ. ಅದೇರೀತಿ ಅಶೋಕ ಚಕ್ರ ಮತ್ತು ಪರಮವೀರ ಚಕ್ರ ಎಲ್ಲವೂ ಸಹ ಇದೆ. ಕನ್ನಡಿಗರು ಯಾರಾದರೂ ಹೋದರೆ, 25 ಲಕ್ಷ ರೂಪಾಯಿಗಳು ಮತ್ತು 12 ಲಕ್ಷ ರೂಪಾಯಿಗಳು ಈ ರೀತಿ ಇತ್ತು. 25 ಲಕ್ಷ ರೂಪಾಯಿಗಳು ಇದಿದ್ದನ್ನು ಒಂದು ಕೋಟಿ ರೂಪಾಯಿಗಳಿಗೆ ಮತ್ತು 12 ಲಕ್ಷ ರೂಪಾಯಿಗಳು ಇದಿದ್ದನ್ನು ಒಂದು ಕೋಟಿ ರೂಪಾಯಿಗಳಿಗೆ ಆದೇಶ ಮಾಡಿದ್ದೇನೆ. ಈ ರೀತಿ ಎಲ್ಲವನ್ನು 4 ರಿಂದ 5 ಪಟ್ಟು ಹೆಚ್ಚಿಗೆ ಮಾಡಿ ಇಂದು ಆದೇಶ ಮಾಡಿ ಅವರಿಗೆ ಕೊಟ್ಟು ಬಂದಿದ್ದೇನೆ. ಅಂದರೆ, ನಮ್ಮ ಸೈನ್ಯದಲ್ಲಿ ಪರಾಕ್ರಮ ಮಾಡಿದವರನ್ನು ಗುರುತಿಸುವುದು ನಮ್ಮ ಕರ್ತವ್ಯ. ನಮ್ಮ ರಾಜ್ಯದ ಜನತೆ ಮತ್ತು ರಾಜ್ಯ ಸರ್ಕಾರ ಅವರ ಜೊತೆಗೆ ಇದೆ ಎನ್ನುವಂತಹ ಸಂಕೇತವನ್ನು ಕೊಡಲು ಆ ಕೆಲಸವನ್ನು ಇಂದು ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ಶ್ರೀ ವರಣ್‌ಸಿಂಗ್‌ರವರ ಬಗ್ಗೆ ಹೇಳುವುದಾದರೆ, ಅವರು ಉಳಿದು ಬಂದಿರುವುದು ನಿಜವಾಗಲೂ ಸಹ ಒಂದು ದೈವ ಇಚ್ಛೆ. ಅದೊಂದು miracle. ಅಲ್ಲಿನ ಜನರು ಅವರು ಇಳಿದ ತಕ್ಷಣ ಅವರಿಗೆ ಇನ್ನೂ ಸ್ವಲ್ಪ ಎಚ್ಚರಿಕೆ ಇತ್ತು, ನಂತರ ಕೆಲವೇ ನಿಮಿಷಗಳಲ್ಲಿ ಎಚ್ಚರ ತಪ್ಪಿದರು ಎಂದು ಹೇಳಿದರು. ಅವರಿಗೆ ಅಲ್ಲಿ ಚಿಕಿತ್ಸೆ ಮಾಡಿ ನಂತರ ನಮ್ಮ ಬೆಂಗಳೂರಿನ Command Hospital Air Force ಗೆ ಕರೆದುಕೊಂಡು ಬಂದಿದ್ದರು. ಇಡೀ ನಮ್ಮ ಭಾರತ ದೇಶದಲ್ಲಿ ನಮ್ಮ ಬೆಂಗಳೂರಿನಲ್ಲಿರುವಂತಹ Command Hospital Air Force, it is one of the best hospitals, having best facility and best Doctors. ನಾನು ಶ್ರೀ ವರಣ್‌ಸಿಂಗ್‌ರವರನ್ನು ನೋಡುವುದಕ್ಕೆ ಹೋಗಿದ್ದೆ. ಆದರೆ, ನೋಡುವುದಕ್ಕೆ ಆಗಲಿಲ್ಲ. ಇಡೀ ಅವರ ದೇಹ ಸುಮಾರು 80% ಕ್ಕಿಂತ ಹೆಚ್ಚು ಸುಟ್ಟು ಹೋಗಿತ್ತು. ತುಟಿಗಳ ಸಮೇತ, ಕಣ್ಣಿನ ರೆಪ್ಪೆಗಳ ಸಮೇತ ಸುಟ್ಟು ಹೋಗಿತ್ತು. ಆದರೂ ಸಹ, ಅವರು fight ಮಾಡುತ್ತಿದ್ದರು. ವೈದ್ಯರು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದರು. ಕಿಡ್ನಿಗಳು ಕೆಲಸ ಮಾಡುತ್ತಿರಲಿಲ್ಲ. B.P., maintain ಆಗುತ್ತಿರಲಿಲ್ಲ. ಇನ್ನೂ ಹಲವಾರು ವೈದ್ಯಕೀಯ ಸಮಸ್ಯೆಗಳು ಇದ್ದವು. ಆದರೂ ಸಹ, ವೈದ್ಯರು 24 x 7 ಗಂಟೆಗಳ ಕಾಲ ನಿರಂತರ ಕೆಲಸ ಮಾಡಿ ಅವರನ್ನು ಉಳಿಸಿಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಿದ್ದರು. ನಾನು ಮತ್ತು ಮಾನ್ಯ ಘನತೆವೆತ್ತ ರಾಜ್ಯಪಾಲರು ಒಟ್ಟಿಗೆ ಹೋಗಿದ್ದೆವು. ನಾನು ಅವರ ಕುಟುಂಬದ ಸದಸ್ಯರನ್ನು ಸಹ ಭೇಟಿ ಮಾಡಿದ್ದೆ. ಅವರ ಕುಟುಂಬದವರನ್ನು ನೋಡಿದಾಗ ಅವರ ಮುಖದಲ್ಲಿ ಎಳ್ಳಷ್ಟು ಸಹ ಆತಂಕದ ಮತ್ತು ಭಯದ ಛಾಯೆ ಇರಲಿಲ್ಲ. ಅವರು ಬಹಳ normal ಆಗಿ ಇದ್ದರು. ನಾನು ಅದನ್ನು ನೋಡಿದಾಗ, ಅವರು ಎಷ್ಟು ಧೈರ್ಯವಂತರು ಇರಬಹುದು, ಎಷ್ಟು ಶೌರ್ಯವಂತರು ಇರಬಹುದು, ಸಾವು ತಮ್ಮ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕಣ್ಣೆದುರಿಗಿದ್ದರೂ ಸಹ, ಧೃತಿಗೆಡದೆ ಅದನ್ನು ಹೆದರಿಸುವಂತಹ ಛಲ ನಮ್ಮ ಭಾರತದ ಸೇನಾಪಡೆಗೆ ಇದೆ ಎಂದು ನಾನು ಒಂದು ಕ್ಷಣ ಯೋಚನೆ ಮಾಡಿದೆ.

ಮಾನ್ಯ ಸಭಾಪತಿಯವರೇ, ಅವರು ಸುಮಾರು 10-12 ದಿವಸಗಳ ಕಾಲ ಪ್ರಯತ್ನ ಮಾಡಿ ಅಸುನನೀಗಿದ್ದಾರೆ. ಅವರು ಹಲವಾರು ಹುದ್ದೆಗಳನ್ನು ಅಲಂಕರಿಸಿದ್ದವರು. ಅವರು ಶೌರ್ಯಚಕ್ರವನ್ನು ಪಡೆದುಕೊಂಡಿದ್ದರು. ಅವರು Narrating Staff ಆಗಿ Southern ತಮಿಳುನಾಡಿನಲ್ಲಿ ಕೆಲಸ ಮಾಡುತ್ತಿದ್ದರು. ನಾವು ಅಂತಹ ಅನುಭವಿ ಸೈನಿಕರನ್ನು, ಸೈನಿಕರ ಅಧಿಕಾರಿಗಳನ್ನು ಮತ್ತು Group Captain ಅನ್ನು ಕಳೆದುಕೊಂಡು ಸೇನೆ ಇನ್ನಷ್ಟು ಬಡವಾಗಿದೆ. ನಮ್ಮ ಇಡೀ ದೇಶ ಮತ್ತೊಮ್ಮೆ ದುಃಖದಲ್ಲಿದೆ. ನಮಗೆ ಅವರು ಬದುಕಿ ಉಳಿದು ಬಂದರೆ, ನಿಜವಾಗಲೂ ಏನು ನಡೆಯಿತು ಎನ್ನುವುದನ್ನು ಹೇಳಬಹುದಾಗಿತ್ತು ಎನ್ನುವಂತಹ ಒಂದು ಸಣ್ಣ ಆಸೆ ಇತ್ತು. ಇವತ್ತಿನ ದಿವಸ ಅದು ಸಹ ಕರಗಿಹೋಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕುಟುಂಬ ವರ್ಗದವರಿಗೆ ಮತ್ತು ನಮ್ಮ ಇಡೀ ದೇಶದ ಜನರು ದುಃಖದಲ್ಲಿರುವುದನ್ನು ಸಹಿಸುವಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಕೇಳಿಕೊಂಡು ನನ್ನ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಆಗಲಿಕೆ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷದ ಕಾಲ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದು ನಿಂತು ಒಂದು ನಿಮಿಷದ ಕಾಲ ಮೌನವನ್ನು ಆಚರಿಸಿದರು)**

**ಸಭಾಪತಿಯವರು:-** ಓಂ ಶಾಂತಿಃ ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

03. **<u>ಪ್ರಶ್ನೋತ್ತರಗಳು</u>**

**<u>ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು</u>**

**ಪ್ರಶ್ನೆ ಸಂಖ್ಯೆ 501**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಯವರು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಈ ಉತ್ತರದಲ್ಲಿ ಕೂತುಹಲ ಮೂಡಿಸುವಂತಹ 2-3 ಉತ್ತರಗಳು ಸಹ ಇವೆ. ಒಂದು ‘ಶಿಶು’ ಪದದ ವ್ಯಾಖ್ಯಾನ ಹಾಗೂ ‘ಶಿಶು’ ಎಂದು ಪರಿಗಣಿಸಲು ನಿರ್ಧರಿಸಬಹುದಾದ ವಯೋಮಿತಿಯನ್ನು ತಿಳಿಸುವುದಾಗಿ ಕೇಳಿದ್ದೆ. ಅದಕ್ಕೆ 18 ವರ್ಷ ತಲುಪುವವರೆಗಿನ ಮಕ್ಕಳನ್ನು ‘ಶಿಶು’ ಎಂದು ಪರಿಗಣಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಐ.ಪಿ.ಸಿ., ಮತ್ತು ಸಿ.ಆರ್.ಪಿ.ಸಿ., ಕೆಳಗೆ ಬಂದಾಗ, 18 ವರ್ಷದ ಕೆಳಗಿನ ಬಾಲಕರು ಆತ್ಯಾಚಾರವನ್ನು ಮಾಡಿದರೆ, ಅದನ್ನು ಶಿಶು ಆತ್ಯಾಚಾರ ಮಾಡಿದ್ದಾನೆಂದು ಪರಿಗಣಿಸಲಾಗುವುದೇ? ಏಕೆಂದರೆ, ಈ ಪ್ರಕರಣಗಳು ಸಹ ನಡೆದಿವೆ. ಅವರು ಬಾಲಪರಾಧಿಗಳು. ಹಾಗೆಯೇ, 18 ವರ್ಷ ವಯಸ್ಸಿನವರೆಗೆ ಮಗು ಹಾಲು ಕುಡಿಯುವ ಲೆಕ್ಕದಲ್ಲಿ ಹೇಳಲಾಗಿದೆಯೋ, ಯಾವ ಲೆಕ್ಕದಲ್ಲಿ 18 ವರ್ಷ ವಯಸ್ಸಿನವರೆಗೆ ಶಿಶು ಎಂದು ಪರಿಗಣಿಸಲಾಗಿದೆ? ಇದಕ್ಕೆ ಸಂಬಂಧಪಟ್ಟಂತೆ, ಇನ್ನೊಂದು ಅನುಮಾನ ಎಂದರೆ, 18ನೇ ವಯಸ್ಸಿನಿಂದ ಎಲ್ಲರಿಗೂ ಮತದಾನ ಪ್ರಾರಂಭವಾಗುತ್ತದೆ.

(ಮುಂದು)

(1124) 16-12-2021 (4.00) ಎಂವಿ-ಎಂಡಿ (ವಿಕೆ)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಶಿಶು ಮರುಕ್ಷಣವೇ ಮತದಾನ ಮಾಡುವಂತಹ ಮಟ್ಟಕ್ಕೆ ಹೋಗುತ್ತದೆ ಎಂದಾಗ, ಎಲ್ಲೋ ಒಂದು ರೀತಿ ವೈಜ್ಞಾನಿಕವಾಗಿ 18 ವರ್ಷದವರೆಗಿನ ಬಾಲಕ ಮತ್ತು ಬಾಲಕಿಯನ್ನು ಶಿಶು ಎಂದು ಪರಿಗಣಿಸಬಹುದು ಎಂದು ಸರ್ಕಾರದ ಸುತ್ತೋಲೆ ಇದ್ದರೆ, ನಾವು ಏನು ಈ *adolescent* period ಎಂದು ಹೇಳುತ್ತೇವೆ. ಅದನ್ನು ಯಾವ ಅವಧಿ ಎಂದು ಗುರುತಿಸಲಾಗುತ್ತದೆ. ಈಗ ಶಿಶು ಯಾವುದು?

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

*adolescent* period ಯಾವುದು? ಹಾಗೂ ಬಾಲಕ ಇದು ಯಾವ ಅವಧಿಯಲ್ಲಿ ಬರುತ್ತದೆ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಈಗ ಎರಡನೆಯ ವಿಷಯವೆಂದರೆ, ಇದು ಶಿಶುಪಾಲನಾ ರಕ್ಷಣೆಗೋಸ್ಕರ ಬಂದಿರುವಂತಹ ರಜಾ ಅವಧಿ. ನಮಗೆ ಮುಖ್ಯವಾದುದು ಶಿಶುಪಾಲನೆ. ಈಗ ಶಿಶುವನ್ನು ಗಂಡ ಸಾಕುತ್ತಾನೋ, ಹೆಂಡತಿ ಸಾಕುತ್ತಾಳೋ ಎಂಬುದು immaterial. ಈಗ ನನ್ನ ಪ್ರಶ್ನೆ ಏನೆಂದರೆ, ಅಕಸ್ಮಾತ್ ಪತ್ನಿ ತೀರಿ ಹೋದಾಗ, ಪುರುಷ ನೌಕರ ಆ ಶಿಶುಪಾಲನಾ ರಜೆಯನ್ನು ಅನುಭವಿಸಬಹುದೇ ಎಂದರೆ, ಅದಕ್ಕೆ ಇಲ್ಲವೆಂದು ತಿಳಿಸಿದ್ದಾರೆ. ಅಂದರೆ, ಈಗ ಪತ್ನಿ ಸತ್ತು ಹೋದಾಗ, ಮಗುವನ್ನು ಗಂಡ ಸಾಕುವುದಾದರೆ ಆಗ ಅದು ಶಿಶು ಆಗುವುದಿಲ್ಲ. ಆಗ ಅದು ವಯಸ್ಕರಾಗಿ ಬಿಡುತ್ತದೆ. ಹಾಗಾದರೆ, ಹೆಣ್ಣು ಸಾಕಿದರೆ ಮಾತ್ರ ಅದು ಶಿಶುವಾಗುತ್ತದೆಯೇ? ಗಂಡು ಶಿಶುಪಾಲನೆಯನ್ನು ಮಾಡಬಾರದೆ ಏಕೆ? ಅವನು ಸರ್ಕಾರಿ ನೌಕರನಾಗಿದ್ದಾಗ ವಿಧುರನಾಗುವುದಿಲ್ಲವೇ? ಈಗ ಚಿಕ್ಕ ಮಗು ಒಂದು ವರ್ಷ, ಎರಡು ವರ್ಷವಿರುತ್ತದೆ. ಈಗ ಯಾವುದೋ ಕಾಯಿಲೆಯಿಂದ ಅವನ ಪತ್ನಿ ತೀರಿ ಹೋದರೆ, ಆ ಮಗುವಿಗೆ ತಂದೆಯಿಂದ ಶಿಶುಪಾಲನಾ ರಕ್ಷಣೆ ಸಿಗುವುದಿಲ್ಲವೇ? ಅಲ್ಲಿ ಏಕೆ ವಂಚನೆಯನ್ನು ಮಾಡಲಾಗಿದೆ? ಶಿಶುಪಾಲನಾ ಕಾಯಿದೆಯೊಳಗೆ ಗಂಡು-ಹೆಣ್ಣಿನ ತಾರತಮ್ಯವನ್ನು ಏಕೆ ತರಲಾಗಿದೆ ಎಂಬತಕ್ಕಂಥ ಜಿಜ್ಞಾಸೆ. ಮೂರನೆಯದಾಗಿ, ಈಗ ಒಂದು ವರ್ಷದಿಂದ ಎರಡು ವರ್ಷವಾದರೂ ಕೂಡ ಅವರು ಆರು ತಿಂಗಳ ರಜೆಯನ್ನು ಪಡೆದುಕೊಳ್ಳಬಹುದು. ಈಗ ಅದಕ್ಕೆ ಕಾನೂನು ಜಾರಿಗೆ ಬಂದುಬಿಟ್ಟಿದೆ. ಈಗ 17 ವರ್ಷದ ಮಗುವಿದೆ. ಅವರಿಗೆ ಇನ್ನು ಒಂದು ವರ್ಷ ಬಾಕಿ ಇದೆ. ಅಂದರೆ, 17 ವರ್ಷದ ಮಗುವಿನ ತಾಯಿ ಕೂಡ, ಆರು ತಿಂಗಳ ರಜೆಯನ್ನು ಅನುಭವಿಸಬಹುದು. ಈಗ ಮಗುವಿಗೆ ಒಂದು ಮತ್ತು ಎರಡು ವರ್ಷ ವಯಸ್ಸಾಗಿದ್ದರೂ ಕೂಡ ಆರು ತಿಂಗಳ ರಜೆಯನ್ನು ಅನುಭವಿಸಬಹುದು. ಕೊನೆಯ ಅವಧಿಯಲ್ಲಿ 17 ವರ್ಷವಾಗಿದ್ದರೂ ಕೂಡ ಅವರು ಆರು ತಿಂಗಳ ರಜೆಯನ್ನು ಅನುಭವಿಸಬಹುದು ಎನ್ನುವಂಥದ್ದು. ನನಗೆ ಈ ಸವಲತ್ತಿನ ಬಗ್ಗೆ ತಕರಾರು ಇಲ್ಲ. ಇದು ಎಷ್ಟೊಂದು ಅವೈಜ್ಞಾನಿಕ ಎನ್ನುವಂತಹ ಹಿನ್ನೆಲೆಯ ಕಾರಣಕ್ಕೋಸ್ಕರ ಇದನ್ನು ಕೇಳಿದ್ದೇನೆ. ಅದಕ್ಕೋಸ್ಕರ ಈ ಮೂರು ಪ್ರಶ್ನೆಗಳಿಗೆ ಉತ್ತರದಲ್ಲಿ ಉದ್ಭವಾದಂತಹ ಜಿಜ್ಞಾಸೆಗಳು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನಗೆ ಪ್ರಶ್ನೆ ಕೇಳುವುದಿಲ್ಲವೇ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಎಂದು ಇದೆ. ಮಾನ್ಯ ಮುಖ್ಯಮಂತ್ರಿಗಳು ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದಾರೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಸಹಾಯ

---

ಮಾಡುವಂತಹ ಎಲ್ಲಾ ಅಧಿಕಾರದ ಸವಲತ್ತನ್ನು ಹೊಂದಿದ್ದಾರೆ. ಈಗ ಯಾರು ದಾರಿ ತಪ್ಪಿಸುವ ಉತ್ತರವನ್ನು ಕೊಡುತ್ತಾರೆ ನಾನು ಅವರಿಗೆ ಪ್ರಶ್ನೆಯನ್ನು ಕೇಳುತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡಿದರೆ, ನನ್ನದು ಏನು ತಕರಾರು ಇಲ್ಲ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೆ, ತಾವು ಇಲ್ಲದ ಸಂದರ್ಭದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನಿಮ್ಮ ಕೆಲಸವನ್ನೆ ಮಾಡುತ್ತಾರೆ.

**Sri U.B.Ventakesh:-** ಮಾನ್ಯ ಸಭಾಪತಿಯವರೇ, ಅವರು ಎಲ್ಲರ ಕೆಲಸವನ್ನು ಮಾಡುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ ಎಂದರೆ, ಸಾಮಾನ್ಯವಾಗಿ ನನಗೆ ಕುತೂಹಲವಿರುತ್ತದೆ. ಏಕೆಂದರೆ, ಯಾರಿಗೂ ಹೊಳೆಯಲಾರದ್ದು, ಅವರಿಗೆ ಹೊಳೆದಿರುತ್ತದೆ. ಅದು ಅವರ ಒಂದು speciality. ಈಗ 18 ವರ್ಷದವರನ್ನು ಶಿಶು ಎಂದು ಏಕೆ ಕರೆಯುತ್ತೀರಿ ಎಂಬುದು ಪ್ರಶ್ನೆ. ಈಗ 18 ವರ್ಷಕ್ಕೆ ಶಿಶು ಎಂದು ಪರಿಗಣಿಸುತ್ತಿದ್ದಾರೆಂದು ನಮ್ಮ ಉತ್ತರ ಆ ರೀತಿ ಇದೆ. ಅದು ಏನೆಂದರೆ, ಒಬ್ಬ ಮಹಿಳಾ ಸರ್ಕಾರಿ ನೌಕರಳು ಮಗುವಿಗೆ 18 ವರ್ಷ ತಲುಪುವವರೆಗೂ ಶಾಲೆ ಮತ್ತು ಇತರೆ ಸೇವೆಗಳಲ್ಲಿ ಆ ಮಗುವಿಗೆ ತಾಯಿಯ ಅವಶ್ಯಕತೆ ಇರುತ್ತದೆ ಎನ್ನುವಂತಹ ದೃಷ್ಠಿಯಿಂದ ಕೇಂದ್ರ ಸರ್ಕಾರ ಈ ರೀತಿಯ ಆದೇಶವನ್ನು ಮಾಡಿದೆ. ಈಗ ಮಾನ್ಯ ಆಯನೂರು ಮಂಜುನಾಥ್‌ರವರು ಕೇಳಿರುವಂತಹ ಮೂಲಭೂತ ಪ್ರಶ್ನೆ ಎಂದರೆ, ಈಗ ಶಿಶು ಮತ್ತು ಶಿಶು ಅಲ್ಲದೇ ಇರುವಂತಹ ಮಧ್ಯದಲ್ಲಿರುವಂತಹ *adolescent* ಎಂದು ಏನು ಕರೆಯುತ್ತೇವೆ. ಅಂದರೆ, ಈಗ ಯೌವನವನ್ನು ಎಲ್ಲಿ ಗುರುತಿಸುತ್ತೇವೆ ಎಂದು. ಅದನ್ನು ಎಲ್ಲೂ ಗುರುತಿಸುವುದು ಬೇಕಾಗಿಲ್ಲ. ಅದನ್ನು ನಿಸರ್ಗವೇ ತೀರ್ಮಾನ ಮಾಡುತ್ತದೆ. ಅಂದರೆ, ಯಾವಾಗ ಮೀಸೆ ಬರುತ್ತದೆ ಮತ್ತು ಯಾವಾಗ ಬೇರೆ ಬೇರೆ ಲಕ್ಷಣಗಳು ಕಾಣುತ್ತವೆ ಎಂಬುದು ಇದೆ. ಆದರೆ, ಸರ್ಕಾರ ಒಂದು ಮಹಿಳಾ ನೌಕರರಿಗೆ ಸಹಾಯ ಮಾಡಲು ಅದರ ಅವಧಿಯನ್ನು ಅದರಲ್ಲೂ ಅತ್ಯಂತ ಚಿಕ್ಕ ವಯಸ್ಸಿನ ಮಗು 18 ವರ್ಷದವರೆಗೆ ಆ ಮಗುವಿನ ಸೇವೆಯನ್ನು ಮಾಡುವುದಕ್ಕೆ ರಜೆಗಳನ್ನು ಕೊಡುವ ಸಲುವಾಗಿ ಮಾಡಿರುವಂಥದ್ದು ಅಷ್ಟೆ. ಆದುದರಿಂದ, ಅದಕ್ಕೂ ಮತ್ತು ನೈಜವಾಗಿ ಬೆಳೆಯುವುದಕ್ಕೆ ಹೋಲಿಕೆ ಮಾಡವಂತಹ ಅವಶ್ಯಕತೆ ಇಲ್ಲವೆಂಬುದು ನನ್ನ ಭಾವನೆ. ಎರಡನೆಯದಾಗಿ, ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಈಗ ಪತ್ನಿ ನಿಧನ ಹೊಂದಿದ ಸಂದರ್ಭದಲ್ಲಿ ಇದಕ್ಕೆ ಏಕೆ ಎಂದು? ಸಾಮಾನ್ಯವಾಗಿ ತಾಯಿ ಮಾಡುವಂತಹ ಸೇವೆಯನ್ನು ತಂದೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಅವರಿಗೆ ಅದರ ಅವಶ್ಯಕತೆ ಕಡಿಮೆ ಇರುತ್ತದೆ. ಹಾಗಾಗಿ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯೋಗದಲ್ಲಿರುವಂತಹ ಮಹಿಳೆಯರಿಗೆ ಪ್ರಸೂತಿ ರಜೆಯೊಂದಿಗೆ ಶಿಶುಪಾಲನಾ ರಜೆಯ ಸೌಲಭ್ಯ ಕೊಡುತ್ತೇವೆ. ಏಕೆಂದರೆ, ಅವಳು ತನ್ನ ಶಕ್ತಿಯನ್ನು ವೃದ್ಧಿ ಮಾಡಿಕೊಂಡು ಮತ್ತೆ ಕೆಲಸಕ್ಕೆ ಬರಬೇಕು. Biologically men and women are different. Biologically ಬಹಳಷ್ಟು ವ್ಯತ್ಯಾಸಗಳು ಇರುತ್ತವೆ. ಅಂದರೆ, ಅವಳು ಪ್ರಸೂತಿ ಮಾಡುವಂಥದ್ದು ಮತ್ತು ಹಾಲು ಕುಡಿಸುವಂಥದ್ದು ಮತ್ತೆ ಅವಳು *normal stage* ಗೆ ಬರುವಂಥದ್ದು, ಅವುಗಳಿಗೆಲ್ಲಾ ಸಮಯ ಬೇಕಾಗುತ್ತದೆ. ಅದಕ್ಕೆ ಅವಕಾಶವನ್ನು ಕೊಡಬೇಕು ಎನ್ನುವಂತಹ ದೃಷ್ಟಿಯಿಂದ *biologically different* ಇರುವುದರಿಂದ, ಸ್ವಲ್ಪ ವ್ಯತ್ಯಾಸಗಳಿವೆ. ಆದುದರಿಂದ, ಸಹಕಾರ ನೀಡಬೇಕು ಎಂದು ಮಾನ್ಯ ಆಯನೂರು ಮಂಜುನಾಥ್‌ರವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಲು ಕುಡಿಸುವುದಾದರೆ ಕೊಡಬಹುದು ನಮ್ಮದೇನೂ ಅಭ್ಯಂತರವಿಲ್ಲ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನನಗೆ ಈ ಉತ್ತರ ಸಮಾಧಾನ ನೀಡಿಲ್ಲ. *Biological differences* ಬಗ್ಗೆ ನನ್ನ ಪ್ರಶ್ನೆ ಇಲ್ಲ. ನಾನು ಮಾತನಾಡುತ್ತಿರುವುದು ಈಗ ಕಾನೂನು ನಿಯಮಾವಳಿ ಇರುವಂಥದ್ದು ಶಿಶುಪಾಲನಾ ರಜೆಗೆ ಎಂದು. ಈಗ ಪತ್ನಿ ಸತ್ತು ಹೋದಾಗ, ವಿಧುರನಾದಂತಹ ತಂದೆ ಆ ಮಗು ಅನಾಥವಾಗದೆ, ಹೇಗೆ ಸರಿಯಾದ ದಿಕ್ಕಿನಲ್ಲಿ ಬೆಳೆಯಬೇಕೋ ಅದರ ಎಚ್ಚರಿಕೆ ವಹಿಸುವಂತಹ ಕರ್ತವ್ಯವನ್ನು ತಂದೆ ಮಾಡುವುದಿಲ್ಲವೆಂದು ಭಾವಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಆ ಕಾರಣಕ್ಕೋಸ್ಕರ, ಈ ಶಿಶುಪಾಲನಾ ರಜೆಯನ್ನು ಮಹಿಳೆಯರಿಗೆ ಕೊಡುವುದಾದರೆ, ಪುರುಷರಿಗೂ ಸಹ ಕೊಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕೊಡುತ್ತಾರೆ. *There is a provision.*

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಕೆ.ಟಿ.ಶ್ರೀಕಂಠೇಗೌಡರ ಭೌದ್ಧಿಕತೆಯನ್ನು ಪ್ರಶ್ನೆ ಮಾಡುವುದಿಲ್ಲ. ನಾನು ಈ ಪ್ರಶ್ನೆಗಳಿಗೆ ಉತ್ತರವನ್ನು ಕೇಳುತ್ತಿದ್ದೇನೆ. ಸರ್ಕಾರ ಲಿಖಿತವಾಗಿ ಉತ್ತರವನ್ನು ಕೊಟ್ಟಿದೆ. ಈಗ ನಾನು ಸರ್ಕಾರವನ್ನು ನಂಬುವುದೋ ಅಥವಾ ಮಾನ್ಯ ಸದಸ್ಯರು ಹಾಗೂ ನನ್ನ ಗೆಳೆಯ ಮಾನ್ಯ ಕೆ.ಟಿ.ಶ್ರೀಕಂಠೇಗೌಡರನ್ನು ನಂಬುವುದೋ? ಹಾಗಾಗಿ, ನಾನು ಸರ್ಕಾರವನ್ನು ನಂಬುತ್ತೇನೆ. ಈಗ ಸಂಬಂಧಿತ ಎರಡನೇ ಪ್ರಶ್ನೆ ಎಂದರೆ, ಇವತ್ತು ಸರ್ಕಾರದಲ್ಲಿ ಶೇಕಡಾ 40 ರಿಂದ 50ರವರೆಗೆ ಮಹಿಳಾ ಉದ್ಯೋಗಿಗಳೇ ಇದ್ದಾರೆ. ಕೆಲವು ಇಲಾಖೆಗಳಲ್ಲಿ ಹೆಚ್ಚು ಜನ ಮಹಿಳೆಯರು ಇದ್ದಾರೆ. ಎಲ್ಲಿಯಾದರೂ ಸರ್ಕಾರ ಲೆಕ್ಕಾಚಾರ

ತಪ್ಪದೆ, ಈಗ ಒಂದು ಇಲಾಖೆಯಲ್ಲಿ ಹೆಚ್ಚು ಮಹಿಳೆಯರೇ ಇದ್ದಾಗ, ಈ ರೀತಿಯ ರಜೆಯನ್ನು ಕೊಟ್ಟಾಗ ಆ ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಆಗಬಹುದಾದಂತಹ ತೊಂದರೆಗಳನ್ನು ಗುರುತಿಸಿಕೊಂಡು, ಅಲ್ಲಿ ಏನಾದರೂ scientific method ಅನ್ನು adopt ಮಾಡಿದೆಯೇ? ಈಗ ಕೆಲವೊಂದು ಇಲಾಖೆಗಳಲ್ಲಿ ಹೆಣ್ಣು ಮಕ್ಕಳೇ ಇದ್ದಾರೆ. ಅಂತಹ ಸಂದರ್ಭದಲ್ಲಿ ಗ್ರಹಚಾರ ಬಂದು ಎಲ್ಲರೂ ಒಂದೇ ಬಾರಿ delivery ಮಾಡಿಕೊಂಡು ಬಿಟ್ಟರೆ, ಬೇರೆಯವರ ಕಥೆ ಏನು? ಆಗ delivery pain ನಾಗರಿಕರಿಗೆ ಆಗುತ್ತದೆ. ಇದರಿಂದ ಇಲಾಖೆಯಲ್ಲಿ ಏನೂ ಕೆಲಸವೂ ಸಹ ಆಗುವುದಿಲ್ಲ. ನಾನು ಅವರಿಗೆ ರಜೆಯನ್ನು ಕೊಡಬಾರದು ಎಂದು ಹೇಳುತ್ತಿಲ್ಲ. ಈಗ ಹೆಚ್ಚು ಮಹಿಳಾ ಉದ್ಯೋಗಿಗಳು ಇದ್ದರೆ ಅದಕ್ಕೆ mechanism ಏನು ಎನ್ನುವಂಥದ್ದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ಒಂದೇ ಬಾರಿ delivery ಮಾಡುವ ವಿಧಾನ ಮತ್ತು ಅದರ guarantee ಯನ್ನು ಮಾನ್ಯ ಆಯನೂರು ಮಂಜುನಾಥ್‌ರವರು ತೆಗೆದುಕೊಳ್ಳುತ್ತಾರೆಯೇ?

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಶಾಸಕರಾಗುವುದಕ್ಕಿಂತ ಮುಂಚೆ, ಮಾಜಿ ಮುಖ್ಯಮಂತ್ರಿಗಳು ಮತ್ತು ಅವರ ತಂದೆಯವರಾದ ದಿವಂಗತ ಎಸ್.ಆರ್.ಬೊಮ್ಮಾಯಿಯವರ ಜೊತೆಗೆ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಜೆ.ಹೆಚ್.ಪಟೇಲ್ ರವರ ಸಹವಾಸ ಮಾಡಿಬಿಟ್ಟಿದ್ದಾರೆ. ಮಾನ್ಯ ಜೆ.ಹೆಚ್.ಪಟೇಲರ ಜೊತೆ ಹೆಚ್ಚು ಸಹವಾಸ ಮಾಡಿದ ಕಾರಣಕ್ಕೋಸ್ಕರ...

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಜೆ.ಹೆಚ್.ಪಟೇಲ್‌ರವರ ಜೊತೆಗೆ ಹೆಚ್ಚು ಸಹವಾಸ ಮಾಡಿರುವುದು. ನಾನು ದಿವಂಗತ ಜೆ.ಹೆಚ್.ಪಟೇಲರ ರಾಜಕೀಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಅವರು ಹಾಸ್ಯವಾಗಿ ಸದನದ ದಾರಿ ತಪ್ಪಿಸುವ ಕಲೆ ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೂ ಬಂದ ಹಾಗೆ ಕಾಣಿಸುತ್ತದೆ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಗೆ ತಕ್ಕ ಹಾಗೆ ಉತ್ತರ ನೀಡಿದ್ದೇನೆ ಅಷ್ಟೇ. ಆದರೆ, ಮಾನ್ಯ ಸದಸ್ಯರು ದಾರಿ ತಪ್ಪಿಸುತ್ತಿದ್ದಾರೆ. ಈಗ ಅವರು ಒಂದೇ ಬಾರಿ delivery ಆಗಬಹುದು ಎನ್ನುವುದು ಇದೆಲ್ಲವೂ ಸಹ ದಾರಿ ತಪ್ಪಿಸುವ ಕೆಲಸ ಅಲ್ಲವೇ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಆ ರೀತಿ ಆಗಿಬಿಟ್ಟರೆ ಏನು ಮಾಡುವುದು? ಆ ರೀತಿ ಆಗಬಾರದು ಎಂದು ಎಲ್ಲೂ ಇಲ್ಲ. ಆ ರೀತಿಯಾದಾಗ, *administration point* ನಿಂದ, ನಾನು ಈ ಪ್ರಶ್ನೆಯನ್ನು ಹಾಸ್ಯವಾಗಿ ಹೇಳುವುದಾದರೂ ಕೂಡ, ಈಗ 1/3ರಷ್ಟು ಇದ್ದರು ಎಂದು ಇಟ್ಟುಕೊಳ್ಳಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ದೇವರ ದಯದಿಂದ ಆ ರೀತಿ ಆಗುವುದಿಲ್ಲ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಪುರುಷ ದಯೆ ಇದೆಯೆ ಹೊರತು, ದೇವರ ದಯೆ ಎಲ್ಲಿಂದ ಬರುತ್ತದೆ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ಪುರುಷನನ್ನು ಸಹ ಆ ದೇವರೇ ಸೃಷ್ಟಿ ಮಾಡುವುದು. ಅದನ್ನು ಮಾನ್ಯ ಸದಸ್ಯರು ಮರೆತು ಬಿಟ್ಟಿದಾರೆ. ಹಾಗಾದರೆ, ಮಾನ್ಯ ಸದಸ್ಯರು ಸ್ವಯಂಬುಗಳೇ. ಆದುದರಿಂದ, ಈಗ ಪುರುಷ ದಯೆ ಇದ್ದರೂ ಕೂಡ, ಆ delivery ಪೂರ್ತಿಯಾಗಬೇಕಾದರೆ ದೇವರ ದಯೆಯೇ ಬೇಕು. ಮಾನ್ಯ ಸದಸ್ಯರು ಅರ್ಧ ಕೆಲಸ ಮಾಡುತ್ತಾರೆ ಅಷ್ಟೇ.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾವು ಇಬ್ಬರೂ ಸಹ ಸಂಸಾರಸ್ಥರು ನಮಗೆ ಈ ವಿಷಯ ಗೊತ್ತಿದೆ. ಹಾಗಾಗಿ, ನಾನು ಅದರ ಚರ್ಚೆಗೆ ಹೋಗುವುದಿಲ್ಲ. ಹಾಗಾಗಿ ಇದನ್ನು ಸರ್ಕಾರ ಆಡಳಿತಾತ್ಮಕ ಹಿನ್ನೆಲೆಯಲ್ಲಿ ಈ ವಿಷಯವನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಲಿ. ನನಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚಕಮಕಿ ಮಾಡುವುದಕ್ಕೆ ಇಷ್ಟವಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದು ಚಕಮಕಿ ಅಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಈಗ adolescent period ಎಂದು ಸರ್ಕಾರ ಗುರುತಿಸಿದೆ. ಈಗ 18 ವರ್ಷವೆಂದು ಆ ಮಗುವಿಗೆ ಸವಲತ್ತು ಕೊಡುವುದರ ಬಗ್ಗೆ ನನ್ನ ತಕರಾರು ಇಲ್ಲ. ಆದರೆ, ಸವಲತ್ತು ಕೊಡಬೇಕು, ಕೊಡಬೇಕು ಎಂದರೆ, ಅದನ್ನು ಹೇಗೆ ಎಂದು ನಾವು ಕೆಲವೊಂದು framework ಅನ್ನು ದಾಟಿ ಹೋಗಬಾರದು ಎನ್ನುವಂತಹ ಕಾರಣಕ್ಕೆ ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

(ಮುಂದು)

(1125) 16.12.2021 04.10 LL-MD(VK)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್(ಮುಂದು)**

ಅತ್ಯಾಚಾರದ ಪ್ರಕರಣದಲ್ಲಿ juvenile cases ನಡೆದಿವೆ. ಅವುಗಳನ್ನು ನಾವು juvenile homes ಗೆ ಕಳುಹಿಸಿಕೊಡುತ್ತೇವೆ. ಅವುಗಳಿಗೆ ಶಿಕ್ಷೆ ವಿಧಿಸುವುದಿಲ್ಲ. ಅಂತಹ ಸಂದರ್ಭದಲ್ಲಿ ಅದನ್ನು 'ಶಿಶು' ಎಂದು ಪರಿಗಣಿಸಬೇಕಾದರೆ, ನಿಯಮಾವಳಿಗಳು ಒಂದೊಂದು ಕಡೆ ಒಂದೊಂದು ರೀತಿ ಆಗಬಾರದು ಎನ್ನುವ ಇಚ್ಛೆಯಿಂದ ಅದು ಆ ರೀತಿ ಆಗಬಾರದು. ಈ ಕಾರಣಕ್ಕೆ ಈ ರಜೆಯನ್ನು ಸ್ವಲ್ಪ ವೈಜ್ಞಾನೀಕರಣಗೊಳಿಸಲಿ ಎಂದು ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರ ಜೊತೆಯಲ್ಲಿ ಒಂದು ವಿಶೇಷವಾದ ಸಭೆಯನ್ನು ನಡೆಸಿ,

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

ಈ ವಿಷಯದ ಬಗ್ಗೆ ಅವರ ಸಲಹೆಗಳನ್ನು ಪಡೆದು, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ:462**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಲಾಗಿದೆ. ಆದರೆ, ಆ ಉತ್ತರ ನನಗೆ ಸಮಾಧಾನ ಕೊಡಲಿಲ್ಲ. ಈ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳು 2002ರಲ್ಲಿ ನೇಮಕಾತಿಯಾದಂತಹ ಸಬ್‌ಇನ್ಸ್‌ಪೆಕ್ಟರ್‌ಗಳಾಗಿದ್ದು, ಈಗಾಗಲೇ ಅವರು ಎಸ್.ಪಿ. ಹುದ್ದೆಗಳಲ್ಲಿರುತ್ತಾರೆ. ಆದರೆ, 1994ರಲ್ಲಿ ಸಿವಿಲ್ ಹುದ್ದೆಯಲ್ಲಿರುವಂತಹವರು ಇನ್ನೂ ಕೂಡ ಡಿ.ಸಿ.ಪಿ. ಮತ್ತು ಎ.ಸಿ.ಪಿ.ಗಳಾಗಿ ಕೆಲಸ ಮಾಡುತ್ತಿದ್ದಾರೆ. ಅದನ್ನು ಸರಿಪಡಿಸಬೇಕು. ಎರಡನೆಯದಾಗಿ, ನಮ್ಮ ರಾಜ್ಯದಲ್ಲಿ 150 ಐ.ಪಿ.ಎಸ್. ಹುದ್ದೆಗಳಿದ್ದು, ಅದರಲ್ಲಿ ಶೇಕಡ 40 ರಷ್ಟು ಹುದ್ದೆಗಳನ್ನು ಕೇಂದ್ರ ಸೇವೆಗೆ ಕಳುಹಿಸಬೇಕಾಗಿತ್ತು. ಅದನ್ನು ಏತಕ್ಕೆ ಕಳುಹಿಸಲಿಲ್ಲ? ಸದರಿ ಹುದ್ದೆಗಳನ್ನು ಕೇಂದ್ರ ಸೇವೆಗೆ ಕಳುಹಿಸದೇ ಇರುವುದರಿಂದ, ಸುಮಾರು 46 ಜನ ನಾನ್ ಐ.ಪಿ.ಎಸ್.ಗೆ ಹುದ್ದೆಗಳಿಗೆ ಸಿಗಬೇಕಾದ ಸೌಲಭ್ಯ ಸಿಕ್ಕಿರುವುದಿಲ್ಲ. ಅಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡುತ್ತಿರುವಂತಹ ನಾನ್ ಐ.ಪಿ.ಎಸ್. ಹುದ್ದೆಗಳಲ್ಲಿ ಐ.ಪಿ.ಎಸ್. ಅಧಿಕಾರಿಗಳು ಕುಳಿತಿರುತ್ತಾರೆ. ಇದರಿಂದಾಗಿ, ಸ್ಥಳೀಯ ಐ.ಪಿ.ಎಸ್. ಅಧಿಕಾರಿಗಳಿಗೆ ಹುದ್ದೆ ಸಿಗುತಿಲ್ಲ. ಅಲ್ಲದೇ, ಕೇಂದ್ರ ಸರ್ಕಾರ ಕೂಡ ಫೆಬ್ರುವರಿ 2020ರಲ್ಲಿ ಪತ್ರ ಬರೆದು ಶೇಕಡ 40ರಷ್ಟು ಐ.ಪಿ.ಎಸ್. ಅಧಿಕಾರಿಗಳನ್ನು ಕೇಂದ್ರಕ್ಕೆ ಕಳುಹಿಸಿಕೊಡಿ ಎಂದು ರಾಜ್ಯ ಸರ್ಕಾರಕ್ಕೆ ಕೇಳಿರುತ್ತಾರೆ. ಆದರೆ, ಆ ಹುದ್ದೆಗಳನ್ನು ನಮ್ಮ ರಾಜ್ಯದಿಂದ ಕಳುಹಿಸುತ್ತಿಲ್ಲ. ಆದುದರಿಂದ, ದಯಮಾಡಿ, ಸದರಿ ಹುದ್ದೆಗಳು ನಾನ್ ಐ.ಪಿ.ಎಸ್. ಹುದ್ದೆಗಳವರಿಗೆ ಸಿಗುವ ರೀತಿ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಸಿವಿಲ್ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ, ಮಂಜೂರಾತಿ ಬಲ ಹಾಗೂ ವೃಂದ ಮತ್ತು ನೇಮಕಾತಿ ನಿಯಮ ಮತ್ತು ಸಿ.ಐ.ಡಿ. ಘಟಕಕ್ಕೆ ಸಂಬಂಧಿಸಿದಂತೆ, ಮಂಜೂರಾತಿ ಬಲ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳು ಬೇರೆ ಬೇರೆಯಾಗಿರುತ್ತವೆ. ಆದರೆ, ಈ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳನ್ನು ನೇಮಕಾತಿ ಮಾಡಿಕೊಂಡಿರುವಂಥದ್ದು ಪ್ರತ್ಯೇಕವಾಗಿರುತ್ತದೆ. ಅದು ಸಿ.ಐ.ಡಿ. ಘಟಕಕ್ಕೆ ಸಂಬಂಧಪಟ್ಟಂತೆ ಬೇರೆಯಾಗಿರತಕ್ಕಂತಹ ನಿಯಾಮವಳಿಗಳ ಪ್ರಕಾರ ಅವರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಆದ್ದರಿಂದ, ಅವರು ಅಲ್ಲಿರತಕ್ಕಂತಹ ಖಾಲಿ ಸ್ಥಾನ ಮತ್ತು ಪ್ರಮೋಷನ್ ಇರತಕ್ಕಂತಹ ಅವಕಾಶಗಳ ಆಧಾರದ ಮೇಲೆ ಅವರಿಗೆ ಬೇಗ ಪ್ರಮೋಷನ್ ಹೋಗುತ್ತದೆ. ಸಿ.ಐ.ಡಿ. ಯಿಂದ ಯಾರು ಡಿಟೆಕ್ಟಿವ್ ಆಗಿ ಹೋಗುತ್ತಾರೆ, ಅವರಲ್ಲಿ ಕೇವಲ 8 ಜನರನ್ನು ಮಾತ್ರ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಅವರು ಸಿವಿಲ್ ವಿಭಾಗಕ್ಕೆ ಯಾವತ್ತೂ ಕೂಡ ಬರುವುದೇ ಇಲ್ಲ. ಹಾಗಾಗಿ, ಅವರಿಗೆ ಎಸ್.ಪಿ. ಹುದ್ದೆ ಬೇಗ ಸಿಕ್ಕಿರುತ್ತದೆ. 1994ರಲ್ಲಿ ಆಯ್ಕೆಯಾಗಿರುವಂತಹ ಸಬ್‌ಇನ್ಸ್‌ಪೆಕ್ಟರ್‌ಗಳು ಸಿವಿಲ್‌ನಲ್ಲಿ ಯಾರಿದ್ದಾರೆ,

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅವರಿಗಿಂತಲೂ 2002ರಲ್ಲಿ ನೇಮಕವಾದಂತಹ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳು ಇವೊತ್ತಿನ ದಿವಸ ಎಸ್.ಪಿ.ಗಳಾಗಿ ಹೋಗಿದ್ದಾರೆ. ಹಾಗಾಗಿ, ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಹುದ್ದೆಗಳು ಸಿವಿಲ್ ವಿಭಾಗಕ್ಕೆ ಸಂಬಂಧ ಬರುವುದಿಲ್ಲ ಮತ್ತು ಬೇರೆ ಬೇರೆ ಡಿಟೆಕ್ಟಿವ್ ವಿಭಾಗಗಳು ಇವೆ ಅಂದರೆ, ಲೋಕಾಯುಕ್ತ ವಿಭಾಗ, ಸಿ.ಐ.ಡಿ. ಮತ್ತು ಸೈಬರ್ ವಿಭಾಗದಲ್ಲಿ ಮಾತ್ರ ಅವರು ಕಾರ್ಯನಿರ್ವಹಿಸುತ್ತಿರುತ್ತಾರೆ. ಹಾಗಾಗಿ, ಇದು ಅವರಿಗೆ ಅನ್ವಯವಾಗುವುದಿಲ್ಲ. ಆ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳು ಕೇವಲ 8 ಜನ ಮಾತ್ರ ಇರುತ್ತಾರೆ. ಆದರೆ, ಸಿವಿಲ್ ವಿಭಾಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಹಾಗಾಗಿ, ಖಾಲಿ ಹುದ್ದೆಗಳು ಇರುವಂಥದ್ದು ಬಹಳ ಕಡಿಮೆ. ಅದರಂತೆ, ಹುದ್ದೆಗಳು ಖಾಲಿಯಾದಂತೆ ಪ್ರಮೋಷನ್ ಕೊಡುತ್ತಾ ಬರುತ್ತೇವೆ.

ಇತ್ತೀಚೆಗೆ 26 ಜನ ಕರ್ನಾಟಕದ ಪೊಲೀಸ್ ಅಧಿಕಾರಿಗಳಿಗೆ ಐ.ಪಿ.ಎಸ್. ಹುದ್ದೆ ನೀಡಲಾಗಿರುತ್ತದೆ. ಇದು ತಮಗೆ ಗೊತ್ತಿರಬಹುದು. ಅಲ್ಲದೇ, ಇದು ಕರ್ನಾಟಕ ರಾಜ್ಯದ ಪೊಲೀಸ್ ಇತಿಹಾಸದಲ್ಲಿ ಪ್ರಥಮ ಬಾರಿಗೆ ಒಂದು ವರ್ಷಕ್ಕೆ 26 ಜನಕ್ಕೆ ಐ.ಪಿ.ಎಸ್. ಹುದ್ದೆ ಸಿಕ್ಕಿರುತ್ತದೆ ಎನ್ನುವಂಥದ್ದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಒಂದೊಂದು ಸಾರಿ ನಮಗೆ ಪ್ರಮೋಷನ್ ಅವಕಾಶಗಳೇ ಇರುವುದಿಲ್ಲ. ಐ.ಪಿ.ಎಸ್. ಆಗಲಿ ಅಥವಾ ಇನ್ನಿತರ ಕ್ವಾಲಿಫಿಕೇಷನ್ ಇರುವುದೇ ಇಲ್ಲ ಅಥವಾ ಅವಧಿ ಆಗಿರುವುದಿಲ್ಲ. ಆದುದರಿಂದ, ಇದು ಒಂದಕ್ಕೊಂದು ಘರ್ಷಣೆ ಆಗುವುದಕ್ಕೆ ಸಾಧ್ಯವಿರುವುದಿಲ್ಲ. ಜೊತೆಗೆ, ಮಾನ್ಯ ಸದಸ್ಯರು, ಐ.ಪಿ.ಎಸ್. ಅಧಿಕಾರಿಗಳನ್ನು ಎಸ್.ಪಿ. ಹುದ್ದೆಗೆ ನೇಮಕಾತಿ ಮಾಡುವುದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಐ.ಪಿ.ಎಸ್. ವೃಂದದಲ್ಲಿ 57 ಹುದ್ದೆಗಳ ಮಂಜೂರಾತಿ ಇರುತ್ತದೆ. ಆದರೆ, ನಮ್ಮ ರಾಜ್ಯದಲ್ಲಿ ಈಗಾಗಲೇ 116 ಜನ ಇದ್ದಾರೆ. ಹಾಗಾಗಿ, ಅವರನ್ನು ಬೇರೆ ಬೇರೆ ಕಡೆಗೆ ಕಳುಹಿಸಬೇಕೇ ಹೊರತು ಡಿಟೆಕ್ಟಿವ್ ಹುದ್ದೆಗಳಲ್ಲಿ ಹಾಕುವುದಕ್ಕೆ ಅವಕಾಶ ಇರುವುದಿಲ್ಲ. ಅಲ್ಲದೇ, ಮಾನ್ಯ ಸದಸ್ಯರು ಮತ್ತೊಂದು ಪ್ರಶ್ನೆ ಕೇಳಿರುವುದರಲ್ಲಿ ಈಗಾಗಲೇ 7 ಜನ ಐ.ಪಿ.ಎಸ್. ಅಧಿಕಾರಿಗಳು ಕೇಂದ್ರ ಸೇವೆಗೆ ಹೋಗಿರುತ್ತಾರೆ. ಇನ್ನು ನಿಯಮಾವಳಿಗಳ ಪ್ರಕಾರ ಎಷ್ಟು ಜನ ಹೋಗುವುದಕ್ಕೆ ಅವಕಾಶ ಇದೆ ಅಷ್ಟು ಹುದ್ದೆಗಳನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನು ಸಮಸ್ಯೆ ಏನಾಗಿದೆಯೆಂದರೆ, ನಮ್ಮ ಕರ್ನಾಟಕ ರಾಜ್ಯದವರಿಗೆ ಸಿಗಬೇಕಾದಂತಹ 46 ಹುದ್ದೆಗಳಲ್ಲಿ ಐ.ಪಿ.ಎಸ್. ಅಧಿಕಾರಿಗಳು ಕುಳಿತಿರುತ್ತಾರೆ. ಅವರನ್ನು ಕೇಂದ್ರ ಸರ್ಕಾರದ ಸೇವೆಗೆ ಕಳುಹಿಸಬೇಕಾಗಿತ್ತು. ಆದರೆ, ಶೇಕಡ 40ರಷ್ಟು ಹುದ್ದೆಗಳನ್ನು ಕೇಂದ್ರ ಸೇವೆಗೆ ಕಳುಹಿಸಿರುವುದಿಲ್ಲ. ಅದರಿಂದಾಗಿ, ಈ ತೊಂದರೆ ಆಗುತ್ತಿರುತ್ತದೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿಯೂ ಸಹ ಇದೇ ಪ್ರಶ್ನೆಯನ್ನು ಕೇಳಿದ್ದು, ಆಗಲೂ ಸಹ ಇದೇ ಉತ್ತರವನ್ನು ನೀಡಲಾಗಿರುತ್ತದೆ. ಈ ವಿಚಾರದಲ್ಲಿ ಬಹಳ ಅನ್ಯಾಯವಾಗಿರುತ್ತದೆ. ಆದುದರಿಂದ, ಈ ಬಗ್ಗೆ ಮಾನ್ಯ ಸಚಿವರು ಒಂದು ಸಭೆ ಕರೆದು, ಆ ಸಭೆಗೆ ಆಹ್ವಾನಿಸಬೇಕು. ಆ ಸಭೆಯಲ್ಲಿ ನಾವು ಸಮಂಜಸವಾದ

ಎಲ್ಲಾ ಮಾಹಿತಿಯನ್ನು ಕೊಡುತ್ತೇವೆ. ಆ ಮಾಹಿತಿ ಕಾನೂನು ಬದ್ಧವಾಗಿದ್ದರೆ ಅದರಂತೆ ಅವರು ಕ್ರಮ ತೆಗೆದುಕೊಳ್ಳಲಿ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರನ್ನು ಕರೆದು ನಮ್ಮ ಅಧಿಕಾರಿಗಳೊಂದಿಗೆ ಒಂದು ಸಭೆ ಮಾಡುತ್ತೇವೆ. ಒಂದು ವೇಳೆ ಅದರಲ್ಲಿ ಏನಾದರೂ ಗೊಂದಲಗಳಿದ್ದರೆ ಅದನ್ನು ಸರಿ ಮಾಡೋಣ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಪ್ರಶ್ನೆ ಸಂಖ್ಯೆ:425**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವ ಮೊದಲನೇ ಎರಡು ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರವನ್ನು ಓದಲು ಭೂತಗನ್ನಡಿ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಏಕೆಂದರೆ, ಆ ಉತ್ತರ ಸರಿಯಾಗಿ ಕಾಣಿಸುವುದೇ ಇಲ್ಲ. ಇದಕ್ಕೆ ಯಾವ ಕನ್ನಡಕ ಹಾಕಿಕೊಂಡು ನೋಡಬೇಕೋ ಅದನ್ನು ನನಗೆ ಕೊಟ್ಟರೆ ಅನುಕೂಲವಾಗುತ್ತದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಉತ್ತರದ ಮತ್ತೊಂದು ಪ್ರತಿಯನ್ನು ಈಗಲೇ ಕಳುಹಿಸಿಕೊಡುತ್ತೇನೆ. ಅದರೆ ಜೊತೆಗೆ, ಇದರಲ್ಲಿ ಉಪ ಪ್ರಶ್ನೆ ಇದ್ದರೆ ಅದನ್ನು ಕೇಳಲಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು ಉತ್ತರ ಕಳುಹಿಸಿಕೊಡಲಿ. ಏಕೆಂದರೆ, ಅಧಿಕಾರಿಗಳು ಉತ್ತರವನ್ನು ದಪ್ಪ ಅಕ್ಷರಗಳಲ್ಲಿ ಕಳುಹಿಸಿಕೊಟ್ಟಿರುವುದಿಲ್ಲ. ನನ್ನ 3ನೇ ಪ್ರಶ್ನೆಯಲ್ಲಿ ಈ ಎತ್ತಿನಹೊಳೆ ಯೋಜನೆಗೆ ಸಂಬಂಧಪಟ್ಟಂತೆ, ರಾಮನಗರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯಲ್ಲಿ ಕಾಮಗಾರಿಗಳು ನಡೆಯುತ್ತಿರುತ್ತವೆ. ದಯಮಾಡಿ, ಹಾಸನ ಜಿಲ್ಲೆಯಲ್ಲಿ ಕಾಮಗಾರಿ ಮಾಡಿ, ಬೇಲೂರು, ತುಮಕೂರು ಆ ಭಾಗದಲ್ಲಿ ನೀರು ಸಿಗುವಂಥದ್ದು ಆಗಬೇಕು. ಏಕೆಂದರೆ, ಎತ್ತಿನಹೊಳೆ ಯೋಜನೆಯ ನೀರು ಕೋಲಾರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೂ ಹೋಗಲಿ. **(ಗೊಂದಲ)** ಈ ಉತ್ತರದಲ್ಲಿ ರಾಮನಗರ ಜಿಲ್ಲೆಯ ಮಾಹಿತಿ ನೀಡುವುದರಿಂದ, ತುಮಕೂರು ಭಾಗದಲ್ಲಿ ಕಾಮಗಾರಿ ಆಗಬೇಕು ಮತ್ತು under channel ಏನು ಆಗಿರುತ್ತದೆ. ಅಲ್ಲಿಯೂ ಸಹ ಕೆಲಸ ನಡೆಯುತ್ತಿರುವುದಿಲ್ಲ. ಮಾನ್ಯ ಸಚಿವರು ಕಳೆದ ಜೂನ್ ತಿಂಗಳಿನಲ್ಲಿ ಬಂದಾಗ ಈ ಬಗ್ಗೆ ಭರವಸೆ ನೀಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ಸಹ ಅವರ ಜೊತೆ ಅಲ್ಲಿಗೆ ಭೇಟಿ ನೀಡಿರುತ್ತೇನೆ. ಅಲ್ಲಿ ಒಂದು ಕಿಲೋಮೀಟರ್ ಸಮಸ್ಯೆ ಇದ್ದು, ಅದನ್ನು ಸಹ ಅವರು ಬಗೆಹರಿಸಿರುತ್ತಾರೆ. ಆದರೆ, under channel ಕೆಲಸ ಸರಿಯಾಗಿ ಆಗುತ್ತಿರುವುದಿಲ್ಲ. ಈ ಯೋಜನೆಯಲ್ಲಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ನೀರು ಕೊಡುತ್ತೇವೆಂದು ಹೇಳಿದ್ದು, ಈಗಾಗಲೇ ಮಾರ್ಚ್ ತಿಂಗಳಿನಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅಲ್ಲದೇ, ಈಗಾಗಲೇ ಸದರಿ ಯೋಜನೆಗಾಗಿ 12 ಸಾವಿರ ಕೋಟಿ ರೂಪಾಯಿ ಹಣ ಬಜೆಟ್ ಆಗಿದ್ದು, ಪುನಃ 12 ಸಾವಿರ ಕೋಟಿ ರೂಪಾಯಿ ಹಣ ಬೇಕು. ಈ ರೀತಿ ಸಾವಿರಾರು ಕೋಟಿ ರೂಪಾಯಿ ಸರ್ಕಾರದ ಹಣ ಪೋಲಾಗುವುದರ ಬದಲಾಗಿ ಹಂತ-ಹಂತವಾಗಿ ಕೆಲಸ ಆಗಬೇಕೆನ್ನುವುದು ನನ್ನ ಒತ್ತಾಯ. ಆ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

---

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ಯೋಜನೆಯ ಬಗ್ಗೆ ಸ್ವತಃ ನಾನೇ ಎತ್ತಿನಹೊಳೆ ಯೋಜನೆಯ ಉಗಮ ಸ್ಥಾನಕ್ಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ, ಕೇವಲ 10 ಗುಂಟೆ ಜಮೀನು ಇರುವಂತಹ ಜಾಗ ಸಹ ಕೋರ್ಟ್‌ನಲ್ಲಿದ್ದುದರಿಂದ, ಯೋಜನೆಯ ಕೆಲಸ ಪೂರ್ಣ ಆಗಿರಲಿಲ್ಲ. ಆ ಜಾಗಕ್ಕೆ ಸಂಬಂಧಪಟ್ಟವರನ್ನು ವಿಧಾನಸೌಧದಲ್ಲಿರುವ ನನ್ನ ಕಛೇರಿಗೆ ಆಹ್ವಾನಿಸಿ, ಜೊತೆಗೆ ಜಯಪ್ರಕಾಶ್ ಹೆಗಡೆ ಮತ್ತು ಅವರ ಮಿತ್ರರು, ಸಂಬಂಧಿಕರು ಮತ್ತು ಕಾಫಿಪ್ಲಾಂಟ್ ಮಾಲೀಕರನ್ನು ಕರೆಯಿಸಿ, ಅಲ್ಲಿದ್ದಂತಹ ಸಮಸ್ಯೆಯನ್ನು ಬಗೆಹರಿಸಿರುತ್ತೇನೆ. ಇದರಿಂದಾಗಿ, ಅಲ್ಲಿ ಭೂಸ್ವಾಧೀನ ಸಮಸ್ಯೆ ಬಗೆಹರಿದಿರುತ್ತದೆ. 0.00 ಯಿಂದ 31.00 ವರೆಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಪರಿಹಾರ ಸಹ ನೀಡಲಾಗಿರುತ್ತದೆ. 31.00 ಯಿಂದ 100.00 ವರೆಗೆ ಅವಾರ್ಡ್ ಪಾಸ್ ಮಾಡಿದ್ದು, ಅದಕ್ಕೆ 400 ಕೋಟಿ ರೂಪಾಯಿ ಹಣ ಬೇಕಾಗಿರುತ್ತದೆ. ನಾನು ಈ ವಿಷಯದಲ್ಲಿ ಹೇಳುವುದೇನೆಂದರೆ, ಸದರಿ ಯೋಜನೆಯಲ್ಲಿ ಇದ್ದಂತಹ ಭೂಸ್ವಾಧೀನ ಪ್ರಕ್ರಿಯೆಯ ಸಮಸ್ಯೆಗಳನ್ನೆಲ್ಲವನ್ನೂ ಈಗಾಗಲೇ ಬಗೆಹರಿಸಲಾಗಿರುತ್ತದೆ. ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ನಡೆದ ಸಭೆಗೆ ಮಾನ್ಯ ಸದಸ್ಯರನ್ನು ಸಹ ಆಹ್ವಾನಿಸಲಾಗಿರುತ್ತದೆ. ಸದರಿ ಯೋಜನೆಯನ್ನು ಮಾರ್ಚ್ ತಿಂಗಳಿನಲ್ಲಿ ಪೂರ್ಣಗೊಳಿಸುತ್ತೇವೆಂದು ಏತಕ್ಕೆ ಹೇಳಿದ್ದೇವೆಂದರೆ, ಹಾಸನ ಜಿಲ್ಲೆಯಲ್ಲಿ ಬರುವಂತಹ ಲಿಫ್ಟ್ ವರ್ಕ್ ಮತ್ತು ಎಲೆಕ್ಟ್ರಿಕಲ್ ವರ್ಕ್‌ಗಳು ಬಹುತೇಕ ಪೂರ್ಣಗೊಳ್ಳುತ್ತವೆ. ಇದರಲ್ಲಿ ನಾವು ಸ್ವಲ್ಪ ಹೆಚ್ಚಿಗೆ ಅವಧಿ ಹೇಳಿದ್ದೇವೆ. ಏಕೆಂದರೆ, ತದನಂತರ ಯಾವುದಾದರೂ ಸಣ್ಣ-ಪುಟ್ಟ ಸಮಸ್ಯೆ ಬಂದು ವಿಳಂಬವಾಗಬಾರದೆಂಬ ಕಾರಣಕ್ಕಾಗಿ ನಾವು ಮಾರ್ಚ್-2022 ತಿಂಗಳ ಅಂತ್ಯಕ್ಕೆ ಎಂದು ಹೇಳಿರುತ್ತೇವೆ. ಮುಂದಿನ ಮುಂಗಾರಿನ ಹಂಗಾಮಿನಲ್ಲಿ 10 ಟಿ.ಎಂ.ಸಿ. ನೀರನ್ನು ಜಲಾಶಯಕ್ಕೆ ತುಂಬಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

(ಮುಂದು)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(1126) 16.12.2021 4.20 YL-AK (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ 448**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ 'ಬಿಟ್ ಕಾಯಿನ್' ಹಗರಣಕ್ಕೆ ಸಂಬಂಧಿಸಿದಂತೆ ನಾನು ಪ್ರಶ್ನೆಯನ್ನು ಕೇಳಿದ್ದು, ಕಳೆದ ೩ ವರ್ಷಗಳಲ್ಲಿ ಒಟ್ಟು 11 ಪ್ರಕರಣಗಳು ದಾಖಲಾಗಿರುತ್ತವೆ. 1 ಪ್ರಕರಣದಲ್ಲಿ ಬಿ ವರದಿ ನೀಡಲಾಗಿದ್ದು, 5 ಪ್ರಕರಣಗಳಲ್ಲಿ ತಲೆಮರೆಸಿಕೊಂಡಿದ್ದು, ಇನ್ನೂ ವರದಿ ಸಿಕ್ಕಿರುವುದಿಲ್ಲ. ಇನ್ನುಳಿದ 5 ಪ್ರಕರಣಗಳಲ್ಲಿ ಸ್ವಲ್ಪ ಅವ್ಯವಹಾರವಾಗಿದ್ದು, ಅದೆಲ್ಲವನ್ನೂ ರಿಕವರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಪ್ರಕರಣವು ಈ ರಾಜ್ಯದಲ್ಲಿ ಒಂದು ರೀತಿ ಸಂಚಲನ ಮೂಡಿಸಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಬಹಳಷ್ಟು ಜನರ ವಿಶ್ಲೇಷಣೆಗಳು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಆದರೆ, ಸರ್ಕಾರ ಇದನ್ನು ಮುಚ್ಚಿ ಹಾಕುವ ನಿಟ್ಟಿನಲ್ಲಿ ಯಾವುದೇ ತ್ವರಿತಗತಿಯಲ್ಲಿ ತಪಾಸಣೆ ಮಾಡುವಂಥ ಕಾರ್ಯವನ್ನು ಮಾಡಲಿಲ್ಲ. ಶ್ರೀಕಿ ಎನ್ನುವ ಹುಡುಗ 3 ವರ್ಷಗಳ ಹಿಂದೆ ಪೊಲೀಸ್ ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ, ಆಗ ಆತನನ್ನು ಬಿಟ್ಟುಬಿಡುತ್ತಾರೆ. ಅದಾದ ನಂತರ ಸಹ ಈ ಹುಡುಗ ಹ್ಯಾಕಿಂಗ್ ಮಾಡುತ್ತಲೇ ಇರುತ್ತಾನೆ, ಹಾಗಾಗಿ ಪೊಲೀಸ್‌ನವರು ಆತನನ್ನು ಅರೆಸ್ಟ್ ಮಾಡುತ್ತಿರುತ್ತಾರೆ. ಪ್ರತಿ ಸಲ ಅರೆಸ್ಟ್ ಮಾಡಿದಾಗಲೂ ಆತನಿಗೆ bailable offence ಗೆ ಹಾಕುವಂತಹ ಸೆಕ್ಷನ್ಸ್ ಹಾಕಿ, ಸಲೀಸಾಗಿ ಜಮೀನು ಸಿಗುವ ಹಾಗೆ ಪೊಲೀಸ್‌ನವರು ಮಾಡುತ್ತಾರೆ. ಈ ವಿಚಾರವಾಗಿ ಇನ್ನು ಹೆಚ್ಚಿಗೆ ಹೇಳುವುದಾದರೆ, ಆತ ಸರ್ಕಾರದ e-procurement portal ನ್ನು ಸಹ ಹ್ಯಾಕ್ ಮಾಡಿ, ರೂ.11.50 ಕೋಟಿಗಳಷ್ಟು ಹಣವನ್ನು ತೆಗೆದುಕೊಂಡಿದ್ದಾನೆ. ಅದರಲ್ಲಿ 26, 27 ಲಕ್ಷ ಹಣವನ್ನು ರಿಕವರಿ ಮಾಡಿದ್ದಾರೆ. ಆದರೆ, ಸರ್ಕಾರ ಆತನನ್ನು ಬಂಧಿಸಿ ಏತಕ್ಕೆ ಹಣವನ್ನು ತೆಗೆದುಕೊಳ್ಳಲಿಲ್ಲ? ಪೊಲೀಸ್‌ನವರು ಸುಮಾರು ಸಲ ಆತನನ್ನು ಬಂಧಿಸಿ bailable sections ಹಾಕುವಂಥ ಅವಶ್ಯಕತೆ ಏನಿತ್ತು? ನಮ್ಮ ಪೊಲೀಸ್ ಎಂದರೆ, ಈ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ಒಂದು ಒಳ್ಳೆಯ ಹೆಸರು ಇದೆ. ಏಕೆಂದರೆ, ಅಮರ್‌ಕುಮಾರ್ ಪಾಂಡೆಯವರು ಈ ಭೂಗತ ಪಾತಕಿ 'ಚೋಟಾ ರಾಜನ್' ಎನ್ನುವವನನ್ನು ಬಂಧಿಸಿ ಕರೆದುಕೊಂಡು ಬಂದಾಗ ಇಂತಹ ಪೊಲೀಸ್ ಅಧಿಕಾರಿ ನಮ್ಮಲ್ಲಿ ಇದ್ದಾರೆ ಎಂದು ಪ್ರಪಂಚವೇ ಹೆಗ್ಗಳಿಕೆ ಹೊಂದಿತ್ತು. ಆದರೆ, ಈ ಪ್ರಕರಣದಲ್ಲಿ ಏತಕ್ಕೆ ಈ ರೀತಿ ಆಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರು ಉತ್ತರ ನೀಡಿದ ನಂತರ ಮತ್ತೊಮ್ಮೆ ಇದರ ಬಗ್ಗೆ ದೀರ್ಘವಾಗಿ ಪ್ರಶ್ನೆಯನ್ನು ಮಾಡಲು ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಿಸಿದಂತೆ, ಏನೇನು ಹಗರಣಗಳು ನಡೆದಿವೆ ಎಂಬುದರ ಮಾಹಿತಿಯನ್ನು ಸಲ್ಲಿಸಲಾಗಿದೆ. ಹಗರಣ ಎಂದು ಹೇಳುವುದಕ್ಕಿಂತ ಇದೊಂದು ರೀತಿ ಮೋಸವಾಗಿದೆ. ಅದೇನೆಂದರೆ, 'ಬಿಟ್ ಕಾಯಿನ್' ನೀಡುತ್ತೇನೆ ಎಂದು ಶ್ರೀಕಿ ಎಂಬ ಹುಡುಗ ರೂ.40 ಲಕ್ಷ, ರೂ.20 ಲಕ್ಷ, ರೂ.15 ಲಕ್ಷ ಈ ರೀತಿಯಾಗಿ ಹಣವನ್ನು ತೆಗೆದುಕೊಂಡಿದ್ದಾನೆ. ಶ್ರೀಕಿ ಎಂಬ ಹುಡುಗ ಎರಡು ಘಟನೆಯಲ್ಲಿ ಮಾತ್ರ ಭಾಗಿಯಾಗಿದ್ದು, ಉಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದರಲ್ಲಿ ಬೇರೆ-ಬೇರೆಯವರು ಭಾಗಿಯಾಗಿದ್ದಾರೆ. ಇಂತಹ ಒಂದು ದೊಡ್ಡ ಜಾಲ ನಮ್ಮ ರಾಜ್ಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡಿದೆ. ಹಾಗಾಗಿ ಇದರ ಮೇಲೆ ಬಹಳಷ್ಟು ಜನ ಹಣವನ್ನು invest ಮಾಡಿ, ಕಳೆದುಕೊಂಡಿದ್ದಾರೆ. ನಮ್ಮ ಪೊಲೀಸ್‌ನವರು ಬಹಳ ಪ್ರಾಮಾಣಿಕವಾಗಿ ಇದರ ಮೇಲೆ ಸಮರ ಸಾರಿ ಕೆಲವು ಆಪಾದಿತರನ್ನು ಕರೆದುಕೊಂಡು ಬಂದಿದ್ದಾರೆ, ಸ್ವಲ್ಪ ಹಣವನ್ನು ವಸೂಲಾತಿ ಮಾಡಿದ್ದು, ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ನೀಡಿದ್ದೇನೆ. ಶ್ರೀಕಿ ಎಂಬ ಹುಡುಗ dark web ಮೂಲಕ ಗಾಂಜಾ ಸರಬರಾಜು ಮಾಡುವಂಥ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾಗ, ಆತನನ್ನು ಪೊಲೀಸ್‌ನವರು ಬಹಳ ಆಳವಾಗಿ ವಿಚಾರಣೆ ನಡೆಸಿದ್ದಾಗ, ಆತ ಒಬ್ಬ 'ಬಿಟ್ ಕಾಯಿನ್ ಹ್ಯಾಕರ್' ಎಂಬ ಮಾಹಿತಿ ಗೊತ್ತಾಯಿತು. ಅದರಂತೆ ನಮ್ಮ ಪೊಲೀಸ್‌ನವರು ಆತ ಏನೇನು ಹೇಳಿಕೆಯನ್ನು ನೀಡಿದ್ದಾನೆ, ಅದೆಲ್ಲವನ್ನೂ ರೆಕಾರ್ಡ್ ಮಾಡಿಕೊಂಡು ಎಫ್.ಐ.ಆರ್., ಚಾರ್ಜ್‌ಶೀಟ್, ಹಾಕಿದ್ದಾರೆ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಯವರಿಗೆಲ್ಲಾ ಈ ಬಗ್ಗೆ ಮಾಹಿತಿಯನ್ನು ತಿಳಿಸಿದ್ದಾರೆ. ಆತ ನಮ್ಮ ರಾಜ್ಯದಲ್ಲಿ ಯಾವ ಕೆಲಸವನ್ನು ಮಾಡಿದ್ದಾನೆ, ಆ ಸಂಬಂಧ ಆತನ ಮೇಲೆ ಯಾವ ಸೆಕ್ಷನ್ ಜಾರಿಗೊಳಿಸಬಹುದು ಅದೆಲ್ಲವನ್ನೂ ಮಾಡಲಾಗಿದೆ. ಇದರಿಂದಾಗಿ ನ್ಯಾಯಾಲಯವು ಆತನಿಗೆ ಜಾಮೀನು ನೀಡಿದೆ. ಈಗ ಸಹ ಆತ ನಾಲ್ಕೈದು ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಹೊರಗೆ ಇದ್ದಾನೆ. ಆತನ ಜೊತೆಗೆ ಬೇರೆ ಬೇರೆಯವರನ್ನು ಸಹ ಬಂಧಿಸಲಾಗಿದೆ. ಬೇರೆಯವರ ಖಾತೆಯಲ್ಲಿ ಸಹ ಆತ 'ಬಿಟ್ ಕಾಯಿನ್' ನ್ನು ಹ್ಯಾಕ್ ಮಾಡುತ್ತಿದ್ದ ಎಂಬ ಕಾರಣದಿಂದ ಸ್ವಲ್ಪ ಹಣವನ್ನು ವಸೂಲಾತಿ ಮಾಡಲಾಗಿದೆ. e-procurement portal ನ್ನು ಹ್ಯಾಕ್ ಮಾಡಿದ್ದು, ಅದರ ಮೇಲೆ ಚಾರ್ಜ್‌ಶೀಟ್ ಹಾಕಲಾಗಿದೆ. ಎಲ್ಲಾ ಪ್ರಕರಣಗಳ ಮೇಲೆ ಸಹ ಸರಿಯಾಗಿಯೇ ಮೊಕದ್ದಮೆ ಹೂಡಲಾಗಿದೆ. ಆತನನ್ನು ಉಳಿಸುವಂತಹ ಅಗತ್ಯ ಯಾರಿಗೂ ಇಲ್ಲ, ಆತನನ್ನು ಏನು ಮಾಡಬಹುದೋ ಅದನ್ನು ಮಾಡಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಉಳಿಸುವ ಅಗತ್ಯವಿಲ್ಲ ಎನ್ನುವಂಥ ಮಾತನ್ನು ಮಾನ್ಯ ಸಚಿವರು ಹೇಳಿದರು. ಆದರೆ, ಶ್ರೀಕಿ ತಂದೆ 'ನನ್ನ ಮಗನಿಗೆ ಪೊಲೀಸ್‌ನವರು ಗಾಂಜಾ ಕೊಡುತ್ತಿದ್ದಾರೆ' ಎಂದು ನ್ಯಾಯಾಲಯದಲ್ಲಿ ಹೇಳುತ್ತಾರೆ. ಅದಕ್ಕೆ Magistrate 'ದಯವಿಟ್ಟು

ಆತನಿಗೆ ವೈದ್ಯಕೀಯ ಪರೀಕ್ಷೆ ಮಾಡಿಸಿ' ಎಂದು ತಿಳಿಸುತ್ತಾರೆ. ಪೊಲೀಸ್‌ನವರು ಆತನನ್ನು ಬೆಂಗಳೂರು ಮೆಡಿಕಲ್ ಕಾಲೇಜ್‌ಗೆ ಕರೆದುಕೊಂಡು ಹೋಗಿ ಹೊಟ್ಟೆಯನ್ನು ಕ್ಲೀನ್ ಮಾಡಿಸುತ್ತಾರೆ. ಆದರೆ ಆತನಿಗೆ ಮೂತ್ರ ಪರೀಕ್ಷೆ ಮಾಡಿಸಬೇಕಾಗಿತ್ತು. ಆನಂತರ ಅಯ್ಯೋ ಹೊಟ್ಟೆ ಕ್ಲೀನ್ ಮಾಡಿಸಬಾರದಾಗಿತ್ತು ಎಂದು ಬೇರೆ ಒಂದು diagnostic center ಗೆ ಕರೆದುಕೊಂಡು ಹೋಗಿ ಮೂತ್ರ ಪರೀಕ್ಷೆ, ಇತರೆ ಪರೀಕ್ಷೆಯನ್ನು ಮಾಡಿಸುತ್ತಾರೆ. ಈ ರೀತಿ ಮಾಡುವುದನ್ನು ಎಲ್ಲಿಯಾದ್ದರೂ ಕೇಳಿದ್ದೀರಾ? ಆಮೇಲೆ ಇದಕ್ಕೆ ಪಂಚನಾಮೆ ಬರೆಯಲಾಗುತ್ತದೆ. ಪಂಚನಾಮೆಗೆ ರುಜು ಹಾಕುವವರು ಯಾರು? ಒಬ್ಬ ಲೈನ್‌ಮ್ಯಾನ್ 31 ಬಿಟ್ ಕಾಯಿನ್ ಸಿಕ್ಕಿದಾಗ ಪಂಚನಾಮೆಗೆ ರುಜು ಹಾಕುತ್ತಾನೆ. ಅದೇ ರೀತಿ 8 ಬಿಟ್ ಕಾಯಿನ್ ಸಿಕ್ಕಿದ ಮೇಲೆ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಸಹಿ ಹಾಕುತ್ತಾರೆ. ಪೊಲೀಸ್‌ನವರು ಶ್ರೀಕಿ ಎಂಬ ಹುಡುಗನನ್ನು ಕೂರಿಸಿಕೊಂಡು, ಸಾವಿರಾರು 'ಬಿಟ್ ಕಾಯಿನ್' ಅನ್ನು ಹ್ಯಾಕ್ ಮಾಡಿಸಿದ್ದಾರೆ. ಇದರಲ್ಲಿ officials, ರಾಜಕೀಯದವರು ಸೇರಿದ್ದಾರೆ ಎಂದು ಮೊದಲಿನಿಂದ ನೀವು ಹೇಳುತ್ತಾ ಬಂದಿದ್ದು, ಅವರು ಯಾರು ಎಂದು ಹೆಸರನ್ನು ಹೇಳಲಿ. ಇಷ್ಟು ದಿವಸಗಳು ಕಳೆದರೂ ಎಷ್ಟು ಪ್ರಕರಣಗಳಿವೆ ಎಂಬ ಮಾಹಿತಿಯನ್ನು ನೀಡಲಿಲ್ಲ. ಇವತ್ತು ನಾವು ಪ್ರಶ್ನೆಯನ್ನು ಕೇಳಿದ ಮೇಲೆ ಇಷ್ಟು ಪ್ರಕರಣಗಳಿವೆ ಎಂದು ಉತ್ತರ ನೀಡಿದ್ದಾರೆ. ಏತಕ್ಕೆ ಆತನಿಗೆ ಮಾಡಿಸಬೇಕಾದ ಪರೀಕ್ಷೆಯನ್ನು ಬಿಟ್ಟು, ಬೇರೆ ರೀತಿಯ ಪರೀಕ್ಷೆ ಮಾಡಿಸುವ ಅವಶ್ಯಕತೆ ಏನಿತ್ತು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದ ಆರೋಪವಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಆರೋಪ ಮಾಡುತ್ತಿಲ್ಲ. ಈ ಸಂಬಂಧ ಇನ್ನೂ ನನ್ನ ಮಾತು ಮುಗಿದಿಲ್ಲ. ನನಗೆ ಬಂದ ಮಾಹಿತಿ ಪ್ರಕಾರ D.G., C.I.D ರವರೆ ನಿಮ್ಮ D.G.ಗೆ 'ಯಾರು ಕೇಸು ಎಷ್ಟೆಷ್ಟು ಆಗಿವೆ' ಎಂದು ಪತ್ರ ಬರೆದಿದ್ದು, ಅದು ನಿಜವೇ, ಸುಳ್ಳೇ ಎಂಬುದನ್ನು ಸರ್ಕಾರವೇ ಹೇಳಬೇಕು. ನಂತರ E.D (Enforcement Directorate) ಯವರು ಸಹ 'a case has been registered against the top police officials by E.D, ECIR, FIR' ಎಂದು ಪ್ರಕರಣವನ್ನು ದಾಖಲಿಸಿದ್ದಾರೆ. ಇದು ನಿಜವೇ, ಸುಳ್ಳೇ ಎಂಬುದನ್ನು ಮಾನ್ಯ ಸಚಿವರೆ ಹೇಳಬೇಕು. ಏಕೆಂದರೆ, ನಮಗೆ ಇರುವ ಮಾಹಿತಿ ಅಲ್ಪಸ್ವಲ್ಪವಾಗಿರುತ್ತದೆ. ಸರ್ಕಾರಕ್ಕೆ ಪ್ರತಿಯೊಂದು ಮಾಹಿತಿ ಇರುತ್ತದೆ. ಶ್ರೀಕಿ ಎಂಬ ಹುಡುಗನ ಬಗ್ಗೆ ಹೇಳಿದರೆ ತಮಗೂ ಸಹ ಆಶ್ಚರ್ಯವಾಗುತ್ತದೆ, ಏಕೆಂದರೆ ತಾವು ಸಹ 40 ವರ್ಷಗಳಿಂದ ಈ ಸದನದಲ್ಲಿದ್ದೀರಿ. ನಾವು ರಾಜಕೀಯದಲ್ಲಿ ಸುಮಾರು ವರ್ಷಗಳಿಂದ ಇದ್ದು, ಹೊಸದಾಗಿ ಇಲ್ಲಿಗೆ ಬಂದಿದ್ದೇವೆ. ಕಳೆದ ವರ್ಷ ಕೆ.ಪಿ.ಎಸ್. ಸಿ. ಮೂಲಕ ನಡೆದಂತಹ ಪಿ.ಎಸ್.ಐ. ಪರೀಕ್ಷೆ ನಡೆದಾಗ ಈ ಶ್ರೀಕಿ ಎಂಬ ಹುಡುಗನ ಹತ್ತಿರ 22 ಜನರ ಅಂಕವನ್ನು ಹ್ಯಾಕ್ ಮಾಡಿಸಿದ್ದಾರೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂಬ ಸುದ್ದಿ ಇದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರವೇ ಉತ್ತರ ನೀಡಬೇಕು. ನಮಗೆ ತಿಳಿದ ಮಾಹಿತಿಯನ್ನು ಈ ಸದನದ ಮೂಲಕ ಬಿಚ್ಚಿಟ್ಟಿದ್ದೇವೆ. ಮಾನ್ಯ ಸಚಿವರು ಇದರ ಬಗ್ಗೆ ತಿಳಿಸಬೇಕು.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಶ್ರೀಕಿ ಎಂಬ ಹುಡುಗ ಮೊದಲು ನ್ಯಾಯಾಲಯದಲ್ಲಿ ಯಾವುದೇ ರೀತಿಯ ಗಾಂಜಾವನ್ನು ನನಗೆ ಪೊಲೀಸ್‌ನವರು ನೀಡಲಿಲ್ಲ' ಎಂದು ಹೇಳಿಕೆ ನೀಡುತ್ತಾನೆ. ನಂತರ ಶ್ರೀಕಿಯ ವಕೀಲರು ಪೊಲೀಸ್‌ನವರು ನಿನಗೆ ಗಾಂಜಾ ನೀಡಿದ್ದಾರೆ, ಒಪ್ಪಿಕೋ ಎಂದು ಒತ್ತಡ ಹಾಕುತ್ತಾರೆ, ನಂತರ ಆತ ಹೇಳುತ್ತಾನೆ. ಆದಾದ ಬಳಿಕ Magistrate ಆತನಿಗೆ ವೈದ್ಯಕೀಯ ಪರೀಕ್ಷೆ ಮಾಡಿಸಬೇಕೆಂದು ತಿಳಿಸುತ್ತಾರೆ. ಎರಡು ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಲಾಗಿದೆ. ಎಫ್.ಎಸ್.ಎಲ್. ಗೆ ಆತನನ್ನು ಕರೆದುಕೊಂಡು ಹೋಗಿ, ಪರೀಕ್ಷೆ ಮಾಡಿಸಿದ್ದಾರೆ, ಲ್ಯಾಬ್ ವರದಿಯಲ್ಲಿ ಆತನಿಗೆ ಯಾವುದೇ,...

**ಶ್ರೀ ಯು.ಬಿ.ವೆಂಕಟೇಶ್:-** ಮೊದಲು ಯಾವುದು ಮಾಡಿದ್ದಾರೆ? ಎಫ್.ಎಸ್.ಎಲ್. ನಲ್ಲಿ ಮಾಡಿದ್ದಾರೆಯೇ, ಬಿ.ಎಂ.ಸಿ. ಯಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿದ್ದಾರೆಯೇ?

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ತರಿಸಿ ಹೇಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮೊದಲು ಬಿ.ಎಂ.ಸಿ. ಗೆ ಕರೆದುಕೊಂಡು ಹೋಗಿ ಹೊಟ್ಟೆ ಕ್ಲೀನ್ ಮಾಡಿಸುತ್ತಾರೆ. ಆಮೇಲೆ ಎಫ್.ಎಸ್.ಎಲ್. ಗೆ ಕರೆದುಕೊಂಡು ಹೋಗುತ್ತಾರೆ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಬಿ.ಎಂ.ಸಿ.ಯಲ್ಲಿ,...

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಈ ವಿಚಾರದಲ್ಲಿ interfere ಆಗಬಾರದು. ಅವರು interfere ಆದರೆ ನಮ್ಮವರೆಲ್ಲಾ ಇದರಲ್ಲಿ interfere ಆಗಬೇಕಾಗುತ್ತದೆ.

**ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಹೇಳುವುದನ್ನು ಮಾನ್ಯ ಸದಸ್ಯರು ಸ್ವಲ್ಪ ಕೇಳಿಸಿಕೊಳ್ಳಲಿ. ದಯವಿಟ್ಟು ನಾನು ಅದಕ್ಕೆ ಸಂಬಂಧಪಟ್ಟ ಸಚಿವ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಒಂದು ನಿಮಿಷ. ಅವರು ಏನು ಹೇಳುತ್ತಾರೆ ಕೇಳೋಣ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಅಂದಿನ ದಿವಸ ಅದು Covid Designated Hospital ಆಗಿದ್ದ ಕಾರಣ ಬಿ.ಎಂ.ಸಿ.ಯಲ್ಲಿ ಮಾಡಲು ಸಾಧ್ಯವಿಲ್ಲ ಎಂದು ಬೌರಿಂಗ್ ಆಸ್ಪತ್ರೆಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತನನ್ನು ಕಳುಹಿಸಿಕೊಡಲಾಗಿತ್ತು. ನಾನು ಅದಕ್ಕೆ ಸಂಬಂಧಪಟ್ಟ ಸಚಿವನಾದ ಕಾರಣ ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಾನು ಈ ವಿಷಯದಲ್ಲಿ ತಲೆಹಾಕುತ್ತಿರಲಿಲ್ಲ.

**ಸಭಾಪತಿಯವರು:-** ಆಯಿತು ಹೇಳಿ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಬೌರಿಂಗ್ ಆಸ್ಪತ್ರೆಗೆ ಆತನನ್ನು ಕರೆದುಕೊಂಡು ಹೋಗಿ ವೈದ್ಯಕೀಯ ಪರೀಕ್ಷೆ ಮಾಡಿಸಿದ ಮೇಲೆ ಅಲ್ಲಿ ಬಹಳ ಸ್ಪಷ್ಟವಾಗಿ 'ಯಾವುದೇ ರೀತಿಯ ಗಾಂಜಾವನ್ನು ಆತನಿಗೆ ನೀಡಿಲ್ಲ' ಎಂದು ವರದಿ ಬಂದಿದೆ. ಮತ್ತೆ reconfirmation ಮಾಡಲು Forensic Science Lab ಗೆ ಕಳುಹಿಸಲಾಗಿತ್ತು. ಅಲ್ಲಿ ಸಹ ಆತ ಗಾಂಜಾ ಸೇವಿಸಿಲ್ಲ ಎಂದು ವರದಿ ಬಂದಿದೆ. ಜೊತೆಗೆ ತಂದೆ, ಮಗ ಜೊತೆಯಲ್ಲಿಯೇ ಇರಲಿಲ್ಲ. ಆತನೇ ಪೊಲೀಸ್‌ನವರು ಗಾಂಜಾವನ್ನು ನನಗೆ ನೀಡಿಲ್ಲವೆಂದು ಹೇಳಿದ ಮೇಲೆ ಎಲ್ಲಿಂದಲೋ ಆತನ ತಂದೆ 'ನನ್ನ ಮಗನಿಗೆ ಪೊಲೀಸ್ ನವರು ಗಾಂಜಾ ಸೇವಿಸಿದ್ದಾರೆ' ಎಂದು ಹೇಳಿದ ವಿಚಾರವನ್ನು ನಂಬಬೇಕೇ? ಅಥವಾ ಶ್ರೀಕಿಯ ಹೇಳಿಕೆಯನ್ನು ನಂಬಬೇಕೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆ ಹುಡುಗನನ್ನು ಕರೆದುಕೊಂಡು ಹೋಗಿ, ಒಂದು ವಾರ ಠಾಣೆಯಲ್ಲಿಟ್ಟು ಕೈ-ಕಾಲು ಮುರಿಯುವ ಹಾಗೆ ಥಳಿಸಿ, ಅವರಿಗೆ ಎಷ್ಟು ಹಣಬೇಕೋ, ಅಷ್ಟು ಹಣವನ್ನು ಹ್ಯಾಕ್ ಮಾಡಿಸಿಕೊಂಡಿದ್ದಾರೆ. ಆತನನ್ನು ಕರೆದುಕೊಂಡು ಹೋಗಿ ಹೊಟ್ಟೆ ಕ್ಲೀನ್ ಮಾಡಿಸುವ ಅವಶ್ಯಕತೆ ಏನಿತ್ತು?

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಆಧಾರರಹಿತವಾಗಿ ಏನು ಬೇಕಾದರೂ ಹೇಳಬಹುದು. ಆದರೆ, ನನ್ನ ಹತ್ತಿರ ಇರುವ ದಾಖಲಾತಿ ಪ್ರಕಾರ ತಮಗೆ ಪ್ರಾಮಾಣಿಕವಾಗಿ ಉತ್ತರವನ್ನು ನೀಡುತ್ತಿದ್ದೇನೆ. ಅವರು ಹೇಳಿದ ಮಾತನ್ನು ನಾನು ನಿರಾಕರಿಸುತ್ತೇನೆ.

(ಮುಂದು)

(1127) 16-12-2021 /4.30/ SK-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರಗ ಜ್ಞಾನೇಂದ್ರ (ಮುಂದು):-**

ಆ ರೀತಿ ಯಾವುದಾದರೂ ಆಗಿದ್ದರೆ, ಕೋರ್ಟ್‌ನಲ್ಲಿ ಆತನಿಗೆ ಎಲ್ಲವನ್ನು ಹೇಳುವುದಕ್ಕೆ ಸ್ವಾತಂತ್ರ್ಯವಿದೆ. ಆತ ಹೊರಗಡೆಯೂ ಕೂಡ ಇದ್ದಾನೆ. ಮೀಡಿಯಾದಲ್ಲಿಯೂ ಕೂಡ ಹೇಳಬಹುದು. ಆತ ಜಾಮೀನಿನ ಮೇಲೆ ಹೊರಗಡೆ ಇದ್ದಾನೆ. ಅವನಿಗೆ ಏನಾಗಿದೆ ಎಂದು ನಾವು ಹೇಳುವುದಕ್ಕಿಂತ, ಅವನು ಹೇಳಬಹುದು. ಆತನ ತಂದೆ ಹೇಳಬಹುದು ಮತ್ತು ಅವನ ಸಂಸಾರಸ್ಥರು ಹೇಳಬಹುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅದ್ಯಾವುದೂ ಹೇಳದಿದ್ದಾಗ, ನಾವು ಊಹೆ ಮೇಲೆ ಏನು ಬೇಕಾದರೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಶ್ರೀಕಿಯವರನ್ನು ನಮ್ಮ ಪೊಲೀಸರು ಸರಿಯಾದ ರೀತಿಯಲ್ಲಿ interrogation ಮಾಡಿ, ಅವನಿಂದ ಬಾಯಿ ಬಿಡಿಸಿದ್ದಾರೆ. ಅತ್ಯಂತ ಪಾರದರ್ಶಕವಾದ ಮಾಹಿತಿಯನ್ನು ಆಗಾಗ ಕೋರ್ಟ್‌ಗೆ ಕಳುಹಿಸಿದ್ದಾರೆ. ಪೊಲೀಸರಿಗೆ ತಜ್ಞತೆ ಕಡಿಮೆ ಎಂದು ಹೇಳಿ, ಭಾರತೀಯ ವಿಧಿ ವಿಜ್ಞಾನ ಸಂಸ್ಥೆಯ ತಜ್ಞರನ್ನು ಕಳುಹಿಸಿ, ಅವರ ಬಳಿ ಎಲ್ಲಾ ಮಾಹಿತಿಯನ್ನು ಶ್ರೀಕಿ ಒದಗಿಸಿದ್ದಾನೆ. ಅದೆಲ್ಲವೂ ಕೂಡ ವರದಿಯಾಗಿದೆ ಮತ್ತು ಕೋರ್ಟ್‌ಗೂ ಕೂಡ ಮಾಹಿತಿಯನ್ನು ತಿಳಿಸಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರ ಕಡೆಯಿಂದ ಹೆಚ್ಚಿನ ಮಾಹಿತಿ ತೆಗೆದುಕೊಂಡು, ಅನಂತರ ಚರ್ಚೆ ಮಾಡಿ. ಮಾನ್ಯ ಪಿ.ಆರ್. ರಮೇಶ್‌ರವರೇ ತಾವು ಮಾತನಾಡಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಮ್ಮದೇನಾದರೂ ಇದ್ದರೆ ಅದನ್ನು ಬರವಣಿಗೆಯಲ್ಲಿ ಬರೆದು ಕೊಡಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇಡೀ ದೇಶದಾದ್ಯಂತ ಬಿಟ್ ಕಾಯಿನ್ ಸದ್ದು ಮಾಡಿದೆ. Half an hour discussion ಗೆ convert ಮಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನ್ನದು clarification ಪೂರ್ತಿಯಾಗಿಲ್ಲ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವು ಒಂದು ಪತ್ರವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 517**
**ಉತ್ತರವನ್ನು ಲಗತ್ತಿಸಲಾಗಿದೆ.**

**ಶ್ರೀ ಪಿ.ಆರ್ ರಮೇಶ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಸ್ಮಾರ್ಟ್ ಸಿಟಿ, ಅಮೃತ್ ಯೋಜನೆ, ನಗರೋತ್ಥಾನ ಯೋಜನೆ, ಬೆಂಗಳೂರು ಮಿಷನ್ 2022 ಇವುಗಳೆಲ್ಲಾ ಯೋಜನೆಗೆ ಸಂಬಂಧಿಸಿದಂತೆ, ಬೆಂಗಳೂರಿನ ಅಭಿವೃದ್ಧಿ ಯೋಜನೆಗೆ ಯಾವ ರೀತಿ ಏನಾಗಿದೆ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿರುವುದೇನೆಂದರೆ, ಒಟ್ಟು 10,830 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟು ರೂ.18,519,39.05 ಲಕ್ಷಗಳಷ್ಟು ಮೊತ್ತದ ಅನುದಾನ ಮಂಜೂರಾಗಿರುತ್ತದೆ. ಇಷ್ಟು ಬಿಟ್ಟರೆ, ಏನು ಕೆಲಸವಾಗಿದೆ ಎಂಬುದರ ಬಗ್ಗೆ ಯಾವುದೇ ರೀತಿ ಮಾಹಿತಿಯನ್ನು ಉತ್ತರದಲ್ಲಿ ನೀಡಿಲ್ಲ. ನನಗೆ ಒಂದೆರಡು ಮೂರು ಸಿಡಿಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಪೂರ್ತಿ ನೋಡಬೇಕಾಗುತ್ತದೆ. ನನಗೆ ನೀಡಿರುವ ಉತ್ತರವನ್ನು ಮಾಹಿತಿಯನ್ನು ನೋಡಿದರೆ, ಎಲ್ಲಿಯೂ ಕೂಡ ಪ್ರೋಗ್ರೆಸಿವ್ ಇಲ್ಲವೇ ಇಲ್ಲ. ಸ್ಮಾರ್ಟ್ ಸಿಟಿ, ನಗರೋತ್ಥಾನ, ಬೆಂಗಳೂರು ಮಿಷನ್ ಇರಬಹುದು. ಬೆಂಗಳೂರು ಮಿಷನ್ 2022 ಅನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಪ್ರಾಜೆಕ್ಟ್ ಮಾಡಿದ್ದರು. ಆದರೆ ಇದರಲ್ಲಿ ಯಾವುದೇ ರೀತಿಯ ಅನುದಾನವಿಲ್ಲ. ಇರತಕ್ಕಂತಹ ಕೆಲಸಗಳನ್ನೆಲ್ಲಾ ಮುಂದುವರೆಸುವಂತಹದ್ದಕ್ಕೆ ಇಲ್ಲಿ ಕೊಟ್ಟಿರುವಂತಹದ್ದು. ಅದೇ ರೀತಿ ಇನ್ನೊಂದು ಸ್ಮಾರ್ಟ್ ಸಿಟಿ ಎಂದು ಹೇಳಿ, ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾದಂತಹ ವಿಚಾರ.

**ಸಭಾಪತಿಯವರು:-** ತಾವು ಪ್ರಶ್ನೆ ಮಾತ್ರ ಕೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೇಳಿ ಬಿಡುತ್ತೇನೆ. ಇದರ ಬಗ್ಗೆ ಗೊತ್ತಾಗಬೇಕು. ಕೇಂದ್ರ ಸರ್ಕಾರ 'The Vision of the Bengaluru Smart City Limited' ಎಂದು ಮಾಡಿದರು. ಇದರ ಉದ್ದೇಶ "Liveable Bengaluru – Healthy, Connected and Vibrant" ಎಂದು ಹೇಳಿ, ಇದನ್ನು ಮಾಡಿದ್ದು. ನಮ್ಮ ಬೆಂಗಳೂರು ಮುಂಚೆ ಗಾರ್ಡನ್ ಸಿಟಿಯಾಗಿತ್ತು. Pensioners Paradise, Silicon Valley ಎಂದು ಇತ್ತು. Technopolis ಎಂದು ಕರೆಯುತ್ತಿದ್ದಾರೆ. ಇಂತಹ ಒಂದು ಸ್ಮಾರ್ಟ್ ಸಿಟಿಯ infrastructure ಇನ್ನು ಹೆಚ್ಚಿಗೆ ಮಾಡಿ, economy ಯನ್ನು ಇನ್ನು ಉತ್ತಮ ಮಾಡತಕ್ಕಂತಹದ್ದು. ಈ ಸಿಟಿಯನ್ನು ಸುಧಾರಣೆ ಮಾಡುವುದರಿಂದ, ನಮ್ಮ ಸಿಟಿಗಳನ್ನು economical engines ಆಗಿ ಇಟ್ಟುಕೊಳ್ಳಬೇಕೆಂಬ ಉದ್ದೇಶ. 2015 ರಲ್ಲಿ ಸ್ಮಾರ್ಟ್ ಸಿಟಿ ಮಿಷನ್ ಪ್ರಾರಂಭವಾಯಿತು. ಅಂದರೆ 2021 ಈ ವರ್ಷ ಇದರ ಕೊನೆಯ ವರ್ಷವಾಗಿದೆ. ಆರು ವರ್ಷಗಳ ಕಾಲ ಈ ಮಿಷನ್ ಇರತಕ್ಕಂತಹದ್ದು. ಇವತ್ತಿನವರೆಗೂ ಇದನ್ನು ಯಾವ ರೀತಿ ಏನು ಮಾಡಿದ್ದಾರೆ? ಒಂದು 'vehicle' ಬಗ್ಗೆ ಹೇಳಿದ್ದಾರೆ. ಅದು ಒಂದು ಕಡೆಯಿದೆ. ಇಲ್ಲಿ ಬಹಳ ಮುಖ್ಯವಾದಂತಹದ್ದು ಎಂದರೆ,

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಾರ್ಕಿಂಗ್ ಬಗ್ಗೆ ನಾನು ಕೇಳಿದ್ದೆ. ಪಾರ್ಕಿಂಗ್‌ಗಾಗಿ ಸುಮಾರು 85 ರಸ್ತೆಗಳನ್ನು ಕೊಟ್ಟಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳ ಇದರ ಬಗ್ಗೆ ಗಮನಹರಿಸಬೇಕು. ಸುಮಾರು 85 ರಸ್ತೆಗಳಲ್ಲಿ ಇವತ್ತಿನವರೆಗೂ ಯಾವುದೂ ಕೂಡ ಪಾರ್ಕಿಂಗ್‌ಗೆ ಮುಕ್ತ ಮಾಡಿ ಕೊಟ್ಟಿಲ್ಲ. ಅದನ್ನು PPP (Pubic-Private Partnership) ನಲ್ಲಿ ಕೊಟ್ಟಿದ್ದಾರೆಂದು ಹೇಳುವುದು. ಆದರೆ 85 ರಸ್ತೆಗಳಲ್ಲಿ 10 ಕಡೆ ರಸ್ತೆಗಳು ಮಾತ್ರ ನಿರ್ಮಾಣ ಮಾಡುವುದಕ್ಕೆ ಈಗ ಒಪ್ಪಿಗೆ ಕೊಟ್ಟಿದ್ದಾರಷ್ಟೆ. ಇನ್ನೊಂದು ಕೊನೆಯದಾಗಿ ಪ್ರಶ್ನೆಯನ್ನು ಕೇಳಿದ್ದೆ. ಇತ್ತೀಚೆಗೆ ಬಿ.ಬಿ.ಎಂ.ಪಿ.ಗೆ ಸಮರ್ಥ ವಿದ್ಯುಚ್ಛಕ್ತಿ ಬಳಕೆ ಬೀದಿ ದೀಪಗಳ ನಿರ್ವಹಣೆ ಸಲುವಾಗಿ ಯಾವುದಾದರೂ ಪ್ರಶಸ್ತಿ ಲಭಿಸಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಬಿ.ಬಿ.ಎಂ.ಪಿ.ಗೆ ಸಮರ್ಥ ವಿದ್ಯುಚ್ಛಕ್ತಿ ಬಳಕೆ, ಬೀದಿ ದೀಪಗಳ ನಿರ್ವಹಣೆ ಸಲುವಾಗಿ ಯಾವುದೇ ಪ್ರಶಸ್ತಿಯು ಲಭಿಸಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಹಿಂದಿನ ಆಯುಕ್ತರಾಗಿದ್ದಂತಹ ಶ್ರೀ ಮಂಜುನಾಥ್ ಪ್ರಸಾದ್‌ರವರು ಈ ಸದನದಲ್ಲಿಯೇ ಕುಳಿತಿದ್ದಾರೆ. ನನ್ನ ಬಳಿ ಇರುವ ಮಾಹಿತಿಯ ಪ್ರಕಾರ 13ನೇ ಡಿಸೆಂಬರ್ 2020 ರಂದು 'Energy Efficient Street Lighting in Bengaluru under Public-Private Partnership' ಗೆ ಅವಾರ್ಡ್ ಬಂದಿದ್ದರಿಂದ ಅವರು ಲಂಡನ್‌ಗೆ ಹೋಗಿದ್ದರು. ಇವತ್ತು ಆ ಒಂದು ಕೆಲಸ ಮಾಡುತ್ತಿದ್ದಂತಹ ಏಜೆನ್ಸಿಯನ್ನು ಮೂರು-ನಾಲ್ಕು ದಿನಗಳ ಮುಂಚೆ ಅವರದನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದರ ಅರ್ಥ ಅವರು ಸರಿಯಾಗಿ ಕೆಲಸ ಮಾಡಿದ್ದರೆ, ಅವರನ್ನು ಕ್ಯಾನ್ಸಲ್ ಮಾಡಬೇಕಾಗಿಲ್ಲ. ಇವತ್ತು ಬೆಂಗಳೂರಿನಲ್ಲಿ ಬೀದಿ ದೀಪದ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟರೆ, ಮತ್ತೆ ನಾನು ಇದನ್ನು ಮುಂದುವರೆಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮೊಟ್ಟಮೊದಲನೆಯದಾಗಿ, ಮಾನ್ಯ ಪಿ.ಆರ್.ರಮೇಶ್‌ರವರು ಬೆಂಗಳೂರಿನ ರಸ್ತೆಗಳ ಬಗ್ಗೆ ಕಳೆದ ಬಾರಿ ಅಧಿವೇಶನದಲ್ಲೂ ಮತ್ತು ಈ ಅಧಿವೇಶನದಲ್ಲಿಯೂ ಕೂಡ ಪ್ರಶ್ನೆಯನ್ನು ಕೇಳಿದ್ದಾರೆ. ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಧನ್ಯವಾದಗಳು. ಏಕೆಂದರೆ, ಯಾರಾದರೊಬ್ಬರು ಮಾನ್ಯ ಸದಸ್ಯರು, as a matter of principle, ಒಂದು ವಿಷಯವನ್ನಿಟ್ಟುಕೊಂಡು, ಗಂಭೀರವಾಗಿ ಅದನ್ನು follow-up ಮಾಡುತ್ತಿರುವಂತಹದ್ದು ಬಹಳ ಸಂತೋಷ. ಮಾನ್ಯ ಸದಸ್ಯರು ಕಳೆದ ಬಾರಿ ಅವರೊಂದು ಮುಖ್ಯವಾದ ಸಲಹೆಯನ್ನು ಕೊಟ್ಟಿದ್ದರು. Road History ಮಾಡಬೇಕೆಂದರೆ, ಯಾವ ರಸ್ತೆ ಯಾವ ಯೋಜನೆಯಡಿಯಲ್ಲಿ ಯಾವಾಗ ಆಯಿತು? ಅದರ ಲೈಫ್ ಎಷ್ಟು ವರ್ಷ ಇರಬೇಕು. ಅದರ ಲೈಫ್ ಎಷ್ಟು ವರ್ಷ ಪೂರ್ಣವಾಗಿದೆ. ಅದರ ನಿರ್ವಹಣೆಗಾಗಿ ಎಷ್ಟು ಹಣ ಖರ್ಚಾಗಿದೆ ಎಂಬುವುದರ ಬಗ್ಗೆ ಎಲ್ಲಾ ಮಾಹಿತಿ ಇರುತ್ತದೆ. ನಾವು ಪುನಃ ಪುನಃ ಅನುದಾನ ಕೊಡುವುದು ತಪ್ಪುತ್ತದೆ ಎಂದು ನಾನು ಈಗಾಗಲೇ ಬಿ.ಬಿ.ಎಂ.ಪಿ.ಯ ಆಯುಕ್ತರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಎಲ್ಲಾ ರಸ್ತೆಗಳಾಗುವುದಿಲ್ಲ. ಪ್ರಮುಖ ರಸ್ತೆಗಳಾದ arterial

---

ರಸ್ತೆಯ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೋ, ಅವುಗಳ Road History ನ್ನು ಪೂರ್ತಿ ಬರೆದು, ಇನ್ನು ಮುಂದೆ ರೆಗ್ಯೂಲರ್ ಆಗಿ ನಿರ್ವಹಣೆ ಮಾಡಬೇಕೆಂದು ನನಗೆ ಮಾಹಿತಿಯನ್ನು ಕೊಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇನೆ. ಆ ಮಾಹಿತಿ ಬಂದ ತಕ್ಷಣವೇ ಸದನಕ್ಕೂ ಮಾಹಿತಿಯನ್ನು ಒದಗಿಸುತ್ತೇನೆ.

ಮಾನ್ಯ ಸದಸ್ಯರು ಎರಡು ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಿ, ವಿಶೇಷವಾಗಿ ಸ್ಮಾರ್ಟ್ ಸಿಟಿಯ ಬಗ್ಗೆ ಕೇಳಿದ್ದಾರೆ. ಸ್ಮಾರ್ಟ್ ಸಿಟಿ 2015 ಪ್ರಾರಂಭವಾದರೂ ಕೂಡ ಅದರ ಯೋಜನೆ ರೂಪಿಸುವಲ್ಲಿ ಬರೀ ಬೆಂಗಳೂರು ಮಾತ್ರವಲ್ಲ. ಇಡೀ ದೇಶದಲ್ಲಿ ಒಂದು-ಒಂದೂವರೆ ವರ್ಷಗಳ ಕಾಲ ತಡವಾಗಿರುವಂತಹದ್ದರ ಬಗ್ಗೆ ತಮ್ಮ ಗಮನಕ್ಕೂ ಕೂಡ ಇದೆ. ಆದಾಗ್ಯೂ ಮೇಲೆ ಹಲವಾರು ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಪ್ರತಿಯೊಂದು ರಸ್ತೆಗಳು ಯಾವ ಯಾವ ಹಂತದಲ್ಲಿ ಪ್ರಗತಿಯಾಗುತ್ತದೆ ಎಂಬುದರ ಬಗ್ಗೆ ಅನಬಂಧದಲ್ಲಿ ಕೊಟ್ಟಿದ್ದೇವೆ. ಕಮರ್ಷಿಯಲ್ ಸ್ಟ್ರೀಟ್, ಕಾಮರಾಜ್ ರಸ್ತೆ, ಹಲಸೂರು ರಸ್ತೆ, ಡಿಕನ್ಸನ್ ರಸ್ತೆ, ಇನ್‌ಫೆಂಟ್ರಿ ರಸ್ತೆ. ಮಾನ್ಯ ಸದಸ್ಯರು ಕೇಳಿರುವ ಮೂಲ ಪ್ರಶ್ನೆಗೆ ಸುಮಾರು ನಾಲ್ಕು ಸಾವಿರ ಪುಟ ಉತ್ತರವಾಗುತ್ತಿತ್ತು. ಅದಕ್ಕೆ ಸಿ.ಡಿ.ಯನ್ನು ಕೊಟ್ಟಿದ್ದೇನೆ. ನಾನು ಹೇಳ ಬಯಸುವುದೇನೆಂದರೆ, ಮಾನ್ಯ ಸದಸ್ಯರು ಸಮಯವನ್ನು ತೆಗೆದಕೊಂಡು, ಅದರಲ್ಲಿ ಏನೇನಿದೆ? ಯಾವುದು ಸರಿಯಿದೆ ಮತ್ತು ಯಾವುದು ಸರಿಯಿಲ್ಲ ಎಂಬುದರ ಬಗ್ಗೆ ನಮಗೆ ಮಾಹಿತಿ ಕೊಟ್ಟರೆ, ಖಂಡಿತವಾಗಿಯೂ I am equally interested. ಇದನ್ನು ಸರಿಪಡಿಸುವುದಕ್ಕೆ ನನಗೆ ಬಹಳ ಆಸಕ್ತಿ ಇದೆ. ಹಲವಾರು ಯೋಜನೆಗಳು ಬಂದಾಗ, ಹಲವಾರು ರಸ್ತೆಗಳನ್ನು ಮಾಡಿ, ಮತ್ತೆ ಪುನಃ ಅಗೆದು, ಮತ್ತೆ ರಸ್ತೆಗಳನ್ನು ಮಾಡುವಂತಹ ಒಂದು ಪ್ರವೃತ್ತಿಯನ್ನು ನಿಲ್ಲಿಸಲೇ ಬೇಕೆಂದು ಹೇಳಿ, ನಾನು ಕೂಡ ತೀರ್ಮಾನ ಮಾಡಿದ್ದೇನೆ. ಇಷ್ಟು ವರ್ಷಗಳಿಂದ ಬಂದಿರುವಂತಹ ಈ ಹಲವಾರು ಯೋಜನೆಗಳ ಸ್ಥಿತಿ-ಗತಿಯನ್ನು ನೋಡಿದಾಗ, ನಿಜವಾಗಲೂ ಕೂಡ ಬಹಳ ಗಂಭೀರವಾದಂತಹ ಪರಿಸ್ಥಿತಿ ನನಗೂ ಕೂಡ ಅರಿವಿನಲ್ಲಿದೆ. ಆ ಕೆಲಸವನ್ನು ಖಂಡಿತವಾಗಿಯೂ ನಾನು ಮಾಡುತ್ತೇನೆ. ಸ್ಮಾರ್ಟ್ ಸಿಟಿಯ ಬಗ್ಗೆ ವಿವರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಸ್ಮಾರ್ಟ್ ಪಾರ್ಕಿಂಗ್ ಪ್ರಶ್ನೆಯನ್ನು ಕೇಳಿದ್ದಾರೆ. ಸ್ಮಾರ್ಟ್ ಪಾರ್ಕಿಂಗ್ ಬಗ್ಗೆ M/s. Building Control Solutions India Private Ltd., ನವರು ಸ್ಮಾರ್ಟ್ ಪಾರ್ಕಿಂಗ್‌ಗೆ ಸುಮಾರು 85 ರಸ್ತೆಗಳನ್ನು ಗುರುತಿಸಿದ್ದಾರೆ. Annual lease and rental to BBMP ಸುಮಾರು ಮೂವತ್ತೊಂದು ಕೋಟಿ ಐವತ್ತಾರು ಲಕ್ಷಗಳು ಮತ್ತು ಅದರ ಅವಧಿ ಸುಮಾರು 10 ವರ್ಷ. ಇದರಲ್ಲಿ ಸುಮಾರು 10 ರಸ್ತೆಗಳನ್ನು ಸ್ಮಾರ್ಟ್ ಪಾರ್ಕಿಂಗ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನು 32 ರಸ್ತೆಗಳಲ್ಲಿ almost approval stage ನಲ್ಲಿ, advanced stage ನಲ್ಲಿ ಇದೆ. ಇನ್ನು 43 ರಸ್ತೆಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇನ್ನು 85 ರಸ್ತೆಗಳನ್ನು ಗುರುತಿಸಿದ್ದಾರೆ. ನಾನು

---

ನಿಗಧಿತ ಸಮಯದಲ್ಲಿ ಇವುಗಳನ್ನು ಸ್ಮಾರ್ಟ್ ಪಾರ್ಕಿಂಗ್‌ಗೆ ತೆಗೆದುಕೊಂಡು, ಸ್ಮಾರ್ಟ್ ಪಾರ್ಕಿಂಗ್‌ಗೆ ಅಳವಡಿಸುತ್ತೇವೆ ಎನ್ನುವಂತಹ ವಿಚಾರವನ್ನು ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಮುಂದು)

(1128)16.12.2021/4.40/ಎಂ.ಎಂ-ಆರ್.ಎನ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ಎಲ್.ಇ.ಡಿ., ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ. ಸುಮಾರು ಮೂರು ವರ್ಷದ ಹಿಂದೆ ಇಡೀ ಬೆಂಗಳೂರನ್ನು ಎಲ್.ಇ.ಡಿ., ಲೈಟ್ ಮಾಡಿ ಎನರ್ಜಿ ಸೇವ್ ಮಾಡಿ ಅದರಿಂದ ಬಂದಿದ್ದರಲ್ಲಿ -revenue sharing model ನಲ್ಲಿ ಟೆಂಡರ್ ಕರೆದು Public Private Partnership ಅಂದರೆ ಮೂರೂವರೆ ವರ್ಷದ ಹಿಂದೆ ಅದನ್ನು ಕರೆದಿರುವುದು ನಿಜ. Shapoorji Pallonji ಎಂಬ ಒಂದು ಕಂಪನಿಗೆ ಕೊಟ್ಟಿದ್ದೆವು. ಅವರು ನಾನಾ ಕಾರಣಕ್ಕಾಗಿ ಅದನ್ನು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ನಾವು ಅದನ್ನು terminate ಮಾಡಬೇಕೆಂಬ ಸಂದರ್ಭದಲ್ಲಿ ಕೋರ್ಟ್‌ಗೆ ಕೂಡ ಹೋಗಿದ್ದರು. ಅದು ಹೈಕೋರ್ಟ್ ಮೆಟ್ಟಿಲನ್ನು ಕೂಡ ಏರಿ ಸುಮಾರು ಮೂರು ವರ್ಷ ಅವರನ್ನು ಟರ್ಮಿನೇಟ್ ಮಾಡುವುದಕ್ಕೆ ಆಗಿರಲಿಲ್ಲ, ಅವರು ಕೂಡ ಕೆಲಸ ಮಾಡಿರಲಿಲ್ಲ. ಅದಕ್ಕೆ ನಾನು ಬಿಬಿಎಂಪಿ ಕಮೀಷನರ್‌ರವರಿಗೆ ಅವರನ್ನು ಕೈ-ಬಿಡಲು ಸೂಚನೆ ಕೊಟ್ಟಿದ್ದೇನೆ. ರೆಗ್ಯುಲರ್ ಆಗಿ ಏನು ಲೈಟಿಂಗ್ ಮಾಡುತ್ತಾರೆ especially ಇದರಿಂದ dark areas create ಆಗಿದೆ. ಆ ಎಲ್ಲಾ dark areas ಗಳಲ್ಲಿ ಲೈಟಿಂಗ್ಸ್‌ನ್ನು ನಿಮ್ಮ ಬಿಬಿಎಂಪಿ ವತಿಯಿಂದ ರೆಗ್ಯುಲರ್ ಆಗಿ ಮಾಡಿ. ಆ ಕಾಂಟ್ರ್ಯಾಕ್ಟ್ ಏರಿಯಾ ಎಂದು ಈ ಕೆಲಸ ನಿಲ್ಲಿಸುವ ಅವಶ್ಯಕತೆ ಇಲ್ಲವೆಂದು ಸ್ಪಷ್ಟವಾಗಿ ಸೂಚನೆ ಕೊಟ್ಟಿದ್ದೇನೆ. ಈಗಾಗಲೇ ಕೆಲವು ಕಡೆ ಪ್ರಾರಂಭ ಮಾಡಿದ್ದಾರೆ. ವಿಶೇಷವಾಗಿ ಡಿಸೆಂಬರ್ ಅಂತ್ಯದೊಳಗೆ ಬಹುತೇಕ 7-8 ಕ್ಷೇತ್ರಗಳಲ್ಲಿ peripheral ಏರಿಯಾದಲ್ಲಿ ಎಲ್ಲಿ ಡಾರ್ಕ್ ಏರಿಯಾ ಇದೆ ಅಲ್ಲಿ ಪ್ರಥಮ ಪ್ರಾಶಸ್ತ್ಯದಲ್ಲಿ ಆ ಕೆಲಸವನ್ನು ಮಾಡುತ್ತಿದ್ದಾರೆ. ಈ ಕಾಂಟ್ರ್ಯಾಕ್ಟ್ ಮೊನ್ನೆ ಕೋರ್ಟ್‌ನಲ್ಲಿ ನಮ್ಮಂತೆ ಆಗಿದೆ. ಹೀಗಾಗಿ ಅದನ್ನು ಟರ್ಮಿನೇಟ್ ಮಾಡಲು ನಾವು ಯೋಚನೆ ಮಾಡುತ್ತಿದ್ದೇವೆ. ಈ ಕಾಂಟ್ರ್ಯಾಕ್ಟ್‌ನಲ್ಲಿ ಏನೇನು ಲೋಪದೋಷವಿದೆ ಅವರು ಏತಕ್ಕೆ ಮಾಡಲಿಲ್ಲ ಎಂದು ಅವನ್ನೆಲ್ಲಾ ಕೂಲಂಕುಷವಾಗಿ ಪರಿಶೀಲನೆ ಮಾಡಿ ಎಲ್.ಇ.ಡಿ ಲೈಟ್ ಹಾಕುವುದಾದರೆ ಬೇರೆ ಬೇರೆ ನಗರಗಳಲ್ಲಿ ಯಾವ ರೀತಿ ಲೈಟ್ ಹಾಕಿದ್ದಾರೆ ಅಲ್ಲಿರುವಂತಹ ಸಿಸ್ಟಂ ಏನು ಎಂಬುದನ್ನು ಅಭ್ಯಾಸ ಮಾಡಿ ಇನ್ನೊಮ್ಮೆ ರಿ-ಟೆಂಡರ್ ಮಾಡಿ ಹೊಸಬರಿಗೆ ಕೊಡುತ್ತೇವೆ ಹೊರತು ಈಗಾಗಲೇ ಮೂರು ವರ್ಷ ಏನು ಕೆಲಸ ಮಾಡಿಲ್ಲ ಅವರಿಗೆ ಮತ್ತೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ನಿರಾಕರಿಸಿದ್ದೇವೆ. ಆದರೆ ಈ ಎಲ್ಲಾ ಪ್ರಕ್ರಿಯೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾಡುವುದಕ್ಕೆ ಇನ್ನೂ 3-4 ತಿಂಗಳುಗಳಾಗಬಹುದು. ಅಲ್ಲಿಯವರೆಗೂ ನಾವು ಸುಮ್ಮನೆ ಕುಳಿತುಕೊಳ್ಳದೇ ಮೊದಲಿನಿಂದಲೂ ಬಂದಿರುವಂತಹ ರೆಗ್ಯುಲರ್ ಲೈಟಿಂಗ್ ಸಿಸ್ಟಂ ಏನಿದೆ; ಎನರ್ಜಿ ಸೇವಿಂಗ್ ಅನ್ನು ಆಮೇಲೆ ನೋಡೋಣ. ಮೊದಲು ಬೆಂಗಳೂರು ನಗರದಲ್ಲಿ ಲೈಟಿಂಗ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆ ಕೆಲಸವನ್ನು ಮಾಡುತ್ತೇವೆ. ಮುಂದೆ ಎಲ್.ಇ.ಡಿ., ಅನ್ನು ಯಾರಿಗೆ ಕೊಡಬೇಕು ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಈಗ ಮಾನ್ಯ ಕಾಂತರಾಜುರವರ ಪ್ರಶ್ನೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ;

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ಸಾಕು, ಎಷ್ಟು ಸಲ ಕೇಳುತ್ತೀರಿ? ಮಾನ್ಯ ಮುಖ್ಯಮಂತ್ರಿಯವರು ಎಲ್ಲವನ್ನೂ ಹೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಇಲ್ಲ, ಆಗುವುದಿಲ್ಲ. ಮಾನ್ಯ ಕಾಂತರಾಜುರವರೇ, ಪ್ರಶ್ನೆ ಕೇಳಿ.

**ಶ್ರೀ ಪಿ.ಆರ್.ರಮೇಶ್:-** ಮುಖ್ಯಮಂತ್ರಿಯವರಿಂದ ಇದಕ್ಕೊಂದು ಉತ್ತರ ಕೊಡಿಸಿ. ಮಾನ್ಯ ಮುಖ್ಯಮಂತ್ರಿಯವರೇ, ಬೀದಿ ದೀಪಗಳಿಗೆ ಸಂಬಂಧಿಸಿದಂತೆ ನೀವು ಒಂದು ಅವಾರ್ಡ್ ತೆಗೆದುಕೊಂಡಿದ್ದೀರಿ. **(ಗೊಂದಲ)**

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ಆಗುವುದಿಲ್ಲ, ಮುಖ್ಯಮಂತ್ರಿಯವರು ಹೇಳಿದ್ದಾರೆ. ನಿಮ್ಮ ಪ್ರಶ್ನೆಗೆ 15 ನಿಮಿಷಗಳ ಸಮಯವಾಯಿತು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಮುಖ್ಯಮಂತ್ರಿಯವರೇ, Shapoorji Pallonji ಯವರಿಗೆ ಕೊಟ್ಟಿರುವಂತಹ ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೊಡಿ. ನೀವು ಅವಾರ್ಡ್ ತೆಗೆದುಕೊಂಡಿದ್ದೀರೋ ಇಲ್ಲವೋ ಎಂಬುದನ್ನು ಕ್ಲಾರಿಫೈ ಮಾಡಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಅದರ ಬಗ್ಗೆ ಪರಿಶೀಲನೆ ಮಾಡಿ ಹೇಳುತ್ತೇನೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಚುಕ್ಕೆ ಪ್ರಶ್ನೆ ಸಂಖ್ಯೆ: 511+519**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕಾಂತರಾಜು (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಕಾವೇರಿ ನೀರಾವರಿ ನಿಗಮಗಳಿಗೆ ಏನು ಹಣ ಬರುತ್ತದೆ ಅದರ ಅನುದಾನದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಆ ಅನುದಾನವನ್ನು ಯಾವುದಕ್ಕೆ, ಎಲ್ಲೆಲ್ಲಿ ಖರ್ಚು ಮಾಡಿದ್ದಾರೆ ಎಂಬುದಕ್ಕೆ ಉತ್ತರ ಕೊಟ್ಟಿಲ್ಲ. 2021-22ನೇ ಸಾಲಿನಲ್ಲಿ ಇನ್ನೂ ರೂ. 48 ಕೋಟಿ ರೂಪಾಯಿ ಅನುದಾನ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ನಾನು ಪ್ರಶ್ನೆ ಕೇಳಿದ್ದು ಏನೆಂದರೆ, ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನದಲ್ಲಿ ಏನಾಗುತ್ತದೆ ಎಂದರೆ ನೀವು ಹೆಚ್ಚಾಗಿ ಸಮುದಾಯ ಭವನದಂತಹ ಕಡೆ ಜಾಸ್ತಿ ಅನುದಾನ ಕೊಡುತ್ತೀರಿ. ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಸಮುದಾಯ ಭವನ national waste ಆದ್ದರಿಂದ ಅದಕ್ಕೆ ಕೊಡುವ ಅನುದಾನವನ್ನು ಕಡಿಮೆ ಮಾಡಿ. ಇನ್ನೊಂದು ಈ ಸಂದರ್ಭದಲ್ಲಿ ನಿಮ್ಮನ್ನು ಕೇಳುವುದಕ್ಕೆ ಇಷ್ಟ ಪಡುವುದೇನೆಂದರೆ, ಕಳೆದ ಸರ್ಕಾರಗಳು ಎಲ್ಲಾ ಸಂದರ್ಭದಲ್ಲಿಯೂ ಎಂ.ಎಲ್.ಎ., ಗಳಿಗೆ ಮತ್ತು ಎಂ.ಪಿ., ಗಳಿಗೆ ಗ್ರ್ಯಾಂಟ್ ಕೊಟ್ಟಿದ್ದಾರೆ. ಎಂ.ಎಲ್.ಸಿ., ಗಳಿಗೆ ಕೊಟ್ಟಿಲ್ಲ. ಎಂ.ಎಲ್.ಎ., ಎಂ.ಪಿ.,ಗಳಿಗೆ ಕೊಡುವಷ್ಟು ದೊಡ್ಡ ಮಟ್ಟದ ಅನುದಾನವನ್ನು ಕೊಡಬೇಕೆಂದು ನಾವು ಕೇಳುತ್ತಿಲ್ಲ. ನಮಗೂ ಬೇರೆ ಬೇರೆ ಕ್ಷೇತ್ರದ ವ್ಯಾಪ್ತಿಯಲ್ಲಿ ತಮಗೆ ಈ ಕೆಲಸ, ಆ ಕೆಲಸ ಮಾಡಿಕೊಡಿ ಎಂದು ಜನರು ನಮ್ಮ ಬಳಿ ಬರುತ್ತಾರೆ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಎಂ.ಎಲ್.ಎ., ಗಳಿಗೆ ಹೇಗೆ ಅನುದಾನ ಕೊಡುತ್ತೀರಿ ಅದೇ ರೀತಿ ಎಂ.ಎಲ್.ಸಿ., ಗಳಿಗೂ ಅನುದಾನ ಕೊಡಿ ಎಂದು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನೀರಾವರಿ ಸಚಿವರನ್ನು ಕೇಳುವುದಿಷ್ಟೇ, ನಾಲ್ಕು ನಿಗಮಗಳಿವೆ. ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮ. ತಾವು ಎರಡನೇ ಪುಟದಲ್ಲಿ ಕೊಟ್ಟಿರುವ ಉತ್ತರದಲ್ಲಿ ಈ ರೀತಿ ಇದೆ. *2021-22ನೇ ಸಾಲಿನಲ್ಲಿ ಜಲ ಸಂಪನ್ಮೂಲ ಇಲಾಖೆಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಹಂಚಿಕೆಯಾದ ಅನುದಾನದಲ್ಲಿ ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಅನುಮೋದಿಸಿರುವ ಕ್ರಿಯಾ ಯೋಜನೆಯನ್ವಯ ನಿಗಮದ ವ್ಯಾಪ್ತಿಯಲ್ಲಿ ಬರುವ ಸಂಬಂಧಿತ ಶಾಸಕರು/ಸಂಸದರನ್ನು ಸಂಪರ್ಕಿಸಿ, ತಯಾರಿಸಲಾದ ಕಾಮಗಾರಿಗಳ ಪಟ್ಟಿಯು ಅನುಮೋದನೆ ಹಂತದಲ್ಲಿರುತ್ತದೆ.* ಶಾಸಕರು ಎಂದರೆ ಎಂ.ಎಲ್.ಎ.ಗಳೆ, ವಿಧಾನ ಪರಿಷತ್ ಸದಸ್ಯರೂ ಸೇರುತ್ತಾರಾ? ಒಂದು ಮಾಹಿತಿಯನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮ್ಮ ಗಮನಕ್ಕೆ ತರುತ್ತೇನೆ. ಬಯಲುಸೀಮೆ ಅಭಿವೃದ್ಧಿ ನಿಗಮ ಇದೆ. ಮಲೆನಾಡು ಅಭಿವೃದ್ಧಿ ನಿಗಮ ಇದೆ. ಬಯಲುಸೀಮೆ ಅಭಿವೃದ್ಧಿ ನಿಗಮ ಮತ್ತು ಮಲೆನಾಡು ಅಭಿವೃದ್ಧಿ ನಿಗಮದವರು ಕಾಮಗಾರಿ ಕೊಡಿ ಎಂದು ನಮ್ಮನ್ನೂ ಕೇಳುತ್ತಾರೆ. ನಾವು ಕೊಡುತ್ತೇವೆ. **XXX**

**ಸಭಾಪತಿಯವರು:- ಈ ವಿಚಾರವನ್ನು ಕಡತದಿಂದ ತೆಗೆಯಿರಿ.**

---

**XXX** ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ನಗುವ ವಿಚಾರವಲ್ಲ. ಮಲೆನಾಡು ಅಭಿವೃದ್ಧಿ ನಿಗಮ ಮತ್ತು ಬಯಲುಸೀಮೆ ಅಭಿವೃದ್ಧಿ ನಿಗಮದಲ್ಲಿ Action Plan ಮಾಡುವಾಗ ನಮ್ಮನ್ನು ಕಾಮಗಾರಿ ಕೊಡಿ ಎಂದು ಕೇಳುತ್ತಾರೆ. ನಾವು ಕೊಡುತ್ತೇವೆ. ಈ ನಿಗಮದ ವ್ಯಾಪ್ತಿಯಲ್ಲಿರುವವರೆಂದು ಎಂ.ಪಿ.,ಗಳು ಮತ್ತು ಎಂ.ಎಲ್.ಎ.,ಗಳನ್ನಷ್ಟೇ ಪರಿಗಣಿಸಿದರೆ ನಮ್ಮ ಗತಿ ಏನಾಗಬೇಕು? ದಯಮಾಡಿ ತಾವು ಎಂ.ಎಲ್.ಸಿ., ಗಳನ್ನೂ ಸಂಪರ್ಕ ಮಾಡಿ ಒಂದು ಸುತ್ತೋಲೆಯನ್ನು ಹೊರಡಿಸಿ. ಹೇಗೆ ಬಯಲು ಸೀಮೆ ಅಭಿವೃದ್ಧಿ ನಿಗಮದಲ್ಲಿ ಮಾಡುತ್ತೇವೋ ಇಲ್ಲಿಯೂ ಕೂಡ ನಮ್ಮಿಂದ ಕ್ರಿಯಾ ಯೋಜನೆಗೆ ಕಾಮಗಾರಿಗಳನ್ನು ತೆಗೆದುಕೊಳ್ಳಲಿ, ಹೇಳಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ನೀರಾವರಿ ಇಲಾಖೆ ವಹಿಸಿಕೊಂಡ ಮೇಲೆ ಯಾವುದೇ ಅನುದಾನವನ್ನು ಹಂಚಿಕೆ ಮಾಡಿಲ್ಲ. ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ವಿಧಾನಸಭಾ ಕ್ಷೇತ್ರ ಆಗಿರಬಹುದು, ಸಂಸತ್ ಸದಸ್ಯರ ಕ್ಷೇತ್ರವಾಗಿರಬಹುದು ಮತ್ತು ವಿಧಾನ ಪರಿಷತ್ತಿನ ಸದಸ್ಯರ ಕ್ಷೇತ್ರವಾಗಿರಬಹುದು ಎಲ್ಲವೂ ಒಟ್ಟಿಗೇ ಇರುತ್ತವೆ. ಅದರಲ್ಲೇನೂ ಪ್ರತ್ಯೇಕತೆ ಮಾಡುವಂತಹ ಅವಶ್ಯಕತೆ ಇಲ್ಲ. ಮೊದಲಿನಿಂದಲೂ ರೂಢಿಯಲ್ಲಿರುವುದು ವಿಧಾನಸಭಾ ಕ್ಷೇತ್ರವಾರು ಕೊಡುವುದು ಇದೆ. ಅದರಲ್ಲಿ ಶಾಸಕರೂ, ಸಂಸದರೂ ಮತ್ತು ವಿಧಾನ ಪರಿಷತ್ ಸದಸ್ಯರೂ ಬರುತ್ತಾರೆ. ನಾವು ಯಾರಿಗೂ ಕೊಡಬಾರದು ಎಂದು ಹೇಳಿಲ್ಲ. ಮಾನ್ಯ ಕಾಂತರಾಜುರವರು ಅನುದಾನವನ್ನು ಸಮುದಾಯಭವನಗಳಿಗೆ ಕೊಡುವುದು, ಚರಂಡಿಗಳಿಗೆ ಕೊಡುವುದು ವ್ಯರ್ಥವಾಗುತ್ತದೆ ಎಂದು ಹೇಳಿದರು. ಅವರ ಸಲಹೆಯನ್ನು ನಾನು ಒಪ್ಪುತ್ತೇನೆ. ಆದ್ದರಿಂದ ಈ ವರ್ಷ ರಾಜ್ಯ ಪರಿಷತ್ ಸಭೆಯಲ್ಲಿ; ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿಯೇ ರಾಜ್ಯ ಪರಿಷತ್ ಸಭೆಯಾಗಿದೆ. ನೀರಾವರಿ ಕಾಮಗಾರಿಗಳಿಗೆ ಮಾತ್ರ ಆದ್ಯತೆ ಕೊಡಬೇಕೆಂದು ಹೇಳಿದ್ದಾರೆ. ಅಂದರೆ ಗಂಗಾ ಕಲ್ಯಾಣ ಯೋಜನೆ ಎಸ್.ಸಿ/ಎಸ್.ಟಿ ಜನಾಂಗದ ಬಡವರ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಮಾಡಿಕೊಡುವುದಕ್ಕೆ ಹೆಚ್ಚಿನ ಅವಕಾಶ ಮಾಡಿ ಕೊಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಮಾಡುತ್ತಿದ್ದೇವೆ. ಮಾನ್ಯ ಶ್ರೀಕಂಠೇಗೌಡರಿಗೆ ಮತ್ತು ಮಾನ್ಯ ಕಾಂತರಾಜುರವರಿಗೆ ಹೇಳುವುದೇನೆಂದರೆ, ತಮ್ಮ ಬಳಿ ಇರುವ ಎಸ್.ಸಿ/ಎಸ್.ಟಿ ಜನಾಂಗದ ಬಡವರು, ಅಲ್ಪಸ್ವಲ್ಪ ಭೂಮಿ ಇರುವಂತಹವರಿಗೆ ಕೃಷಿ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕಾದರೆ ಅಂತಹವರ ಪಟ್ಟಿ ಕಳುಹಿಸಿಕೊಟ್ಟರೆ ನಮ್ಮಲ್ಲಿರುವಂತಹ ಅನುದಾನದಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಾಡಿಕೊಡುತ್ತೇವೆ.

**ಸಭಾಪತಿಯವರು:-** ಅವರನ್ನೂ ಹಾಗೆ ಟ್ರೀಟ್ ಮಾಡಿ ಎಂದು ಹೇಳುತ್ತೇನೆ. ಈಗ ಶ್ರೀಮತಿ ಭಾರತಿ ಶೆಟ್ಟಿಯವರ ಪ್ರಶ್ನೆ, ಅವರು ಇಲ್ಲ. ಈಗ ಶ್ರೀ ಅಲ್ಲಂ ವೀರಭದ್ರಪ್ಪನವರ ಪ್ರಶ್ನೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಚುಕ್ಕೆ ಪ್ರಶ್ನೆ ಸಂಖ್ಯೆ: 481**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಕೇಳಿದ್ದು, ತಮಗೆ ತಿಳಿದಂತೆ ಕಳೆದ ಎರಡು ವರ್ಷದಲ್ಲಿ ಮಳೆಗಾಲ extension ಆಗಿದೆ. ಸುಮಾರು 8-10 ತಿಂಗಳಿನಿಂದ ಬೆಂಗಳೂರು ಮತ್ತು ಸುತ್ತಮುತ್ತಲೂ ಮಳೆ ಬಂದಿದೆ. ಆದರೆ ನನಗೆ ತಿಳಿದ ಪ್ರಕಾರ ಎಲ್ಲಿಯೂ ಮಳೆ ನೀರನ್ನು ಸಂಗ್ರಹಿಸುವ ಕೆಲಸ, ಕಾಮಗಾರಿ ಪ್ರಾರಂಭವಾಗಿಲ್ಲ. ಇದರ ಬಗ್ಗೆ ನಮ್ಮ ಸರ್ಕಾರ, ನಿಮ್ಮ ಸರ್ಕಾರ ಯಾರೂ ಮಾಡಿಲ್ಲ. ನಾನು ಸಲಹೆ ಮಾಡುವುದೇನೆಂದರೆ, ಮಳೆ ನೀರನ್ನು ಸಂಗ್ರಹಿಸಲು ಜಾಗ ಬೇಕು. ಬೆಂಗಳೂರಿನಲ್ಲಿ ಎಲ್ಲಿದೆ ಎಂದು ನೀವು ಕೇಳಬಹುದು. ಬಹಳಷ್ಟು ಪಾರ್ಕುಗಳಿವೆ. ಪಾರ್ಕುಗಳಲ್ಲಿ underground ಮಾಡಬಹುದು. ಸರ್ಕಾರದ ಕಛೇರಿಗಳ ಕೆಳಗೆ ಜಾಗವಿದ್ದಲ್ಲಿ ಅಲ್ಲಿ underground ಮಾಡಿ ಮಳೆ ಬಂದಾಗ ಇದನ್ನು tap ಮಾಡಬಹುದು. ತಾವು ದಿನನಿತ್ಯ ನೋಡುವಂತೆ ಎಲೆಕ್ಟ್ರಿಕ್ ಮತ್ತು ದೂರದರ್ಶನದ ಕೇಬಲ್‌ಗಳನ್ನು ಅಳವಡಿಸಲು underground drilling ಅನ್ನು horizontal drilling 100 ರಿಂದ 300 ಮೀಟರ್‌ವರೆಗೆ parallel to the ground drilling ಮಾಡುತ್ತಾರೆ.

(ಮುಂದು)

(1129) 16-12-2021 KH/RN 4-50

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಲ್ಲಂ ವೀರಭದ್ರಪ್ಪ (ಮುಂದು):-**

ಅದರಂತೆ ನಾವು ಕೂಡ ಮಾಡಿಕೊಳ್ಳಬೇಕು. ಪಾರ್ಕ್ ಹತ್ತಿರ ಒಂದು ಸ್ಥಳದಲ್ಲಿ underground ಮಾಡಿಕೊಂಡು ಮಳೆ ಬರುವ ಕಾಲಕ್ಕೆ ಅಲ್ಲಿ ಮಳೆ ನೀರನ್ನು ಸಂಗ್ರಹಿಸಿದರೆ ಚೆನ್ನಾಗಿ ಇರುತ್ತದೆ. ಎರಡನೆಯದು, ತಾವು ಕೆರೆಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಕೆರೆಗಳನ್ನು ಎಲ್ಲಿ ಮಾಡುತ್ತೀರಿ ಎನ್ನುವುದು ನನ್ನ ಪ್ರಶ್ನೆ. ತಾವು Mines & Geology ಇಲಾಖೆಯಿಂದ ತೆಗೆದುಕೊಂಡು ಎಲ್ಲಿ ಕಾಡುಗಳು ಇರುತ್ತವೆ, ಅಲ್ಲಿ ಮಾಡಿದರೆ ಮಳೆ ಜಾಸ್ತಿ ಇರುತ್ತದೆ. ಅಲ್ಲಿ ನೀರು ಸಂಗ್ರಹಿಸುವುದಕ್ಕೆ ಜಾಗ ಇರುತ್ತದೆ. ಕನಿಷ್ಟಪಕ್ಷ ಸರ್ಕಾರ ಮುಂದಿನ ಬಜೆಟ್‌ನಲ್ಲಿ ಈ ವರ್ಷ ನಾವು 500 ಕೆರೆಗಳನ್ನು ಮಾಡುತ್ತೇವೆ ಎಂದು ಹೇಳಿ ಪ್ರಾರಂಭ ಮಾಡಿ. ಹೊಸ ಮನೆಗಳನ್ನು ಮಾಡುವ ಕಾಲಕ್ಕೆ ಬಿ.ಬಿ.ಎಂ.ಪಿ., ರೂಲ್ಸ್ ಇವೆ. ಅಲ್ಲಿ underground storing ಇದ್ದರೆ ಮಾತ್ರ ನಾವು ಲೈಸೆನ್ಸ್ ಕೊಡುತ್ತೇವೆ ಎಂದು ತಾವು ಈಗಾಗಲೇ ಹೇಳಿದ್ದೀರಿ. ಅದರಂತೆ, ತಮಿಳುನಾಡಿನವರು ಬಹಳಷ್ಟು ಮುಂದುವರೆದುಬಿಟ್ಟಿದ್ದಾರೆ. They are very strict about this. ಅದಕ್ಕೆ ನಾವು ಮಾಡಬೇಕು. ಬಹಳಷ್ಟು ನೀರು ಡ್ರೈನೇಜ್‌ಗೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗುವ ಹಾಗೆ, ನೀರನ್ನು ಉಳಿಸುವಂತಹ ಒಂದು ನೂತನವಾದಂತಹ ಒಂದು ಯೋಜನೆ ಮಾಡಿದರೆ ಅನುಕೂಲವಾಗುತ್ತದೆ ಎಂದು ತಮ್ಮಲ್ಲಿ ಹೇಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಅಲ್ಲಂ ವೀರಭದ್ರಪ್ಪನವರು ವಿಶೇಷವಾಗಿ ಬೆಂಗಳೂರಿನಲ್ಲಿ ಮಳೆ ನೀರು ಸಂಗ್ರಹಣೆ ಮಾಡುವ ವಿಚಾರವಾಗಿ ಬಹಳಷ್ಟು ಆಸಕ್ತಿ ವಹಿಸಿ ಪ್ರಶ್ನೆಯನ್ನು ಕೇಳಿದ್ದಾರೆ. ಸಾಮಾನ್ಯವಾಗಿ ಮನೆಗಳ ಮೇಲೆ ಬಿದ್ದಿರುವಂತಹ ಮಳೆ ನೀರನ್ನು ಸಂಗ್ರಹ ಮಾಡುವುದನ್ನು ನಾವು ಕಡ್ಡಾಯವಾಗಿ ನಮ್ಮ plan approve ನಲ್ಲಿಯೇ ಮಾಡಿದ್ದೇವೆ. ಈಗ ಅದು ಬಹಳ ದೊಡ್ಡ ಪ್ರಮಾಣದಲ್ಲಿ ಕಾರ್ಯಗತವಾಗುತ್ತಿದೆ. ಮೊದಲು ಉಳಿದವುಗಳನ್ನೆಲ್ಲಾ ಕಡ್ಡಾಯ ಮಾಡುವುದಕ್ಕೆ ಆದೇಶ ಮಾಡಿದ್ದೇವೆ. ಯಾವ ರೀತಿ ಚನ್ನೈನಲ್ಲಿ ದೊಡ್ಡ ಪ್ರಮಾಣದಲ್ಲಿ ಆಗಿದೆ, ಅದೇ ರೀತಿ ಬೆಂಗಳೂರಿನಲ್ಲಿಯೂ ಕೂಡ ಆಗುತ್ತಿದೆ. ಈಗ ಸಾರ್ವಜನಿಕ ಸ್ಥಳಗಳಲ್ಲಿ ನೀರಿನ ಸಂಗ್ರಹ ಮಾಡಬೇಕು. ಅಂತರ್ಜಲದ ಮಟ್ಟವನ್ನು ಹೆಚ್ಚಿಸಬೇಕೆನ್ನುವ ತಮ್ಮ ಕಳಕಳಿಯನ್ನು ನಾನು ಒಪ್ಪುತ್ತೇನೆ. ಹಲವಾರು ಸಲಹೆಗಳನ್ನು ತಾವು ಕೊಟ್ಟಿದ್ದೀರಿ, ಅವುಗಳನ್ನು ನಾನು ಪರಿಶೀಲನೆ ಮಾಡುತ್ತೇನೆ. ಕೆಲವು ಕಡೆ ಇದು ಕಷ್ಟಸಾಧ್ಯವಾಗುತ್ತದೆ. ನಾವು ಮಳೆ ನೀರನ್ನು ಸಂಗ್ರಹ ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯ ಇದೆ ಮತ್ತು ಈಗಾಗಲೇ ಕೆಲವು ಕೆರೆಗಳು ಏನಿವೆ, ಆ ಕೆರೆಗಳಲ್ಲಿ ನೀರು ಸಂಗ್ರಹ ಮಾಡುವುದಕ್ಕೆ ಅವಕಾಶ ಇದೆಯೋ, ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡಿ ಕೆಲವು ಕೆರೆಗಳಲ್ಲಿ ಈ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇನ್ನು ಕೆಲವು ಖಾಸಗಿ ಜಾಗ ಮತ್ತು ಖಾಸಗಿ ಆಸ್ತಿಯಲ್ಲಿ ಮಳೆ ನೀರನ್ನು ಸಂಗ್ರಹ ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ ಮತ್ತು ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆ ಏನಿದೆ, ಅವುಗಳನ್ನು ಕೂಡ ಪರಿಶೀಲನೆ ಮಾಡುತ್ತೇವೆ. ಒಟ್ಟಾರೆಯಾಗಿ ಮಳೆ ನೀರಿನ ಸಂಗ್ರಹ ಬಹಳ ಅವಶ್ಯಕತೆ ಇದೆ. ಈ ಎರಡು ವರ್ಷ ಹೆಚ್ಚಾಗಿ ಮಳೆಯಾಗಿದೆ. ಮುಂದೆ ಮಳೆಯಾಗದೇ ಇರುವಂತಹ ಸಂದರ್ಭದಲ್ಲಿಯೂ ಕೂಡ ನಮ್ಮ ಅಂತರ್ಜಲ ಕುಸಿಯಬಾರದು. ಆ ನಿಟ್ಟಿನಲ್ಲಿ ಜನಾಂದೋಲನ ರೂಪದಲ್ಲಿ ಇದನ್ನು ನಾವು ತೆಗೆದುಕೊಂಡು ಹೋಗುತ್ತೇವೆ ಹಾಗೂ ತಮ್ಮ ಸಲಹೆಗಳನ್ನು ಅದರಲ್ಲಿ ಅಳವಡಿಸುತ್ತೇವೆ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ನರೇಗಾ ಯೋಜನೆಯ ಅಮೌಂಟ್‌ನಲ್ಲಿ ಇದನ್ನು ಕನ್ವರ್ಟ್ ಮಾಡುವುದಕ್ಕೆ, ಟ್ಯಾಕ್ಸ್ ಮಾಡುವುದಕ್ಕೆ ಏನಾದರೂ ಅವಕಾಶ ಇದ್ದರೆ, ಅದನ್ನು ಶೇಕಡ 20 ರಿಂದ 25 ರಷ್ಟು ಮಾಡಿದರೆ it will be useful ಎನ್ನುವುದು ನನ್ನ ಸಲಹೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನರೇಗಾ ಯೋಜನೆ ಎಲ್ಲಿದೆಯೋ ಅಲ್ಲಿ ಮಾಡಬಹುದು. ಬೆಂಗಳೂರು ನಗರದಲ್ಲಿ ನರೇಗಾ ಯೋಜನೆಯನ್ನು ಮಾಡುವುದಲ್ಲ. ಬೇರೆ ಬೇರೆ ಗ್ರಾಮೀಣ ಪ್ರದೇಶಗಳಲ್ಲಿ ನರೇಗಾ ಯೋಜನೆಯನ್ನು ಮಾಡಬಹುದು.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ಗ್ರಾಮೀಣ ಪ್ರದೇಶದಲ್ಲಿಯೇ ಮಾಡಬೇಕು. Mines & Geology ಇಲಾಖೆಯಿಂದ ಮಾಡಿಸಬಹುದು ಎನ್ನುವುದು ನನ್ನ ನಂಬಿಕೆ.

**ಪ್ರಶ್ನೆ ಸಂಖ್ಯೆ: 558**

(ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ಸದನದಲ್ಲಿ ಉಪಸ್ಥಿತರಿರಲಿಲ್ಲ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

**ಪ್ರಶ್ನೆ ಸಂಖ್ಯೆ: 536**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆಗೆ ಸೆಕ್ಯೂರಿಟಿ ಲೇಬಲ್ ಎಂದು ಮದ್ಯದ ಬಾಟಲಿಗಳ ಮೇಲೆ ಮುದ್ರಿಸುವುದಾಗಿದೆ. ಮಾನ್ಯ ಸಚಿವರು ಹೊಸಬರಿದ್ದಾರೆ. ಇದರ ಬಗ್ಗೆ ಅವರಿಗೆ ಯಾವುದೇ ಮಾಹಿತಿ ಗೊತ್ತಿಲ್ಲ ಮತ್ತು ಇದು ಮಾನ್ಯ ಸಚಿವರ ಗಮನಕ್ಕೆ ಬಂದಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಸಲಹೆ ಕೊಡಿ. ಅವರಿಗೆಲ್ಲಾ ಗೊತ್ತಿದೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನೇನು ಹಗರಣ ಆಗಿದೆ ಎನ್ನುವುದರ ಬಗ್ಗೆ ಪತ್ತೆ ಹಚ್ಚಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ. ಇದ್ದರಿಂದ, ಸರ್ಕಾರಕ್ಕೆ ಸುಮಾರು 300 ರಿಂದ 400 ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೋ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ. ಎರಡನೆಯದು, 2009ನೇ ಇಸ್ವಿಯಿಂದ ಒಂದೇ ಕಂಪನಿಗೆ ಎರಡು ವರ್ಷಕ್ಕೆ extension ಮಾಡುತ್ತಿದ್ದಾರೆ. ಇದು ಸಹ ಮಾನ್ಯ ಸಚಿವರ ಗಮನದಲ್ಲಿ ಇದೆಯೇ ಎಂದು ಕೇಳುತ್ತಿದ್ದೇನೆ. ಇದಕ್ಕೆ ಟೆಂಡರ್ ಏಕೆ ಕರೆದಿಲ್ಲ? ಇದರಲ್ಲಿ ಎಷ್ಟು ನಷ್ಟವಾಗಿದೆ ಎಂದು ಮಾನ್ಯ ಸಚಿವರು ಹೇಳಬೇಕು. ಈ ಗುತ್ತಿಗೆಯು ದಿನಾಂಕ:01-04-2020 ರಿಂದ ದಿನಾಂಕ:30-03-2023ರ ವರೆಗೆ ಕರಾರನ್ನು ಮಾಡಿಕೊಳ್ಳಲಾಗಿದೆ ಎಂದು ಉತ್ತರದಲ್ಲಿ ನೀಡಿದ್ದಾರೆ. ಆದರೆ, ಇವರು ಗ್ಲೋಬಲ್ ಟೆಂಡರ್ ಕರೆದಿಲ್ಲ ಮತ್ತು ಇದರಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಒಂದೇ ನಂಬರ್‌ನಲ್ಲಿ ಎರಡು ಬಾಟಲಿಗಳು ಹೋಗುತ್ತದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, 1990 ರಿಂದ 2007 ರವರೆಗೂ ಮೆ|| ಎಂ.ಸಿ ಅಂಡ್ ಎ., ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಚಿವರೇ, ಮೆ|| ಎಂ.ಸಿ ಅಂಡ್ ಎ., ಸರ್ಕಾರಿ ಸ್ವಾಮ್ಯವಾಗಿದೆ. ಅವರು ಏನು ಹೇಳುತ್ತಾರೆಯೆಂದರೆ, ಮಣಿಪಾಲ್ . . .

**ಸಭಾಪತಿಯವರು:-** ಮಾನ್ಯ ಕೆ.ಗೋವಿಂದರಾಜ್‌ರವರೇ, ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ನಾನು ಮೊದಲು ಉತ್ತರವನ್ನು ಕೊಡುತ್ತೇನೆ. ತಾವು ಏನಾದರೂ ಇದ್ದರೆ ನಂತರ ಕೇಳಿ.

---

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮೊದಲು ಉತ್ತರವನ್ನು ಹೇಳಿ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, 1990 ರಿಂದ 2007 ರವರೆಗೂ ಮೆ|| ಎಂ.ಸಿ ಅಂಡ್ ಎ., ಮುಖೇನ ಅಲ್ಲಿಯೇ ಲೇಬಲ್‌ಗಳನ್ನು ಮುದ್ರಣ ಮಾಡಿ ಕೊಡುವಂತಹ ಕೆಲಸವನ್ನು ಮಾಡುತ್ತಿದೆ. ಸರ್ಕಾರವು 2007 ರಲ್ಲಿ ಸಾರಾಯಿ ನಿಷೇಧ ಮಾಡಿದ ಮೇಲೆ ಇಲಾಖೆಯ ಮೇಲೆ ಇನ್ನು ಹೆಚ್ಚಿನ ಹೊರೆ ಬೀಳುವಂತಹ ಸಂದರ್ಭದಲ್ಲಿ 2006-07ರಲ್ಲಿ ಟೆಂಡರ್ ಕರೆಯುತ್ತಾರೆ. ಈ ಟೆಂಡರ್ ಅನ್ನು ಕರೆದಾಗ ಇದಕ್ಕೆ ಸುಮಾರು 7 ಜನರು ಭಾಗಿಯಾಗುತ್ತಾರೆ. ಇದರಲ್ಲಿ Gobe Printers ಮತ್ತು ಮಣಿಪಾಲ್ ಪ್ರೆಸ್ ಈ ಇಬ್ಬರು ಅರ್ಹತೆಯನ್ನು ಹೊಂದುತ್ತಾರೆ. ಆ ಎರಡರಲ್ಲಿ ಮಣಿಪಾಲ್ ಪ್ರೆಸ್ ಇವರಿಗೆ ಕೊಡಬೇಕೆನ್ನುವ ತೀರ್ಮಾನವನ್ನು ಅವತ್ತಿನ ಸರ್ಕಾರ ತೆಗೆದುಕೊಳ್ಳುತ್ತದೆ. 2009-10ನೇ ಸಾಲಿನಲ್ಲಿ 3 ವರ್ಷಕ್ಕೆ ಟೆಂಡರ್ ಕರೆಯುತ್ತಾರೆ. ಈ ಟೆಂಡರ್‌ನಲ್ಲಿ 4 ಜನರು ಭಾಗಿಯಾಗುತ್ತಾರೆ. ಅದರಲ್ಲಿ ಮಣಿಪಾಲ್ ಪ್ರೆಸ್ ರವರಿಗೆ ಅರ್ಹತೆ ಹೊಂದಿರುವುದರಿಂದ, 3 ವರ್ಷಕ್ಕೆ ಈ ಟೆಂಡರ್ ಅನ್ನು ಕೊಡಲಾಗುತ್ತದೆ. 2012ನೇ ಸಾಲಿನ ನಂತರ ಮತ್ತೆ ಟೆಂಡರ್ ಅನ್ನು ಕರೆಯುತ್ತಾರೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಯಾವುದೇ ಟೆಂಡರ್ ಕರೆದಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಗೋವಿಂದರಾಜ್‌ರವರೇ, ಮೊದಲು ಮಾನ್ಯ ಸಚಿವರು ಉತ್ತರ ಹೇಳುವುದನ್ನು ಕೇಳಿ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಕೊಡುತ್ತೇನೆ. ಈ ಟೆಂಡರ್ ಅನ್ನು 90 ದಿನಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. ಇದು 90 ದಿನಗಳಲ್ಲಿ ಪೂರ್ಣವಾಗುವುದಿಲ್ಲ. ತುರ್ತಾಗಿ ಈ ಲೇಬಲ್ ಅನ್ನು ಕೊಡಲೇ ಬೇಕಾಗಿರುವಂತಹ ಸಂದರ್ಭದಲ್ಲಿ ಅವತ್ತಿನ ಸರ್ಕಾರಗಳು ಇವತ್ತು ಕಿಯೋನಿಕ್ಸ್ ಮತ್ತು ಎಂ.ಎಸ್.ಐ.ಎಲ್., ಮತ್ತು ಕೆ.ಆರ್.ಐ.ಡಿ.ಎಲ್., ಹಾಗೂ ಇನ್ನು ಅನೇಕ ಸಂಸ್ಥೆಗಳಿಗೆ 4(G) exemption ಕೊಡುವಂತಹ ಸಂದರ್ಭದಲ್ಲಿ ಇಲ್ಲಿಯೂ ಕೂಡ 4(G) exemption ಕೊಡಬೇಕೆನ್ನುವ ತೀರ್ಮಾನವನ್ನು ಮಾಡಿ exemption ಕೊಟ್ಟು, ಮಣಿಪಾಲ್ ಪ್ರೆಸ್‌ರವರಿಗೆ ಕೊಡುವಂತಹ ಕೆಲಸವನ್ನು ಅವತ್ತಿನ ಸರ್ಕಾರ ಮಾಡುತ್ತದೆ. ನಂತರ 2014ನೇ ಸಾಲಿನಲ್ಲಿ ಡಾ|| ರವಿಶಂಕರ್, ನಿರ್ದೇಶಕರು, ಸರ್ಕಾರಿ ಮುದ್ರಣಾಲಯರವರ ಅಧ್ಯಕ್ಷತೆಯಲ್ಲಿ ಒಂದು ಟೆಕ್ನಿಕಲ್ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿ ವರದಿಯನ್ನು ಕೊಡಬೇಕೆಂದು ತಿಳಿಸುತ್ತಾರೆ. ದಿನಾಂಕ:20-10-2014 ರವರೆಗೆ ಮದ್ಯದ ಬಾಟಲಿಗಳ ಮೇಲೆ HOLOGRAM ವುಳ್ಳ ಅಬಕಾರಿ ಭದ್ರತಾ ಚೀಟಿ ಮತ್ತು ಪಾಲಿಸ್ಟಾರ್ ಆಧಾರಿತ ಒಂದು EALs (Excise Adhesive Labels) ಅಬಕಾರಿ ಭದ್ರತಾ ಚೀಟಿಗಳನ್ನು ಶಿಫಾರಸ್ಸು ಮಾಡುತ್ತದೆ. ಅಂದಿನ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರಿ ಮುದ್ರಣಾಲಯಕ್ಕೆ ಏಕೆ ಕೊಡಬೇಕೆಂಬ ಪ್ರಸ್ತಾಪವನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾಡುತ್ತಾರೆ. ಆ ಸಂದರ್ಭದಲ್ಲಿ ಇದನ್ನು ಸರ್ಕಾರಿ ಮುದ್ರಣಾಲಯದಲ್ಲಿಯೇ ಮಾಡಬೇಕಾದರೆ ಮೆಷಿನರಿಗಳನ್ನು ತೆಗೆದುಕೊಂಡು ಮಾಡುವುದಕ್ಕೆ 13 ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿದಾಗ ಮತ್ತೆ . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಏನು ಮಾಡುತ್ತೀರಿ ಎಂದು ಹೇಳಿ?

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸಿಎಜಿ ವರದಿಯಲ್ಲಿಯೂ ಇಷ್ಟು . . .

**ಸಭಾಪತಿಯವರು:-** ಮಾನ್ಯ ಕೆ.ಗೋವಿಂದರಾಜ್‌ರವರೇ, ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ. ನಂತರ ತಮಗೆ ಅವಕಾಶ ಕೊಡುತ್ತೇನೆ. ಆಗ ತಾವು ಪ್ರಶ್ನೆಯನ್ನು ಕೇಳಿ. ಮಾನ್ಯ ಸಚಿವರೇ, ತಾವು ಬೇಗ ಮುಗಿಸಿ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಹಿಂದೆ ಇದ್ದಂತಹ ಎಲ್ಲಾ ಸರ್ಕಾರಗಳು ಒಂದು ಕಮಿಟಿಯನ್ನು ಮಾಡುತ್ತದೆ. ಆ ಕಮಿಟಿಯಲ್ಲಿ ಹಿಂದೆ ಇದ್ದಂತಹ ಸರ್ಕಾರದ ಮುಖ್ಯಮಂತ್ರಿಗಳು ಸರ್ಕಾರಿ ಮುದ್ರಣಾಲಯಕ್ಕೆ ಕೊಡಬೇಕೆನ್ನುವ ಪ್ರಸ್ತಾವನೆಯನ್ನು ಹೇಳುತ್ತಾರೆ. ಇದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಈ ಸರ್ಕಾರಿ ಮುದ್ರಣಾಲಯದವರು ಮೆಷಿನರಿಗಳನ್ನು ಹಾಕಿ ಮಾಡಬೇಕಾದರೆ 13 ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ ಎಂದಾಗ ಇದಕ್ಕೆ 4(G) exemption ತೆಗೆದುಕೊಂಡು ಮತ್ತೆ ವಿಸ್ತರಣೆ ಮಾಡುತ್ತಾರೆ. ಮತ್ತೆ ಟೆಂಡರ್ ಕರೆದಂತಹ ಸಂದರ್ಭದಲ್ಲಿ ಪಾಲಿಸ್ಟಾರ್ ಆಧಾರಿತ ಲೇಬಲ್ ಮತ್ತು Adhesive paper label ಇದರಲ್ಲಿ ಯಾವ ಟೆಂಡರ್ ಅನ್ನು ಕರೆಯಬೇಕೆಂಬ ಬಗ್ಗೆ ತೀರ್ಮಾನವನ್ನು ಮಾಡಿದಾಗ, ಪಾಲಿಸ್ಟಾರ್ ಆಧಾರಿತ ಲೇಬಲ್‌ಗೆ ಟೆಂಡರ್ ಕರೆಯಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಆ ಟೆಂಡರ್ ಅನ್ನು ಕರೆದಂತಹ ಸಂದರ್ಭದಲ್ಲಿ ಪರಿಸರವಾದಿಗಳು ಪಾಲಿಸ್ಟಾರ್ ಆಧಾರಿತ ಇ-ಟೆಂಡರ್ ಅನ್ನು ರದ್ದು ಮಾಡಬೇಕೆಂದು 2018 ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ ಪ್ರಕರಣ ದಾಖಲಿಸುತ್ತಾರೆ. ಆ ಸಂದರ್ಭದಲ್ಲಿ ಆ ಟೆಂಡರ್ ಅನ್ನು ರದ್ದುಗೊಳಿಸಲಾಗುತ್ತದೆ. ಮತ್ತೆ 4(G) exemption ನಲ್ಲಿ ಕೊಡುವಂತಹ ಕೆಲಸ ಅವತ್ತಿನ ಸರ್ಕಾರಗಳು ಮಾಡಿರುವಂತಹದ್ದು ಇದೆ. 2020ನೇ ಸಾಲಿನಲ್ಲಿ 4(G) exemption ಅನ್ನು ತೆಗೆದುಕೊಂಡು, ದಿನಾಂಕ: 01-04-2020 ರಿಂದ ದಿನಾಂಕ:30-03-2023 ರವರೆಗೆ 3 ವರ್ಷಗಳಿಗೆ ಗುತ್ತಿಗೆ ಕರಾರನ್ನು ಮಾಡಿರುತ್ತಾರೆ.

(ಮುಂದು)

---

(1130) ಎಸ್‌ಪಿಆರ್/ವಿಕೆ 5:00 16/12/2021

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಗೋಪಾಲಯ್ಯ(ಮುಂದು):-**

ಇದರ ಜೊತೆಗೆ ಆ ಕಾರ್ಖಾನೆಗಳಿಂದ ಅವರ ಹಣವನ್ನೇ ಪಡೆದುಕೊಳ್ಳಲಾಗಿದೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟವಾಗಿರುವುದಿಲ್ಲ. ಕಾರ್ಖಾನೆಗಳಿಂದಲೇ ವಸೂಲು ಮಾಡಲಾಗುತ್ತದೆ. ಎಂ.ಸಿ. ಮತ್ತು ಎ. ಕಾರ್ಖಾನೆಯವರು 2.08 ರೂಪಾಯಿಗಳನ್ನು ತಾವಿಟ್ಟುಕೊಂಡು, ಇನ್ನುಳಿದ ಮೊತ್ತವನ್ನು ಮುದ್ರಣ ಮಾಡಿದ ಮಣಿಪಾಲ್ ಪ್ರಿಂಟರ್ಸ್‌ರವರಿಗೆ ಕೊಡುವ ಕೆಲಸವನ್ನು ಮಾಡಲಾಗುತ್ತದೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟವುಂಟಾಗಿಲ್ಲ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಒಂದು ಲೇಬಲ್ ಎಷ್ಟು ಮೊತ್ತವನ್ನು ವಿಧಿಸಲಾಗುತ್ತದೆ? ನಾನು ಸರ್ಕಾರಕ್ಕೆ ನೀಡುವ ಸಲಹೆ ಏನೆಂದರೆ, ನೇರವಾಗಿ ಗ್ಲೋಬಲ್ ಟೆಂಡರ್‌ನ್ನು ಕರೆದರೆ, ಸರ್ಕಾರಕ್ಕೆ 300 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಒಂದೇ ಕಂಪೆನಿಗೆ ವಿಸ್ತರಣೆ ಮಾಡುತ್ತಿದೆ, ಇದು ತಪ್ಪು ಎಂದು ನಾನು ಹೇಳುತ್ತೇನೆ. ಇದರಲ್ಲಿ ನಿಮ್ಮ ಇಲಾಖೆಯವರು ಮತ್ತು ಸರ್ಕಾರಿ ಮುದ್ರಣಾಲಯದವರು ಎಲ್ಲರೂ ಶಾಮೀಲಾಗಿದ್ದಾರೆ. ಇದನ್ನು ನಾನು ನೇರವಾಗಿ ಹೇಳುತ್ತಿದ್ದೇನೆ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಇದರಿಂದ ಸರ್ಕಾರಕ್ಕೆ ಒಂದು ರೂಪಾಯಿನಷ್ಟೂ ನಷ್ಟವಾಗಿಲ್ಲ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ನೀವು ಗ್ಲೋಬಲ್ ಟೆಂಡರ್‌ನ್ನು ಕರೆಯಿರಿ. ಆಗ ಇದರಿಂದ ಎಷ್ಟು ಲಾಭ ಬರುತ್ತದೆಂದು ನಾನು ಹೇಳುತ್ತೇನೆ.

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಇದನ್ನು ಸರ್ಕಾರದಿಂದ ನೀಡಲಾಗುತ್ತಿಲ್ಲ. ಕಂಪೆನಿಗಳಿಂದ ವಸೂಲಿ ಮಾಡಿ ಕೊಡಲಾಗುತ್ತಿದೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, distilleries ಕಂಪೆನಿಯವರೇ ನೀಡುತ್ತಾರೆ. ಆದರೆ, ಸರ್ಕಾರಕ್ಕೆ ಇಂತಿಷ್ಟು ಮೊತ್ತ ಬರುತ್ತದೆ. ಈ ವಿಚಾರವು ಸಚಿವರಿಗೆ ತಿಳಿದಿಲ್ಲ.

**ಸಭಾಪತಿಯವರು:-** ಈ ಬಗ್ಗೆ ಸಚಿವರೇ ಪರಿಶೀಲಿಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಕೆ.ಗೋಪಾಲಯ್ಯ:-** ಮಾನ್ಯ ಸಭಾಪತಿಯವರೇ, ಇದು ಸರ್ಕಾರಕ್ಕೆ ಬರುವುದಿಲ್ಲ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಸದಸ್ಯರು ಮುಖ್ಯಮಂತ್ರಿಗಳ ಸಲಹೆಗಾರರಾಗಿದ್ದರು. ಆಗ ಈ ಸಲಹೆಯನ್ನು ಏಕೆ ನೀಡಲಿಲ್ಲ?

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಆಗ ನಾನು ಅಬಕಾರಿ ಮಂತ್ರಿಯಾಗಿರಲಿಲ್ಲ. ಒಂದು ವೇಳೆ, ಅಬಕಾರಿ ಮಂತ್ರಿಯಾಗಿದ್ದರೆ ನಾನೇ ಮಾಡುತ್ತಿದ್ದೆನು.

**Dr.K.SUDHAKAR:-**You were entitled. ನೀವು ಆಗ ಮಾಡಬಹುದಾಗಿತ್ತು.

**ಸಭಾಪತಿಯವರು:-** ಸಚಿವರೇ ಈ ಬಗ್ಗೆ ಚರ್ಚಿಸಿ, ಪರಿಶೀಲಿಸಿ.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಲೇಬಲ್ ಪ್ರಿಂಟಿಂಗ್ ಬಗ್ಗೆ ಸದಸ್ಯರು ಬಹಳ ಗಂಭೀರವಾಗಿ ಪರಿಗಣಿಸಿದ್ದಾರೆ ಎಂದು ಕಾಣುತ್ತದೆ.

**ಡಾ: ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಲಾಭವಾಗಲಿ ಹಾಗೂ ಅವರಿಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕಾಗಿಯೇ ನಾನು ಹೇಳಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಸದಸ್ಯರು ಯಾವಾಗಲೂ ನಮ್ಮ ಅನುಕೂಲಕ್ಕಾಗಿಯೇ ಯೋಚನೆ ಮಾಡುತ್ತಾರೆನ್ನುವುದು ನನಗೆ ಗೊತ್ತಿದೆ. ಲೇಬಲ್ ಹಿಂದಿನ ಬಗ್ಗೆ ಸದಸ್ಯರು ಚಿಂತನೆ ಮಾಡಿದ್ದರೆ, ಅದು ಬೇರೆಯ ರೀತಿಯದ್ದಾಗಿರುತ್ತಿತ್ತು. ಆದರೆ ಸದಸ್ಯರು ಕೇವಲ ಲೇಬಲ್ ಬಗ್ಗೆ ಮಾತ್ರವೇ ಯೋಚನೆ ಮಾಡಿದ್ದರಿಂದ ನಾವೂ ಸಹ ಈ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ಸದಸ್ಯರು ಹೇಳುವುದರಲ್ಲಿ ಅಂಶವೂ ಇದೆ. ಲೇಬಲ್‌ಗಳ ಡಿಸೈನ್‌ಗಳಲ್ಲಿ ಭದ್ರತಾ ಅಂಶಗಳಿವೆ. ಹೀಗಾಗಿ ಇದರ ದುರ್ಬಳಕೆಯಾಗುವ ಸಾಧ್ಯತೆಗಳಿವೆ. ಇದನ್ನು ಭದ್ರತೆಯಲ್ಲಿ ಮುದ್ರಣಗೊಳ್ಳಬೇಕಾಗುತ್ತದೆ. ಸದಸ್ಯರು ಈ ಬಗ್ಗೆ ಸಲಹೆಯನ್ನು ನೀಡಿದ್ದಾರೆ. ಹಾಲಿ ಅಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಸಚಿವರು ಎಲ್ಲಾ ವಿವರಣೆ ನೀಡಿದ್ದಾರೆ. ಈ ಎರಡೂ ಅಂಶಗಳನ್ನು ಗಮನಿಸಿ, ಅಗತ್ಯವಿರುವ ಸುಧಾರಣೆಗಳನ್ನು ತರುವ ಬಗ್ಗೆ ನಾನೇ ಸ್ವತಃ ನೋಡಿ, ಈ ಬಗ್ಗೆ ಅಬಕಾರಿ ಮತ್ತು ಆರ್ಥಿಕ ಇಲಾಖಾಧಿಕಾರಿಗಳ ಸಭೆಯನ್ನು ಕರೆದು, ತೀರ್ಮಾನವನ್ನು ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 540**
**(ಉತ್ತರವನ್ನು ಲಗತ್ತಿಸಿದೆ)**

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮೇಕೆದಾಟು ಯೋಜನೆಯು ...., ಕಾವೇರಿ ನದಿಯು ಕನ್ನಡ ನಾಡಿನ ದೇವ ನದಿ ಮತ್ತು ಜೀವನದಿಯಾಗಿದೆ. ನಾಡಪ್ರಭು ಕೆಂಪೇಗೌಡರವರು ನಿರ್ಮಿಸಿದ ಬೆಂಗಳೂರು ನಗರಕ್ಕೆ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ, 4.75 ಟಿ.ಎಂ.ಸಿ.ಯಷ್ಟು ಈ ನದಿ ನೀರಿನ್ನು ಇಲ್ಲಿನ ನಾಗರಿಕರು.....

**ಸಭಾಪತಿಯವರು:-** ತಾವು ಉತ್ತರದ ಬಗ್ಗೆ ಮಾತ್ರವೇ ಕೇಳಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಜ್ವಲಂತ ಸಮಸ್ಯೆಯಾಗಿದೆ. ಬೆಂಗಳೂರಿನ ನಾಗರಿಕರಿಗೆ ಕುಡಿಯಲು ಮತ್ತು ಗೃಹೋಪಯೋಗಿ ಬಳಕೆಗಾಗಿ ಈ ನದಿಯ ನೀರಿನ ಉಪಯೋಗವು ಬಹಳ ದೊಡ್ಡ ಸವಾಲಾಗಿದೆ. ಬೆಂಗಳೂರು ನಗರವು ನದಿಯ ದಂಡೆಯಲ್ಲಿ ಇಲ್ಲದ ನಗರವಾಗಿದೆ. ಹೀಗಾಗಿ ಈ ಹಿಂದಿನ ಕಾಲದಲ್ಲಿ ಕುಡಿಯುವ ನೀರಿಗಾಗಿ ಕೆರೆ-ಕಟ್ಟೆಗಳನ್ನು ಅವಲಂಬಿಸುತ್ತಿದ್ದೆವು. ಇವತ್ತಿನ ದಿವಸ ಅಂತರ್ಜಲದ ಮಟ್ಟವು ಕುಸಿದಿದೆ. ಈ ಹಿನ್ನೆಲೆಯಲ್ಲಿ ಈ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ....

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿತ ಸೂಕ್ಷ್ಮತೆಯನ್ನು ಸದಸ್ಯರು ಅರ್ಥಮಾಡಿಕೊಳ್ಳಬೇಕು. ಇಷ್ಟನ್ನೇ ನಾವು ನಿಮ್ಮನ್ನು ಕೇಳಿಕೊಳ್ಳುವುದು.

**ಡಾ: ತೇಜಸ್ವಿನಿಗೌಡ:-** ಒಂದು ನಿಮಿಷ ಮಾನ್ಯ ಸಚಿವರೇ, ಈ ವಿಷಯದ ಬಗ್ಗೆ ನನಗೆ ಜವಾಬ್ದಾರಿ ಇದೆ. ನಾನು ಕನಕಪುರ ಲೋಕಸಭಾ. . . .

**ಸಭಾಪತಿಯವರು:-** ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ...

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಪ್ರಶ್ನೆಯನ್ನು ಪೂರ್ತಿಯಾಗಿ ಕೇಳುವುದಕ್ಕೆ ಅವಕಾಶ ನೀಡಿ.

**ಸಭಾಪತಿಯವರು:-** ಈ ವಿಷಯವು ನ್ಯಾಯಾಲಯದಲ್ಲಿರುವುದರಿಂದ . . .

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿ ಗೌಡ:-** ಕನ್ನಡ ನಾಡಿನ ಎಲ್ಲಾ ಹಿತವನ್ನು ಪ್ರಶ್ನಿತ ಯೋಜನೆಯು ಒಳಗೊಂಡಿದೆ. ನದಿ ಮತ್ತು ಅಂತರರಾಜ್ಯ ನೀರಿನ ಸೂಕ್ಷ್ಮತೆಗಳು ....

**ಸಭಾಪತಿಯವರು:-** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ರಾಜ್ಯದ ಹಿತದೃಷ್ಟಿಯಿಂದ ಈ ವಿಚಾರವನ್ನು ಕೇಳುವುದು ಬೇಡವೆಂದು ಸಚಿವರು ಹೇಳುತ್ತಿದ್ದಾರೆ. ಈ ಮಂತ್ರಿಗಳು ಸಚಿವರು ಹೇಳುತ್ತಾರೆ; ಆಮೇಲೆ ನೀವು ಚರ್ಚೆಯನ್ನು ಮಾಡಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, 2017 ನೇ ಇಸ್ವಿಯಲ್ಲಿ 6,000 ಕೋಟಿ ರೂಪಾಯಿಗಳಷ್ಟು ಇದ್ದ ವೆಚ್ಚವು ಇವತ್ತಿನ ದಿವಸ 9,000 ಕೋಟಿ ರೂಪಾಯಿಗಳಷ್ಟು ಆಗಿದೆ.

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಮ್ಮ ಜನತೆಗೆ ಕುತೂಹಲವಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಜಲಸಂಪನ್ಮೂಲ ಸಚಿವರು ಬಹಳಷ್ಟು ಸಾರಿ ದೆಹಲಿಗೆ ಭೇಟಿ ನೀಡಿ; ಪ್ರಯತ್ನಗಳನ್ನು ಮಾಡಿದ್ದಾರೆ. ಇದಕ್ಕೆ ನಾನು ಅವರುಗಳನ್ನು ಅಭಿನಂದಿಸುತ್ತೇನೆ. ನಮ್ಮ ರಾಜ್ಯದ ಜನರಿಗೆ ಮಾಹಿತಿ ದೊರೆಯುವ ದೃಷ್ಟಿಯಿಂದ ಮತ್ತು ನಾಡಿನ ಹಿತದೃಷ್ಟಿಯಿಂದ ಸದನದಲ್ಲಿ ಹೇಳಬಹುದಾದಷ್ಟು ಮಾಹಿತಿಯನ್ನು ಸಚಿವರು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ನಮ್ಮ ಜಲಸಂಪನ್ಮೂಲ ಸಚಿವರು ಒಳ್ಳೆಯ ಮೈಲುಗಲ್ಲನ್ನು ಸಾಧಿಸಿದ್ದಾರೆ.

**ಸಭಾಪತಿಯವರು:-** ಈ ವಿಚಾರದ ಬಗ್ಗೆ ನೀವು ನಂತರದಲ್ಲಿ ಮಾತನಾಡಿ; ಸಚಿವರು ಅದಕ್ಕೆ ಉತ್ತರಿಸುತ್ತಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರವನ್ನು ನೀಡಲಾಗಿದೆ. ಈ ವಿಚಾರದಲ್ಲಿ ತಮ್ಮ ಕೊಠಡಿಯಲ್ಲಿ ಬಹಳ ಸೂಕ್ಷ್ಮವಾಗಿ ತಿಳಿಸಲಾಗಿದೆ. ಇದು ಬಹಳ ಸೂಕ್ಷ್ಮವಾದ ಪ್ರಕರಣವಾಗಿದೆ. ಹೀಗಾಗಿ ಇವರು ಇಲ್ಲಿಗೆ ನಿಲ್ಲಿಸಬೇಕು.

**ಸಭಾಪತಿಯವರು:-** ನೀವು ಅವರಿಗೆ ವೈಯಕ್ತಿಕವಾಗಿ ತಿಳಿಸಿ. ಮುಂದಿನ ಪ್ರಶ್ನೆ ಶ್ರೀ ಗೋವಿಂದರಾಜುರವರೇ, ನಿಮ್ಮ ಪ್ರಶ್ನೆ ಸಂಖ್ಯೆ 455 ಕೌಶಲ್ಯಾಭಿವೃದ್ಧಿ ಇಲಾಖೆಗೆ ವರ್ಗಾವಣೆಗೊಂಡಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

**ಪ್ರಶ್ನೆ ಸಂಖ್ಯೆ: 440**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಎಂ.ಮುನಿರಾಜು ಗೌಡ:-** ಮಾನ್ಯ ಸಭಾಪತಿಯವರೇ, ನಾನು ಕ್ರಮ ಸಂಖ್ಯೆ (ಅ) ರಲ್ಲಿ ಕೇಳಿರುವ ಪ್ರಶ್ನೆಗೆ, 24,975 ಪ್ರಕರಣಗಳು ದಾಖಲಾಗಿವೆ ; ಆ ಪೈಕಿ 1,376 ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದ್ದಾರೆ. ಇದರರ್ಥ ಕಳೆದ ಮೂರು ವರ್ಷಗಳಲ್ಲಿ ಕೇವಲ ಶೇಕಡಾ 5-6 ರಷ್ಟು ಮಾತ್ರವೇ ಸೈಬರ್ ಅಪರಾಧಗಳಲ್ಲಿ ಆರೋಪಿತರುಗಳನ್ನು ಪತ್ತೆ ಹಚ್ಚಲಾಗಿದೆ. ಬೆಂಗಳೂರಿನಲ್ಲಿ 9 ಸೈಬರ್ ಠಾಣೆಗಳಿವೆ. ಇವತ್ತಿನ ದಿವಸ, ಎಲ್ಲಿಯೋ ಒಂದು ಕಡೆ ಬೆಂಗಳೂರಿನಲ್ಲಿರುವ ಸೈಬರ್ ಪೊಲೀಸ್ ಠಾಣೆಗಳು .... ಬೆಂಗಳೂರು ನಗರ ಸಿ.ಐ.ಆರ್. ದಕ್ಷಿಣ, ಆಡುಗೋಡಿ ಟೆಕ್ನಿನಲ್ ಸೆಂಟರ್ ಇಲ್ಲಿನ ಪೊಲೀಸ್ ಠಾಣೆಯಲ್ಲಿಎಷ್ಟು ಪ್ರಕರಣಗಳು ದಾಖಲಾಗಿವೆ ಎಂದು ನೋಡಿದರೆ, ಅಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗಿರುವುದು ನಮಗೆ ತಿಳಿಯುತ್ತದೆ. ಇದರ ಜೊತೆಗೆ, ಸೈಬರ್ ಕ್ರೈಂ ಪ್ರಕರಣಗಳನ್ನು ಪೊಲೀಸ್ ಇಲಾಖೆಯಲ್ಲಿ...... ಇನ್ಸ್‌ಪೆಕ್ಟರ್ ಹುದ್ದೆಯ ಅಧಿಕಾರಿ ಅಥವಾ ಇನ್ಯಾರೇ ಇರಬಹುದು, ಇವರುಗಳನ್ನು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಯಾರನ್ನು ವರ್ಗಾವಣೆ ಮಾಡಲಾಗುತ್ತದೆ ಎನ್ನುವ ಮಾಹಿತಿಯನ್ನು ಮಂತ್ರಿಗಳು ನೀಡಬೇಕು. ನಿವೃತ್ತಿಯ ಅಂಚಿನಲ್ಲಿರುವವರನ್ನು ಅಥವಾ ತಾಂತ್ರಿಕ ಜ್ಞಾನ ಹೊಂದಿದವರನ್ನು ಅಲ್ಲಿಯೆ ವರ್ಗಾವಣೆ ಮಾಡಲಾಗುತ್ತಿದೆಯೇ? ಈ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಕೇವಲ ದೈಹಿಕವಾಗಿ ಸಮರ್ಥರಾಗಿದ್ದರೆ ಸಾಲದು. ಸೈಬರ್ ಕ್ರೈಂ ಅಪರಾಧಿಕ ಕೃತ್ಯಗಳನ್ನು ಬೇಧಿಸಬೇಕಾದರೆ, ಅಲ್ಲಿನ ತನಿಖಾಧಿಕಾರಿಗಳು ತಾಂತ್ರಿಕ ಜ್ಞಾನವನ್ನು ಹೊಂದಿದ್ದರೆ ಮಾತ್ರವೇ ಅನುಕೂಲವಾಗುತ್ತದೆ. ಪೊಲೀಸ್ ಇಲಾಖೆಯಲ್ಲಿರುವ ಇನ್ಸ್‌ಪೆಕ್ಟರ್ ಹುದ್ದೆಯಲ್ಲಿರುವವರು ತಾಂತ್ರಿಕ ಜ್ಞಾನವನ್ನು ಹೊಂದಿದ್ದಾರೆಯೇ ಎನ್ನುವ ಮಾಹಿತಿಯನ್ನು ಸಚಿವರು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಂಬಾ ಒಳ್ಳೆಯ ಪ್ರಶ್ನೆಯನ್ನು ಕೇಳಿ, ತಮ್ಮ ಸಲಹೆಯನ್ನು ನೀಡಿದ್ದಾರೆ. ನಮ್ಮ ರಾಜ್ಯ ಮತ್ತು ದೇಶಗಳಲ್ಲಿ ಐ.ಟಿ.ಬಿ.ಟಿ. ಕ್ಷೇತ್ರದಲ್ಲಿ ಬಹಳ ದೊಡ್ಡ ಸಾಧನೆಯಾಗುತ್ತಿದೆ. ಇದರ ಜೊತೆಗೆ ಸೈಬರ್ ಕ್ರೈಂಗಳ ಸಂಖ್ಯೆಯೂ ಸಹ ಬಹಳ ಜಾಸ್ತಿಯಾಗುತ್ತಿದೆ. ಇದು ಬುದ್ಧಿವಂತರ ಕರಾಮತ್ತಾಗಿದೆ. ಸಾಮಾನ್ಯ ಜನರು ಈ ಕೃತ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕ್ಷಣಾರ್ಧದಲ್ಲಿ ಕೋಟಿಗಟ್ಟಲೆ ಮೊತ್ತವನ್ನು ಲಪಟಾಯಿಸುವ ಕೆಲಸಗಳಾಗುತ್ತಿವೆ. ಮೊಬೈಲ್‌ಗೆ ಬರುವ ಓ.ಟಿ.ಪಿ. ನಂಬರ್‌ಗಳನ್ನು ಬಳಸುವ ಮೂಲಕ ಖಾತೆಯಲ್ಲಿರುವ ಮೊತ್ತವನ್ನೆಲ್ಲಾ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಈ ವಿಚಾರದಲ್ಲಿ ಜನಜಾಗೃತಿಯು ಬಹಳ ಮುಖ್ಯವಾಗಿದೆ. ನಮ್ಮ ಪೊಲೀಸರು ಒಂದೊಂದು

---

ಪ್ರಕರಣವನ್ನು ಬೇಧಿಸಿದಾಗಲೂ ಸಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡಲಾಗುತ್ತದೆ. ಜನರು ಇದನ್ನು ಕೇಳಿಸಿಕೊಂಡಾಗಲೂ ಸಹ, ಇವತ್ತಿನ ದಿನವೂ ಸಹ ನೂರಾರು ಜನರು ಇಂತಹ ವಂಚನೆಗೊಳಗಾಗುತ್ತಿದ್ದಾರೆ. ಬಹಳಷ್ಟು ಸೈಬರ್ ಪ್ರಕರಣಗಳು ದಾಖಲಾಗುತ್ತವೆ; ಆದರೆ ಆರೋಪಿಗಳನ್ನು ಪತ್ತೆ ಹಚ್ಚುವುದಕ್ಕಾಗುತ್ತಿಲ್ಲ. ಆರೋಪಿಗಳು ಎಲ್ಲಿಯೋ ಕುಳಿತುಕೊಂಡು ಇವುಗಳನ್ನು operate ಮಾಡುತ್ತಿರುತ್ತಾರೆ. ದೇಶದ ಬಿಹಾರ ಮತ್ತು ವಿಶೇಷವಾಗಿ ಜಾರ್ಖಂಡ ರಾಜ್ಯಗಳಲ್ಲಿ ಆರೋಪಿಗಳು ಇಂತಹ ಕೃತ್ಯಗಳನ್ನು ಎಸಗುತ್ತಿದ್ದಾರೆ. ರಾಜಸ್ಥಾನ ರಾಜ್ಯದ ಜಮ್ತಾರಾ ಎನ್ನುವ ಪ್ರದೇಶದಲ್ಲಿ ಇಂತಹ ಅಪರಾಧಿಕ ಕೃತ್ಯಗಳನ್ನೆಸಗುತ್ತಿದ್ದಾರೆ. ಇಂತಹ ಆರೋಪಿಗಳನ್ನು ಪತ್ತೆ ಹಚ್ಚುವುದಕ್ಕಾಗದೇ ಇರುವಂತಹ ಕಷ್ಟದ ಕೆಲಸವಾಗಿದೆ. ಈ ಕಾರಣಕ್ಕಾಗಿ ಪೊಲೀಸ್ ಇಲಾಖೆಯ ಸೈಬರ್ ಕ್ರೈಂ ವಿಭಾಗಕ್ಕೆ ಎಲ್ಲಾ ರೀತಿಯ ಸಲಕರಣೆಗಳನ್ನು ನೀಡಲಾಗಿದೆ. ಈ ಬಗ್ಗೆ ಸದಸ್ಯರು ಅನುಮಾನ ವ್ಯಕ್ತಪಡಿಸುವುದು ಬೇಡ. ಇನ್‌ಫೋಸಿಸ್ ಸಂಸ್ಥೆಯ ಸಹಯೋಗದೊಂದಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ವಿದೇಶದಿಂದ ಅನೇಕ ಯಂತ್ರೋಪಕರಣಗಳನ್ನು ತರಿಸಲಾಗಿದೆ. ಸೈಬರ್ ಕ್ರೈಂ ವಿಭಾಗಕ್ಕೆ ತಾಂತ್ರಿಕ ಜ್ಞಾನವುಳ್ಳ ಪೊಲೀಸ್ ಅಧಿಕಾರಿಗಳನ್ನು ನೇಮಿಸಲಾಗಿದೆ. ನಮ್ಮ ರಾಜ್ಯದ ಪೊಲೀಸರು ವಿಶೇಷವಾಗಿ 'ಗೋಲ್ಡನ್ ಹವರ್' ಎಂಬ ಯೋಜನೆಯನ್ನು ಮಾಡಿದ್ದಾರೆ. ಇದನ್ನು ನಾವು ಬಹಳ ಹೆಮ್ಮೆಯಿಂದ ಹೇಳುತ್ತೇವೆ. ಅಪರಾಧಿಕ ಕೃತ್ಯ ನಡೆದ ಎರಡು ಗಂಟೆಗಳೊಳಗೆ '112' ಸಂಖ್ಯೆಗೆ ಅಥವಾ CEN (Cyber Crime, Economic Offences & Narcotics) ಪೊಲೀಸ್ ಠಾಣೆಗೆ ಕರೆ ಮಾಡಿ ಕೃತ್ಯದ ಮಾಹಿತಿಯನ್ನು ನೀಡಿದಾಗ, ತಕ್ಷಣವೇ ದೂರದಾರರ ಖಾತೆಯನ್ನು 'ಸೀಜ್' ಮಾಡಲಾಗುತ್ತದೆ. ಒಂದು ವರ್ಷದಲ್ಲಿ ಈ ರೀತಿಯಾಗಿ ಸೀಜ್ ಮಾಡಿದ ಹಣವು ಬೆಂಗಳೂರು ನಗರವೊಂದರಲ್ಲಿಯೇ 70 ಕೋಟಿ ರೂಪಾಯಿಗಳಷ್ಟಾಗಿದೆ. ಈ ರೀತಿಯಾಗಿ ನಮ್ಮ ಪೊಲೀಸರು ದೂರುದಾರರಿಗೆ ಸಹಾಯ ಮಾಡಿದ್ದಾರೆ.

(ಮುಂದು)

(1131)/5-10/16-12-2021/ಸಿಎಸ್(ಎಲ್ಎಂ)/ವಿಕೆ

**ಶ್ರೀ ಅರಗ ಜ್ಞಾನೇಂದ್ರ(ಮುಂದು)**:-

ಹಿಂದಿನ ಗೃಹ ಸಚಿವರು ಹಾಗೂ ಇಂದಿನ ಮಾನ್ಯ ಮುಖ್ಯಮಂತ್ರಿಗಳು Bankers ಗಳನ್ನು ಕರೆದು ಪೊಲೀಸರ ಜೊತೆಯಲ್ಲಿ ಸಹಯೋಗವನ್ನು ಏರ್ಪಡಿಸಬೇಕೆಂದು ಒಂದು ಸಭೆಯನ್ನು ಮಾಡಿದ ಪರಿಣಾಮವಾಗಿ Bankers ಮತ್ತು ನಮ್ಮ ಪೊಲೀಸನವರು ಸೇರಿ ಈ ವಿಚಾರವಾಗಿ ವಿಶೇಷವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಮ್ಮ ಕರ್ನಾಟಕ ಪೊಲೀಸ್ ಇಲಾಖೆ golden hour ಮಾಡಿರುವುದನ್ನು ಕೇಂದ್ರ ಸರ್ಕಾರವು appreciation ಮಾಡಿದೆ. ಇದರ ಬಗ್ಗೆ ವಿಶೇಷ ಪ್ರಯತ್ನ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದೇವೆ. ತಜ್ಞರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಬಹಳ ತ್ವರಿತ ಗತಿಯಲ್ಲಿ ಈ ವಿಭಾಗವನ್ನು ಬಲಪಡಿಸುತ್ತಿದ್ದೇವೆ.

**ಶ್ರೀ ಮುನಿರಾಜು ಗೌಡ ಪಿ.ಎಂ**:- ಮಾನ್ಯ ಸಭಾಪತಿಗಳೆ, ಕೆಟ್ಟ ಕೆಲಸ ಮಾಡುವವರನ್ನು Cyber Hackers ಎಂದು ಕರೆಯುತ್ತೇವೆ. ಆದರೆ ಸರ್ಕಾರದ ಆಸ್ತಿ-ಪಾಸ್ತಿ ಉಳಿಸಲು ಮತ್ತು ಸಾರ್ವಜನಿಕರ ಆಸ್ತಿ-ಪಾಸ್ತಿ ಉಳಿಸಲು ಸರ್ಕಾರದ ಕಡೆಯಿಂದಲೇ hackers ನ್ನು ನೇಮಕ ಮಾಡಿಕೊಂಡು ಆದರೆ technically sound ಆಗಿರುವವರನ್ನು software ಅಭಿವೃದ್ಧಿಪಡಿಸಿರುವವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಉಪಯೋಗಿಸಿಕೊಂಡು, ಪ್ರತಿ ಜಿಲ್ಲೆಗೆ ಒಂದು ಸೈಬರ್ ಠಾಣೆಗಳನ್ನು ಪ್ರಾರಂಭ ಮಾಡುವುದರ ಮುಖಾಂತರ ಕಾರ್ಯಾಚರಣೆಯನ್ನು ಮಾಡಬೇಕು. ಏಕೆಂದರೆ ಬೆಂಗಳೂರು ಒಂದರಲ್ಲಿಯೇ Headquarters ಇಟ್ಟುಕೊಂಡು ಕೆಲಸ ಮಾಡುವುದು ಸುಲಭವಲ್ಲ. ಗೃಹ ಸಚಿವರೇ ಹೇಳಿದರು ಬೇರೆ ರಾಜ್ಯಗಳಾದ ರಾಜಸ್ತಾನ ಇತರ ರಾಜ್ಯಗಳಲ್ಲಿ ಮಾಡಿದ್ದಾರೆ ಎಂದು. ಕರ್ನಾಟಕದಲ್ಲಿ ಪ್ರತಿಯೊಂದು ಜಿಲ್ಲೆಗೆ ಒಂದು ಸೈಬರ ಠಾಣೆಯನ್ನು ಮಾಡಿ ಅಲ್ಲಿ ಇರುವ ಜನರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವುದು ನನ್ನ ಮನವಿಯಾಗಿದೆ,

**ಶ್ರೀ ಅರಗ ಜ್ಞಾನೇಂದ್ರ**:- ಮಾನ್ಯ ಸಭಾಪತಿಗಳೇ, ಈ ವಿಷಯದಲ್ಲಿ ಸ್ಟಡಿ ಮಾಡಿರುವವರನ್ನು outsource ನಲ್ಲಿ ನೇಮಕ ಮಾಡಿಕೊಳ್ಳುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿಯು ಸೈಬರ್ ವಿಭಾಗವನ್ನು ತೆರೆದಿದ್ದೇವೆ. ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಪೊಲೀಸ್ ಇಲಾಖೆ ಎಲ್ಲಾ ಕೆಲಸವನ್ನು ಮಾಡುತ್ತಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ 465**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಗಳೆ, ಇಂದು ವಿದ್ಯುತ್ ಚಿತಾಗಾರಗಳು ಊರಿನ ಮಧ್ಯೆದಲ್ಲಿ ಬಂದುಬಿಟ್ಟಿವೆ. ಒಂದು ಕಿ.ಮೀ.ವರೆಗೆ ಧೂಳು ಮತ್ತು ವಾಸನೆ ಬರುತ್ತಿದೆ. ಇದನ್ನು ತಡೆಗಟ್ಟಲು ಏನಾದರೂ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಈಗಾಗಲೇ ಊರಿನಲ್ಲಿ ಬಂದಿವೆ ಅದಕ್ಕೆ ಏನು ಮಾಡಲು ಆಗುವುದಿಲ್ಲ. ಆದರೆ ಮುಂದಾದರೂ ಹೊಸ ಬಡಾವಣೆಗಳನ್ನು ಮಾಡುವಾಗ ಚಿತಾಗಾರಗಳು ಒಂದು ಕಿ.ಮೀ ದೂರದಲ್ಲಿ ಇರುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿ ನನ್ನ ವಿನಂತಿ.

**ಶ್ರೀ ಬಸವರಾಜ ಬೊಮ್ಮಾಯಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ಹೇಳುತ್ತಿರುವ ವಿಷಯ ನಿಜವಾಗಿದೆ. ಬೆಂಗಳೂರಿನಲ್ಲಿ ಒಟ್ಟ ೧೨ Electric Crematorium ಗಳು ಇವೆ. ಒಂದು ದಿನಕ್ಕೆ ಒಟ್ಟು ೧೨ ವಿದ್ಯುತ್ ಚಿತಾಗಾರದಲ್ಲಿ ೧೮೦ ದೇಹಗಳನ್ನು ಅಗ್ನಿಗಾಹುತಿ ಮಾಡಬಹುದು. ಇದಕ್ಕೆ Pollution Control Board ನ ಕೆಲವು norms ಗಳು ಇವೆ. ಇಷ್ಟು ಎತ್ತರದಲ್ಲಿ ಚಿಮಣಿ ಇರಬೇಕು ಇತರೆ ನಿಯಮಗಳು ಇವೆ ಆ ಎಲ್ಲ ನಿಯಮಗಳನ್ನು ನಾವು ಪಾಲನೆ ಮಾಡುತ್ತಿದ್ದೇವೆ. ಕೋವಿಡ್-೧೯ ಸಮಯದಲ್ಲಿ ಬಹಳ ತೊಂದರೆಯಾಯಿತು. ಈ ೧೨ ವಿದ್ಯುತ್ ಚಿತಾಗಾರಗಳು ಸಾಕಾಗಲಿಲ್ಲ. ಆಗ ಹೊಸದಾಗಿ ಮೂರು open crematorium ಗಳನ್ನು ಮಾಡಿ ದಿನಕ್ಕೆ ೫೦ ರಿಂದ ೭೦ ದೇಹಗಳನ್ನು ಸುಡಲಾಗುತ್ತಿತ್ತು. ಇದರಿಂದ ನಾವು ಏನು ಪಾಠ ಕಲಿತ್ತಿದ್ದೇವೆ ಎಂದರೆ, peripheral area ಮಾಡಬೇಕಾದರೆ ಹೆಚ್ಚಿನ capacity ಇರುವ crematorium ಮಾಡಬೇಕು ಇದರಿಂದ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೇವೆ. ಆದ್ದರಿಂದ capacity ಇರುವ crematorium ಮಾಡಲು ಜಮೀನನ್ನು ಆಯ್ಕೆ ಮಾಡಿ ಬೆಂಗಳೂರಿನ ಸುತ್ತ ಇರುವ ಜಮೀನನ್ನ ಆಯ್ಕೆ ಮಾಡಿ crematorium ಮಾಡಬೇಕು ಎನ್ನುವ ವಿಚಾರ ಕೋವಿಡ್-೧೯ ಸಮಯದಲ್ಲಿ ನಮಗೆ ಬಂತು. ಈಗ ಇರುವ ಎಲ್ಲಾ crematorium ಗಳನ್ನು ಒಂದೇ ಸಮಯದಕ್ಕೆ ಮುಚ್ಚಲು ಆಗುವುದಿಲ್ಲ. ಏಕೆಂದರೆ ದೇಹಗಳನ್ನು ಅಗ್ನಿಗಾಹುತಿ ಮಾಡಲೇಬೇಕಾಗುತ್ತದೆ. ಹೊರಗಡೆ capacity build ಮಾಡಿದ ಹಾಗೆ ಊರಿನ ಒಳಗಿನ crematorium ಗಳನ್ನು ಬಂದ್ ಮಾಡಬಹುದು. ಆದರೆ ಬೆಂಗಳೂರು ಬೆಳೆಯುತ್ತಿರುವ ನಗರವಾಗಿದೆ ಈ ಎಲ್ಲ ಅಂಶಗಳನ್ನು ಗಮನಿಸಿ, ಆದಷ್ಟು ದೇಹಗಳನ್ನು ಹೊರವಲಯದ crematorium ನಲ್ಲಿ ಸುಡಲು ನಾವು ಪ್ರಾಶ್ಯಸ್ತವನ್ನು ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 461**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ.ರಮೇಶಗೌಡ**:- ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು? ಯಾವ ಯಾವ ಉದ್ಯಮಗಳಲ್ಲಿ ಎಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎನ್ನುವ ನನ್ನ ಪ್ರಶ್ನೆಗೆ, ಸರ್ಕಾರ ತನ್ನ ಉತ್ತರದಲ್ಲಿ, ಕಾರ್ಮಿಕ ಇಲಾಖೆಯಲ್ಲಿ ವಿವಿಧ ಕಾರ್ಮಿಕ ಕಾಯ್ದೆಗಳಡಿ ನೋಂದಾಯಿತರಾದ ವಿವರಗಳು ಹಾಗೂ ಇಲಾಖೆಯ ಅಡಿಯಲ್ಲಿ ಬರುವ ಮಂಡಳಿಗಳಲ್ಲಿ ಫಲಾನುಭವಿಗಳು ನೋಂದಾಯಿತರಾಗಿರುವ ಕಾರ್ಮಿಕರ ವಿವರಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ೨೬.೭೩ ಲಕ್ಷ ಕಟ್ಟಡ ಕಾರ್ಮಿಕರು ಮಂಡಳಿ ಫಲಾನುಭವಿಗಳಾಗಿ ನೊಂದಣಿಯಾಗಿರುತ್ತಾರೆ. ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ಸರಿ? ಕಾರ್ಮಿಕ ಇಲಾಖೆ ದೊಡ್ಡದು ಆದರೂ ಇನ್ನು ಸಮೀಕ್ಷೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಅನುಬಂಧ ೧ರಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೊಂದಣಿ ವ್ಯವಸ್ಥೆ ಇರುವುದಿಲ್ಲ. ಆದರೆ ರೂ.೨೦:೪೦ ರ ಅನುಪಾತದಲ್ಲಿ ವಂತಿಗೆ ಪಾವತಿಸುವ ಕಾರ್ಖಾನೆಗಳು, ಪ್ಲಾಂಟೇಷನ್‌ಗಳು, ಮೋಟಾರು ಸಂಸ್ಥೆಗಳು ಹಾಗೂ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ೫೦ ಕ್ಕಿಂತ ಹೆಚ್ಚು ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಂಘಟಿತ ಕಾರ್ಮಿಕರಿಗೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಕಲ್ಯಾಣ ಯೋಜನೆಯಡಿಯಲ್ಲಿ ಸೌಲಭ್ಯಗಳನ್ನು ನೀಡಲಾಗುವುದು. ಮಂಡಳಿಗೆ ಒಟ್ಟು ೪೧ ಲಕ್ಷ ಕಾರ್ಮಿಕರಿಗೆ ವಂತಿಗೆ ಸ್ವೀಕರಿಸಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ಸರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

**ಶ್ರೀ ಅರಬೈಲು ಶಿವರಾಂ ಹೆಬ್ಬಾರ್**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳುತ್ತಿರುವ ಎರಡೂ ಅಂಶಗಳು ಸರಿಯಾಗಿವೆ. ನಮ್ಮ ಕಾರ್ಮಿಕ ಇಲಾಖೆಯಲ್ಲಿ ಆರು ವಿಭಾಗಗಳಲ್ಲಿ ಕಾರ್ಮಿಕರನ್ನು ವಿಂಗಡನೆ ಮಾಡಿದ್ದೇವೆ. ಮೊದಲನೆಯದು construction labors, ಅಸಂಘಟಿತ ಕಾರ್ಮಿಕರಲ್ಲಿ ೧೧ ವಿಭಾಗಗಳಾಗಿ ಗುರುತಿಸಿದ್ದೇವೆ. ಕಾರ್ಖಾನೆಗಳಲ್ಲಿ ಯಾರು ಇಎಸ್ಐ ಕಟ್ಟುತ್ತಾರೆ ಅವರು ಮೂರನೇ ವರ್ಗದಲ್ಲಿ ಬರುತ್ತಾರೆ. ಕೇಂದ್ರ ಸರ್ಕಾರ ನಾಲ್ಕನೆ ವಿಭಾಗದ ಕಾರ್ಮಿಕರನ್ನು ಗುರುತಿಸಿ E-shram' ಎಂದು ಗುರುತಿಸಿದ್ದಾರೆ. ದೇಶದಲ್ಲಿದ ಎಲ್ಲಾ ಕಾರ್ಮಿಕರು "E-shram Portal" ದಲ್ಲಿ ಕೋರ್ಟ್‌ಗೆ ಹೋಗಲು ಸಾಧ್ಯವಿದೆ. ಇಷ್ಟು ದಿನ ಕೆಲವೆ ಜನರು ಕೋರ್ಟ್‌ಗೆ ಹೋಗಲು

ಸಾಧ್ಯವಿತ್ತು. ಬೇರೆಯವರು ಹೋಗಲು ಸಾಧ್ಯವಿರಲಿಲ್ಲ. ಈಗ ೧೮೬ ವಿವಿಧ ವರ್ಗದ ಕಾರ್ಮಿಕರು, ಅವರು ದೇವಸ್ಥಾನದಲ್ಲಿ ಪೂಜೆ ಮಾಡುವವರು, ಅಡುಗೆ ಮಾಡುವವರು ಇರಬಹುದು, ರಸ್ತೆ ಬದಿಯಲ್ಲಿ ಅಂಗಡಿ ಇಟ್ಟುಕೊಂಡವರು ಕೋರ್ಟ್‌ಗೆ ಹೋಗಲು ಅವಕಾಶವಿರಲಿಲ್ಲ. ಇವತ್ತು ಎಲ್ಲರೂ ಕೋರ್ಟ್‌ಗೆ ಹೋಗಲು ಅವಕಾಶವಾಗುವಂತಹ ಕಾನೂನು ತರಲಾಗಿದೆ. 'E-shram' ಯೋಜನೆಯಲ್ಲಿ ಸುಮಾರು ೧೮ ಲಕ್ಷ ಕಾರ್ಮಿಕರನ್ನು upload ಮಾಡಿದ್ದೇವೆ. ಒಟ್ಟು ೪೧ ಲಕ್ಷ ಕಾರ್ಮಿಕರನ್ನು ಸೇರಿಸಿ, ದೇಶದ ಒಟ್ಟು ಒಂದು ಕೋಟಿ ಎಂಬತ್ತೊಂದು ಲಕ್ಷ ಕಾರ್ಮಿಕರನ್ನು ಕೋವಿಡ್-೧೯ ಸಂದರ್ಭದಲ್ಲಿ ಗುರುತಿಸಲು ನಮಗೆ ಅನುಕೂಲವಾಗಿದೆ. ಈಗ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರನ್ನು ನೊಂದಾಯಿಸಿಕೊಂಡಿದ್ದಾರೆ. E-shram Port ವಿಶೇಷತೆ ಎಂದರೆ, Atal Pension Scheme ನಲ್ಲಿ ಆ ಕಾರ್ಮಿಕರ ಮರಣ ಹೊಂದಿದರೆ ೨ ಲಕ್ಷ ರೂ.ಗಳನ್ನು ಕೊಡಲಾಗುತ್ತದೆ. ಅಂಗವಿಕಲಾದರೆ ೧ ಲಕ್ಷ ರೂ.ಗಳ ಪರಿಹಾರವನ್ನು ಕೊಡಲಾಗುತ್ತದೆ. ಈ ರೀತಿ ಇವತ್ತು ಕಾರ್ಮಿಕ ಇಲಾಖೆಯಲ್ಲಿ ಚಾರಿತ್ರಿಕ ಬದಲಾವಣೆಯನ್ನು ತರಲಾಗಿದೆ.

**ಶ್ರೀ ಎಚ್.ಎಂ.ರಮೇಶಗೌಡ**:- ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ಉತ್ತರದ ಅನುಬಂಧ-೧ರಲ್ಲಿ ಕಾರ್ಮಿಕ ಇಲಾಖಾ ವತಿಯಿಂದ ಕಾರ್ಮಿಕರ ಸಂಖ್ಯೆ ಕುರಿತು ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಕಾರ್ಖಾನೆಗಳ ಕಾಯ್ದೆಯಡಿ ನೋಂದಾಯಿತರಾದ ಕಾರ್ಖಾನೆಗಳಲ್ಲಿ ಒಟ್ಟು ೧೬,೧೯,೯೯೭ ಮಂದಿ ಕಾರ್ಮಿಕರಿದ್ದು, ಇವೆಲ್ಲರನ್ನು ಸಂಘಟಿತ ವಲಯದವರೆಂದು ಪರಿಗಣಿಸಲಾಗಿದೆ ಎಂದು ಹೇಳುತ್ತಾರೆ. ಇಲ್ಲಿ clarity ಇಲ್ಲ. ಎರಡನೆಯದು, ಸರ್ಕಾರವು ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಅನುಷ್ಠಾನಗೊಳಿಸಿರುವ ಯೋಜನೆಗಳು ಯಾವವು? ಈ ಯೋಜನೆಗಳ ಮಾನದಂಡಗಳೇನು? ಈ ಯೋಜನೆಯಡಿ ಕಳೆದೆರಡು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆ ಎಷ್ಟು ಎನ್ನುವ ನನ್ನ ಪ್ರಶ್ನೆಗೆ, ಶೈಕ್ಷಣಿಕ ಧನ ಸಹಾಯ, ಅಪಘಾತದ ಕಾರಣದಿಂದ ನಿಧನರಾದ ಹಾಗೂ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ೧೦,೦೦೦ ರೂಪಾಯಿಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ಇಲ್ಲಿ ವಯಸ್ಸಿನ ಮಿತಿಯನ್ನು ಹಾಕಿದ್ದಾರೆ.

(ಮುಂದು)

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

(1132)/16-12-2021/5-20/ಎಲ್ಎಂ/ಬಿಎನ್ಎಸ್

**ಶ್ರೀ ಎಚ್.ಎಂ.ರಮೇಶಗೌಡ(ಮುಂದು**):-

ಕಾರ್ಮಿಕ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣ ಕೊಳೆಯುತ್ತಾ ಬಿದ್ದಿದೆ. ಯಾವುದೇ ಯೋಜನೆಗೆ ಶುಲ್ಕವನ್ನು ಪಾವತಿ ಮಾಡಿದಾಗ ಅದರಲ್ಲಿ 1% ಇಲಾಖೆಗೆ ಬರುತ್ತದೆ. ಇಲ್ಲಿ ಕೇವಲ 10,000 ರೂಪಾಯಿಗಳನ್ನು ಕೊಡಲಾಗುತ್ತದೆ. ಈ ಯೋಜನೆಗಾಗಿ ಎಷ್ಟು ಹಣ ಇಲಾಖೆಯಲ್ಲಿ ಇದೆ ಮತ್ತು ಈಗಾಗಲೇ ಎಷ್ಟು ಹಣವನ್ನು ಇದಕ್ಕಾಗಿ ಬಳಸಲಾಗಿದೆ ಎನ್ನುವುದನ್ನು ತಮ್ಮ ಮುಖಾಂತರ ಕೇಳಬಯಸುತ್ತೇನೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್**:- ಮಾನ್ಯ ಸಭಾಪತಿಗಳೆ, ಎಷ್ಟು ಹಣ ಇದೆ, ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಕೇಳಿರುವುದಿಲ್ಲ. ಅವರು ಏನು ಮಾಹಿತಿ ಕೇಳಿದ್ದಾರೆ ಆ ಮಾಹಿತಿಯನ್ನು ಒದಗಿಸಲಾಗಿದೆ. ನಾಲ್ಕು ತಿಂಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯ ಬಾರಿ, ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ, ಮೊದಲು ಕೊಡುತ್ತಿದ್ದ ವಿದ್ಯಾರ್ಥಿ ವೇತನವನ್ನು ಹೆಚ್ಚು ಮಾಡಿದ್ದೇವೆ. 5,000 ಕೊಡುತ್ತಿರುವುದನ್ನು 10,000 ರೂಪಾಯಿ ಮಾಡಿದ್ದೇವೆ. 10,000 ಇರುವುದನ್ನು 20,000 ರೂಪಾಯಿಗಳಿಗೆ ಏರಿಸಿದ್ದೇವೆ. 20,000 ರೂಪಾಯಿಗಳನ್ನು ಕೊಡುತ್ತಿರುವಲ್ಲಿ 40,000 ರೂಪಾಯಿಗಳನ್ನು ಕೊಡಲಾಗುತ್ತಿದೆ. ಈ ರೀತಿ ದೇಶದಲ್ಲಿ ಯಾವ ಸರ್ಕಾರಗಳು ಮಾಡಿರುವುದಿಲ್ಲ. ವಿಶೇಷವಾದ NRIT ಶಾಲೆಗಳಲ್ಲಿ ಮಕ್ಕಳು ಆಯ್ಕೆಯಾಗುತ್ತಾರೆ. ಆ ಕಾರ್ಮಿಕ ಮಕ್ಕಳ ಎಲ್ಲಾ ವಿದ್ಯಾಭ್ಯಾಸದ ಖರ್ಚನ್ನು ಇಲಾಖೆಯೇ ಭರಿಸುತ್ತದೆ. ಈ ಅಂಕಿ-ಅಂಶಗಳನ್ನು ತಾಲ್ಲೂಕು ಮತ್ತು ಜಿಲ್ಲಾವಾರು ವಿವರಗಳನ್ನು ಕೊಡಲಾಗಿದೆ. ೯೫೦ ಜನ construction labourers ಮಕ್ಕಳಿಗೆ ಐಎಎಸ್ ಮತ್ತು ಕೆಎಎಸ್ ಬರೆಯಲು ಮೊದಲನೆಯ ಬಾರಿಗೆ ದೆಹಲಿಯ Institution ನಲ್ಲಿ ಉಚಿತವಾಗಿ ತರಬೇತಿ ಕೊಡಬೇಕೆಂದು ಆಯ್ಕೆ ಮಾಡಲು ಪರೀಕ್ಷೆಗಳನ್ನು ಇಡಲಾಗಿತ್ತು. ಅದರಲ್ಲಿ 900 ಮಕ್ಕಳು ಪಾಸಾಗಿದ್ದಾರೆ. ಇದರಲ್ಲಿ 500 ಮಕ್ಕಳನ್ನು 7 ಪ್ರಸಿದ್ಧ ತರಬೇತಿ ಕೇಂದ್ರಗಳಲ್ಲಿ ಉಚಿತ ತರಬೇತಿ ಮತ್ತು ವಸತಿ ವ್ಯವಸ್ಥೆ ಮಾಡುವಂತಹ ಹೊಸ ಕಾರ್ಯಕ್ರಮವನ್ನು ಮಾಡಿದ್ದೇವೆ. ಇದರಿಂದ ಕರ್ನಾಟಕ ರಾಜ್ಯದಲ್ಲಿಯ construction labourers ಗೆ ಬೇಕಾದಂತಹ ಎಲ್ಲಾ ಒಳ್ಳೆಯ ವಾತಾವರಣವನ್ನು ನಿರ್ಮಿಸಲಾಗಿದೆ. ದುಡಿಯಲು ಹೋಗುವ ಕಾರ್ಮಿಕರಿಗೆ ಕೇವಲ ಬಿಎಂಟಿಸಿ ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಲಾಗಿತ್ತು. ಆದರೆ ಈಗ ಬಿಎಂಟಿಸಿ, NWKRTC, NEKRTC, KSRTC ಮತ್ತು BMTC ಎಲ್ಲಾ ಬಸ್‌ಗಳಲ್ಲಿ ದುಡಿಯಲು ಹೋಗಲು ಕಾರ್ಮಿಕ ಇಲಾಖೆಯಿಂದ ಉಚಿತ

construction board ಹಣದ ಪಾಸ್ ಕೊಡುತ್ತಿದ್ದೇವೆ. ಕರ್ನಾಟಕ ಕಾರ್ಮಿಕ ಇಲಾಖೆ ಏನೇನು ಕೆಲಸಗಳನ್ನು ಮಾಡಲು ಸಾಧ್ಯ ಆ ಎಲ್ಲಾ ಕೆಲಸವನ್ನು ಮಾಡಿದೆ.

## ತಡೆ ಹಿಡಿಯಲಾದ ಪ್ರಶ್ನೆಗಳು

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೆ ನಿಮ್ಮ ತಡೆಹಿಡಿಯಲಾದ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ವಾರ ಸಮಯವನ್ನು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಲಿಖಿತ ಮೂಲಕ ಉತ್ತರಿಸುವ ಒಟ್ಟು 128 ಪ್ರಶ್ನೆಗಳ ಪೈಕಿ 89 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

(**ಉತ್ತರಗಳನ್ನು ಲಗತ್ತಿಸಲಾಗಿದೆ**)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ: ರೈತರಿಂದ ಭತ್ತ ಖರೀದಿಸಲು ಮಿತಿಯನ್ನು ನಿಗದಿಪಡಿಸಿರುವ ಬಗ್ಗೆ.

\- - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ೨೦೨೧-೨೨ನೇ ಸಾಲಿನ ಮುಂಗಾರು ಋತುವಿನಲ್ಲಿ ರಾಜ್ಯದ ರೈತರುಗಳಿಂದ ಭತ್ತವನ್ನು ಖರೀದಿಸಲು ನೋಂದಣಿ ಮಾಡುವ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಆರಂಭಿಸಬೇಕಾಗಿದೆ. ಈ ಬಗ್ಗೆ ಪ್ರತಿ ರೈತರಿಂದ ಕನಿಷ್ಠ ೨೫ ರಿಂದ ಗರಿಷ್ಠ ೪೦ ಕ್ವಿಂಟಾಲ್ ಭತ್ತವನ್ನು ಮಾತ್ರ ಖರೀದಿ ಮಾಡಲಾಗುತ್ತಿದೆ. ಅಲ್ಲದೆ ಆದಾಯ ತೆರಿಗೆ ಪಾವತಿಸುವ ರೈತರಿಂದ ಹಾಗೂ ೫ ಎಕರೆ ಮೇಲ್ಪಟ್ಟು ಜಮೀನು ಹೊಂದಿರುವ ರೈತರುಗಳಿಂದ ಭತ್ತವನ್ನು ಸರ್ಕಾರವು ಖರೀದಿಯನ್ನು ಮಾಡುತ್ತಿಲ್ಲ. ಆದ್ದರಿಂದ ಭತ್ತವನ್ನು ಬೆಳೆದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳು ರೈತರಿಂದ ಕಬ್ಬನ್ನು ಖರೀದಿಸಿ ಸರಿಯಾಗಿ ಹಣವನ್ನು ಪಾವತಿಸುತ್ತಿಲ್ಲ ಮತ್ತು ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆ ಪ್ರಾರಂಭ ಆಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ರೈತರು ಕಬ್ಬು ಬೆಳೆಯ ಬದಲಾಗಿ ಭತ್ತವನ್ನು ಬೆಳೆದಿರುತ್ತಾರೆ. ಆದರೆ ಸರ್ಕಾರವು ಭತ್ತ ಖರೀದಿಸಲು ಮಿತಿಯನ್ನು ಹಾಕಿರುವುದರಿಂದ ರೈತರು ತಮ್ಮ ಭತ್ತವನ್ನು ಬೆಳೆದಿರುತ್ತಾರೆ. ಆದರೆ ಸರ್ಕಾರವು ಭತ್ತ ಖರೀದಿಸಲು ಮಿತಿಯನ್ನು ಹಾಕಿರುವುದರಿಂದ ರೈತರು ತಮ್ಮ ಭತ್ತವನ್ನು ಮಧ್ಯವರ್ತಿಗಳಿಗೆ ಮಾರಾಟ ಮಾಡಿ ನಷ್ಟ ಹೋಗುತ್ತಿದ್ದಾರೆ.

ಆದ್ದರಿಂದ ಸರ್ಕಾರವು ಈ ಬಗ್ಗೆ ಗಮನ ಹರಿಸಿ ಭತ್ತ ಖರೀದಿಸಲು ಯಾವುದೇ ಮಿತಿಯನ್ನು ನಿಗದಿಪಡಿಸದೆ ಸರ್ಕಾರಕ್ಕೆ ಮಾರಾಟ ಮಾಡಲು ಇಚ್ಛಿಸುವ ಎಲ್ಲಾ ರೈತರಿಂದ ಭತ್ತವನ್ನು ಖರೀದಿ ಮಾಡಬೇಕು ಹಾಗೂ ಹೋಬಳಿ ಮಟ್ಟದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಸರಿಯಾದ ಸಮಯಕ್ಕೆ ರೈತರಿಗೆ ಬೆಲೆಯನ್ನು ಪಾವತಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕೃಷಿ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಆ) ವಿಷಯ: ಎಲ್ಲಾ ಕ್ರೀಡೆಗಳ ಜೊತೆಗೆ ಕಬ್ಬಡ್ಡಿ ಆಟಗಾರರನ್ನು "ಎ" ಮತ್ತು "ಬಿ" ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ.**

- - - - - - -

**ಶ್ರೀ ಯ.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಭಾರತೀಯ ಕ್ರೀಡೆಗಳಲ್ಲಿ ದೇಸಿಯಾ ಕ್ರೀಡೆಯಾದ ಕಬ್ಬಡ್ಡಿ ಈ ನೆಲದ ಕ್ರೀಡಯಾಗಿದ್ದು, ದಕ್ಷಿಣ ಕನ್ನಡವನ್ನು ಈ ಕ್ರೀಡೆಯ ತವರೂರು ಎಂದು ಗುರುತಿಸಲಾಗಿದೆ. ಆದರೆ ಬೇರೆ ಕ್ರೀಡೆಗಳಂತೆ ಗುರುತಿಸಿ ಪ್ರೋತ್ಸಾಹಿಸುವ ರೀತಿ ಈ ಕ್ರೀಡೆಯ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸದಿರುವುದು ವಿಪರ್ಯಾಸವೇ ಸರಿ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಭಾಸ್ಕರ್ ರೈ ಭಾರತೀಯ ಕಬ್ಬಡ್ಡಿ ತಂಡ ಉಪನಾಯಕರಾಗಿ ಏಷ್ಯನ್ ಗೇಮ್ಸ್‌ನಲ್ಲಿ ಮಿಂಚಿದವರು. ಅವರಂತೆ ಅನೇಕ ಜನ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸಾಧನೆ ಮೆರೆದವರು. ಈ ರೀತಿ ಸಾಧನೆಗೈದವರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳು ಸೃಜನೆಯಾಗುತ್ತಿಲ್ಲ.

ರಾಜ್ಯ ಸರ್ಕಾರ 2017-18ನೇ ಸಾಲಿನಲ್ಲಿ ಮಂಡಿಸಿದ್ದ ಆಯವ್ಯಯದಲ್ಲಿ 'ಒಲಂಪಿಕ್ಸ್ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗ್ರೂಪ್-"ಎ" ದರ್ಜೆಯ ಹುದ್ದೆಯನ್ನು ಮತ್ತು ಏಷ್ಯನ್ ಮತ್ತು ಕಾಮನ್ ವೆಲ್ತ್ ಕ್ರೀಡಾ ಕೂಟಗಳ ಪದಕ ವಿಜೇತರಿಗೆ "ಬಿ' ದರ್ಜೆಯ ಹುದ್ದೆಯನ್ನು ನೀಡಲಾಗುವುದು ಎಂದು ಘೋಷಿಸಿರುತ್ತದೆ. ಆದರೆ, ಅದರಂತೆ ಕಬ್ಬಡ್ಡಿ ಹೊರತುಪಡಿಸಿ, ಇತರೆ ಕ್ರೀಡೆಗಳ ಕ್ರೀಡಾಪಟುಗಳಿಗೆ ಮಾತ್ರ ಈ ಹುದ್ದೆಗಳಿಗೆ ಪರಿಗಣಿಸಿರುತ್ತದೆ. ಇದು ನಿಜಕ್ಕೂ ದೇಸಿಯ ಕ್ರೀಡೆಗೆ ಸಂದ ಅವಮಾನವಾಗಿರುತ್ತದೆ. ಉದಾಹರಣೆಗೆ ಬೆಂಗಳೂರಿನ ಉಷಾರಾಣಿ ಎಂಬಾಕೆ ಇಂಡೋನೇಷ್ಯಾದಲ್ಲಿ ಜರುಗಿದ್ದ 18ನೇ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ವಿಜೇತೆಯಾಗಿದ್ದು, ಈಕೆಗೆ ಈವರೆಗೂ ಉದ್ಯೋಗ ನೀಡಿ ಪ್ರೋತ್ಸಾಹಿಸುವ ಕೆಲಸ ರಾಜ್ಯ ಸರ್ಕಾರದ ವತಿಯಿಂದ ಆಗಿರುವುದಿಲ್ಲ. ದಯಮಾಡಿ, ರಾಜ್ಯ ಸರ್ಕಾರ 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ರೀತಿಯಲ್ಲಿ ಎಲ್ಲಾ ಕ್ರೀಡಾಪಟುಗಳ ಜೊತೆಗೆ ಕಬ್ಬಡ್ಡಿ ಆಟಗಾರರನ್ನು ಸಹ ಎ ಮತ್ತು ಬಿ ದರ್ಜೆಯ ಹುದ್ದೆಗಳಿಗೆ ಪರಿಗಣಿಸಿ ಪ್ರೋತ್ಸಾಹ ನೀಡಬೇಕೆನ್ನುವ ವಿಷಯದ ಬಗ್ಗೆ ಮಾನ್ಯ ಕ್ರೀಡಾ ಮತ್ತು ಯುವಜನಸೇವಾ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ರೇಷ್ಮೆ, ಯುವಜನ ಸಬಲೀಕರ ಕ್ರೀಡಾ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಇ) ವಿಷಯ: ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅನುದಾನದ ಕೊರತೆಯಿಂದ ಬಾಕಿ ಇರುವ ವಿದ್ಯುತ್ ಬಿಲ್‌ನ್ನು ಶೀಘ್ರವಾಗಿ ಪಾವತಿಸುವ ಬಗ್ಗೆ.**

\- - - - - - -

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಏಪ್ರಿಲ್-2021ರ ಮಾಹೆಯಿಂದ ಇದುವರೆವಿಗೂ ಅನುದಾನದ ಕೊರತೆಯಿಂದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸದ ಹಿನ್ನಲೆಯಲ್ಲಿ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸಲಾಗಿರುತ್ತದೆ. ಕಛೇರಿ ಕೆಲಸ ಕಾರ್ಯಗಳು ಸಂಪೂರ್ಣವಾಗಿ ನಿಂತು ಹೋಗಿವೆ. ಪ್ರಸ್ತುತ ಕೆ.ಇ.ಎ. ಯಿಂದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ವಿದ್ಯುಚ್ಛಕ್ತಿ ಕೊರತೆಯಿಂದ ದಾಖಲಾತಿ ಆಗುತ್ತಿಲ್ಲ. ಇಲಾಖಾಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ವಿದ್ಯಾರ್ಥಿಗಳು ಖಾಸಗಿ ಇಂಜಿನಿಯರ್ ಕಾಲೇಜುಗಳತ್ತ ಮುಖ ಮಾಡುವಂತಾಗಿದೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ರಾಷ್ಟ್ರೀಯ ಮಂಡಳಿಯ ನ್ಯಾಕ್/ಎನ್. ಬಿ.ಎ. ಮಾನ್ಯತೆಯನ್ನು ಸಕಾಲದಲ್ಲಿ ದೊರಕಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ವರ್ಷದಿಂದ ವರ್ಷಕ್ಕೆ ದಾಖಲಾತಿ ಪ್ರಮಾಣ ಕುಂಠಿತವಾಗುತ್ತಿದೆ. ಯಾವುದೇ ಸಂಸ್ಥೆಗಳು ಕ್ಯಾಂಪಸ್ ಸೆಲೆಕ್ಷನ್‌ಗೆ ಬರುತ್ತಿಲ್ಲ. ವಿದ್ಯುತ್ ಇಲ್ಲದ ಕಾರಣ, ಶೌಚಾಲಯಕ್ಕೆ ನೀರಿಲ್ಲದಂತಾಗಿದೆ. ರಾಜ್ಯದ 84 ಪಾಲಿಟೆಕ್ನಿಕ್ ಹಾಗೂ 14 ಇಂಜಿನಿಯರಿಂಗ್ ಕಾಲೇಜುಗಳು ಇದೇ ರೀತಿಯ ವಿದ್ಯುತ್ ಸಮಸ್ಯೆಯನ್ನು ಎದುರಿಸುತ್ತಿವೆ. ಕಂಪ್ಯೂಟರ್‌ನಲ್ಲಿ ಎಲ್.ಎಂ.ಎಸ್. ನೋಡಲಿಕ್ಕೆ ವಿದ್ಯುತ್ ಇಲ್ಲದಂತಾಗಿದೆ. ಪ್ರಯೋಗಾಲಯ ಬೋಧನೆಗಳಿಗೆ ತುಂಬಾ ತೊಂದರೆಯುಂಟಾಗಿದೆ.

ಕಳೆದ 20 ದಿವಸಗಳಿಂದ ವಿದ್ಯುತ್ ಕಡಿತಗೊಂಡಿರುವುದರಿಂದ ಆಡಳಿತ ಹಾಗೂ ಶೈಕ್ಷಣಿಕ ವ್ಯವಸ್ಥೆ ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಸದರಿ ವಿಷಯವನ್ನು ಆದ್ಯತೆ ಮೇರೆಗೆ ಅತಿ ಜರೂರು ಎಂದು ಪರಿಗಣಿಸಿ, ಕೂಡಲೇ ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಪಾವತಿಸಲು, ಅಗತ್ಯ ಅನುದಾನ ಬಿಡುಗಡೆಗೊಳಿಸುವಂತೆ ಮಾನ್ಯ ಉನ್ನತ ಶಿಕ್ಷಣ, ಐ.ಟಿ. ಬಿ.ಟಿ. ಹಾಗೂ ಕೌಶಲಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ: ಕನಿಷ್ಠ 10 ವರ್ಷಕ್ಕಿಂತ ಹೆಚ್ಚು ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರನ್ನು ಸೇವೆಯಲ್ಲಿ ವಿಲೀಗೊಳಿಸಿ ಖಾಯಂ ಮಾಡುವ ಬಗ್ಗೆ.**

\- - - - - - -

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು ೧೪,೫೦೦ಕ್ಕಿಂತ ಹೆಚ್ಚು ಅಥಿತಿ ಉಪನ್ಯಾಸಕರು ೫, ೧೦, ೧೫ ವರ್ಷಗಳಿಂದ ಗೌರವ ಭತ್ಯೆಯನ್ನು ಪಡೆದು ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದು, ಇವರಲ್ಲಿ ಸಾವಿರಾರು ಅತಿಥಿ ಉಪನ್ಯಾಸಕರ ವಯೋಮಿತಿ ಮೀರಿದೆ, ಹಾಗೂ ಮೀರುತ್ತಿದೆ, ಇವರಿಗೆ ಸೇವಾ ಭದ್ರತೆ ಇಲ್ಲದೆ ಅಭದ್ರತೆಯ ತೂಗುಗತ್ತಿ ತೂಗಾಡುತ್ತಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಹಂಗಾಮಿ ನೌಕರರನ್ನು ಖಾಯಂಗೊಳಿಸಲಾಗಿದೆ. ಮುರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮಾ ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿದ ಪ್ರಾಂಶುಪಾಲರು ಮತ್ತು ಶಿಕ್ಷಕರನ್ನು ಖಾಯಂಗೊಳಿಸಲಾಗಿದೆ. ಅದರಂತೆ ಅಥಿತಿ ಉಪನ್ಯಾಸಕರ ಸೇವಾ ಜೇಷ್ಠತೆಯನ್ನು ಆಧರಿಸಿ, ಕನಿಷ್ಠ 10 ವರ್ಷಕ್ಕಿಂತ ಹೆಚ್ಚಾಗಿ ಸೇವೆ ಸಲ್ಲಿಸಿದ್ದವರ ಸೇವೆಯನ್ನು ಖಾಯಂಗೊಳಿಸಿದಂತೆ, ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿರುವ ಅಥಿತಿ ಉಪನ್ಯಾಸಕರ ಸೇವೆಗೂ ಸೇವಾ ಭದ್ರತೆಯನ್ನು ಒದಗಿಸಬೇಕೆಂದು ಈ ಸಾರ್ವಜನಿಕ ಮಹತ್ವವುಳ್ಳ ವಿಚಾರದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು**):- ಮಾನ್ಯ ಸಭಾಪತಿಗಳೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಉ) ವಿಷಯ: ಕೋಲಾರ ನಗರದ ದರ್ಗಾ ಮೊಹಲ್ಲಾದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲ ಸೌಕರ್ಯಗಳ ಕೊರತೆ ಬಗ್ಗೆ.**

\- - - - - -

**ಶ್ರೀ ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಕೋಲಾರ ನಗರದ ದರ್ಗಾ ಮೊಹಲ್ಲಾದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವು ಕಳೆದ ಒಂದು ವರ್ಷದ ಹಿಂದೆ ಆರಂಭವಾಗಿರುವುದು ಸರಿಯಷ್ಟೆ. ಆದರೆ ಅದು ಪ್ರಾಥಮಿಕ ಆರೋಗ್ಯ ಕೇಂದ್ರದ ಹಾಗೆ ಕಾರ್ಯನಿರ್ವಹಿಸುತ್ತಿದೆ. ಸದರಿ ಆರೋಗ್ಯ ಕೇಂದ್ರವು ನಗರದ ಹೃದಯ ಭಾಗದಲ್ಲಿದ್ದು, ಈ ಭಾಗದಲ್ಲಿ ಅತೀ ಹೆಚ್ಚು ಬಡ ಕೂಲಿ ಕಾರ್ಮಿಕರು, ಬೀಡಿ ಕಾರ್ಮಿಕರು, ರೇಷ್ಮೆ ನೂಲು ತೆಗೆಯುವವರಿದ್ದು, ಇಲ್ಲಿನ ಸಾರ್ವಜನಿಕರು, ಸರ್ಕಾರಿ ಆರೋಗ್ಯ ಕೇಂದ್ರದ ಮೇಲೆ ಅವಲಂಬಿತರಾಗಿರುತ್ತಾರೆ. ಇಲ್ಲಿ ಕೇವಲ ಒಬ್ಬೆ ಒಬ್ಬ ವೈದ್ಯಾಧಿಕಾರಿ ಇದ್ದು, ಇಲ್ಲಿ ಸ್ತ್ರೀ ರೋಗ ತಜ್ಞರು ಹಾಗೂ ಮಕ್ಕಳ ತಜ್ಞರನ್ನು ಇದುವರೆಗೂ ನೇಮಿಸಿರುವುದಿಲ್ಲ. ಇಲ್ಲಿ ಸರಿಸುಮಾರು ತಿಂಗಳಿಗೆ ೫೦ ರಿಂದ ೬೦ ರವರೆಗೂ ಹೆರಿಗೆಗಳಾಗುತ್ತಿದ್ದು, ಇಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಇರುವುದರಿಂದ, ಕಷ್ಟವಾಗುತ್ತಿದ್ದು, ಹಾಗೂ ಸಿಜೇರಿಯನ್ ಶಸ್ತ್ರ ಚಿಕಿತ್ಸೆಗಳಿಗೆ ಒಳಪಡುವ ಗರ್ಭಿಣಿಯರಿಗೆ ಜಿಲ್ಲಾ ಆಸ್ಪತ್ರೆ ಅಥವಾ ಜಾಲಪ್ಪ ಆಸ್ಪತ್ರೆಗೆ ಕಳುಹಿಸಿ ಕೊಡಲಾಗುತ್ತಿದೆ. ಇದರಿಂದ ಬಡವರಿಗೆ ಮತ್ತು ಇಲ್ಲಿನ ಅಲ್ಪಸಂಖ್ಯಾತ ಸಮುದಾಯಕ್ಕೆ ತುಂಬಾ ಕಷ್ಟವಾಗಿರುತ್ತದೆ.

ಇದೇ ರೀತಿ ಕೋಲಾರ ನಗರದ ವಿನಾಯಕ ನಗರ, ನೂರ್ ನಗರ, ರಹ್ಮತ್ ನಗರ, ಸಾರಿಗೆ ನಗರ, ನಿಸಾರ್ ನಗರ, ಮಿಲ್ಲತ್ ನಗರ, ಗೌರಿಪೇಟೆ, ಕೋಂಡಹಳ್ಳಿ ಸೇರಿದಂತೆ ಸುಮಾರು ಎಂಟು ವಾರ್ಡ್‌ಗಳಿದ್ದು, ಇಲ್ಲಿ ಸುಮಾರು 35 ಸಾವಿರಕ್ಕೂ ಹೆಚ್ಚಾಗಿ ಜನಸಂಖ್ಯೆವುಳ್ಳ, ಇಲ್ಲಿ ಕೇವಲ ಒಂದು "ನಗರ ಆರೋಗ್ಯ ಕೇಂದ್ರ" ರಹಮತ್ ನಗರದಲ್ಲಿದ್ದು, ಅದು ಕೂಡ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಜನಸಾಮಾನ್ಯರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಇಲ್ಲಿ ಕೂಡಲೇ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿ, ಎಲ್ಲಾ ಮೂಲಭೂತ ಸೌಲಭ್ಯಗಳನ್ನು ನೀಡಿ ತಕ್ಷಣದಿಂದ ಜಾರಿಗೆ ಬರುವಂತೆ ಕಾರ್ಯಾರಂಭ ಮಾಡಬೇಕೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

(ಮುಂದು)

---

(1133)16-12-2021(05-30)bsd-bns

**ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಶೂನ್ಯವೇಳೆಯ ವಿಷಯಕ್ಕೆ ದೀರ್ಘವಾದ ಉತ್ತರ ಕೊಟ್ಟಿದ್ದೇನೆ. ಆದರೆ ಕೋಲಾರ ನಗರದ ದರ್ಗಾ, ಮೊಹಲ್ಲಾದ ಸಮುದಾಯ ಆರೋಗ್ಯ ಕೇಂದ್ರ ಒಂದು ವರ್ಷದ ಹಿಂದೆ ಆರಂಭವಾಗಿರುವ ಬಗ್ಗೆ ಹೇಳಿದ್ದಾರೆ. ಅದಕ್ಕೆ ಬೇಕಾದ ಅಗತ್ಯವಾದ ಪೀಠೋಪಕರಣ ಅಥವಾ ಮಾನವ ಸಂಪನ್ಮೂಲ ಒದಗಿಸುವ ಪ್ರಸ್ತಾವನೆ ಇದ್ದು, ಇದನ್ನು ಆದಷ್ಟು ಶೀಘ್ರವಾಗಿ ಮಾಡಿಸಿಕೊಡುತ್ತೇನೆ. ಅವರು ಪ್ರಾಥಮಿಕ ಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಕೇಳಿದ್ದು, ಅದಕ್ಕೆ ಜನಸಂಖ್ಯೆ ಸಾಕಾಗುವುದಿಲ್ಲ ಮತ್ತು ಜಿಲ್ಲಾಸ್ಪತ್ರೆ ಕೇವಲ ಒಂದೂವರೆ ಕಿ.ಮೀ ಅಂತರದಲ್ಲಿದೆ. ಆದರೂ 15ನೇ ಹಣಕಾಸು ಆಯೋಗದಡಿಯಲ್ಲಿ ಎರಡು polyclinic ಗಳನ್ನು ಮೂರು ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಅನುಮೋದನೆ ಮಾಡಿಸಿದ್ದು, ಈ ಕೆಲಸ ಮಾಡಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಊ) ವಿಷಯ:- ಮರಾಠ ಸಮಾಜದ ಜನರನ್ನು ಪ್ರವರ್ಗ- 2ಎ ಗೆ ಸೇರಿಸುವ ಬಗ್ಗೆ.**

-------

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಮರಾಠಾ ಸಮಾಜಕ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ ೨೪-೦೯-೨೦೧೨ ಮತ್ತು ೨೫-೦೯-೨೦೧೨ ರಂದು ಮರಾಠ ಸಮಾಜದ ಸ್ಥಿತಿಗತಿಗಳನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಮಾನ್ಯ ಶಂಕರಪ್ಪನವರು ಖುದ್ದಾಗಿ ಪರಿಶೀಲಿಸಿ ದಿನಾಂಕ ೩೦-೧೨-೨೦೧೨ ಕ್ಕೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ನೀಡಿ ಪ್ರಸ್ತುತ ೩ಬಿ ಯಿಂದ ೨ಎ ಗೆ ಶಿಫಾರಸ್ಸು ಮಾಡಿರುತ್ತಾರೆ. ಆದರೆ ರಾಜ್ಯ ಸರ್ಕಾರವು ಮರಾಠ ಸಮುದಾಯದವರನ್ನು ೨ಎ ಗೆ ಸೇರಿಸುವಲ್ಲಿ ವಿಳಂಬ ಮಾಡಿದ್ದಾರೆ. ಮರಾಠ ಸಮುದಾಯಕ್ಕೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕೆಂಬ ಬೇಡಿಕೆಗೆ ಪಕ್ಕದ ಮಹಾರಾಷ್ಟ್ರದ ಸರಕಾರದವರು ಸಮ್ಮತಿಯ ಮುದ್ರೆ ಒತ್ತಿರುತ್ತಾರೆ. ಇದರಿಂದಾಗಿ ಮೀಸಲಾತಿ ಆಗ್ರಹಿಸಿ ಅಲ್ಲಿಯ ಮರಾಠ ಸಮಾಜವು ನಡೆಸುತ್ತಿದ್ದ ಪ್ರತಿಭಟನೆಗೆ ಫಲ ದೊರೆತಂತಾಗಿದೆ. ಆದರೆ ನಮ್ಮಲ್ಲಿ ಮಾತ್ರ ಮರಾಠ ಸಮಾಜದ ಅಭಿವೃದ್ಧಿಗೋಸ್ಕರ ಹಾಗೂ ವಿವಿಧ ಬೇಡಿಕೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ರಾಜ್ಯ ಸರಕಾರಕ್ಕೆ ಎಷ್ಟು ಸಾರಿ ಮನವಿಯನ್ನು ನೀಡಿದ್ದರೂ ಇಲ್ಲಿಯವರೆಗೆ ಪ್ರಯೋಜನವಾಗಿಲ್ಲ. ಸರ್ಕಾರಕ್ಕೆ ಮರಾಠರ ಧ್ವನಿ ಕೇಳಿಸಿಲ್ಲ. ಈ ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ಸ್ವೀಕರಿಸಿದ ೨೪ ಗಂಟೆಯ ಒಳಗೆ ಮರಾಠ ಸಮುದಾಯದವರಿಗೆ ಮೀಸಲಾತಿ ಅವಕಾಶ ಕಲ್ಪಿಸಿಕೊಡುತ್ತೇನೆ ಎಂದು ತಿಳಿಸಿದ್ದು, ಆದರೆ ಸೌಲಭ್ಯ ನೀಡದೇ ರಾಜ್ಯದಲ್ಲಿ ಬಹು ಸಂಖ್ಯಾತ ಮರಾಠ ಜನರಿಗೆ ಅನ್ಯಾಯವೆಸಗಿದ್ದಾರೆ. ಇದು ಮರಾಠ ಸಮುದಾಯದವರಿಗೆ ತುಂಬಾ ನೋವುಂಟು ಮಾಡಿರುತ್ತದೆ. ಈ ಬಗ್ಗೆ ಸದನದಲ್ಲಿ ನಾನು ಕಳೆದ ೧೦ ವರ್ಷಗಳಿಂದ ಪ್ರತಿ ಬಾರಿಯೂ ಸರ್ಕಾರಕ್ಕೆ ವಿನಂತಿಸುತ್ತಾ ಬಂದಿರುತ್ತೇನೆ. ಆದರೆ ಸರ್ಕಾರ ಮಾತ್ರ ಯಾವುದೇ ರೀತಿಯಲ್ಲಿ ಕ್ರಮ ಕೈಗೊಂಡಿದ್ದು ಕಂಡು ಬಂದಿರುವುದಿಲ್ಲ.

ಆದ್ದರಿಂದ, ಈಗಲಾದರೂ ಈ ಜನಾಂಗದವರನ್ನು ಆದಷ್ಟು ಹೆಚ್ಚಿನ ಪ್ರಾಶಸ್ತ್ಯ ಮೇರೆಗೆ ೩ಬಿ ಯಿಂದ ೨ಎ ಗೆ ಸೇರಿಸಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡಲು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಮೂಲಕ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಂಡಿಸಿದ ಶೂನ್ಯವೇಳೆಯ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಸದನದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಬೇಗ ಮತ್ತು ಸರಿಯಾದ ಉತ್ತರವನ್ನು ಕೊಡಿಸಿ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** (**ಗೊಂದಲ**) ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:-** ಚರ್ಚೆ ಇಲ್ಲ, ಉತ್ತರ ತೆಗೆದುಕೊಂಡ ನಂತರ ಏನಾದರೂ ಇದ್ದರೆ ಬರೆದು ಕಳುಹಿಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಖ) ವಿಷಯಃ ಚಿಕ್ಕಪೇಟೆಯ ಪಾರ್ವತಿಪುರದಲ್ಲಿ ಒಳಚರಂಡಿ ಕೊಳವೆ ಬದಲಿಸುವ ಕಾಮಗಾರಿಯನ್ನು BWSSB ಬದಲಿಗೆ BBMP ಕೈಗೊಂಡಿರುವ ಬಗ್ಗೆ.**

- - - - -

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಜಲಮಂಡಳಿ ಬದಲು ಬಿಬಿಎಂಪಿ ಯಿಂದ ಒಳಚರಂಡಿ ಕಾಮಗಾರಿ ಕೈಗೆತ್ತಿಕೊಂಡಿರುವ ವಿಚಾರವು ಸಾರ್ವಜನಿಕವಾಗಿ ಮಹತ್ವದ ವಿಷಯವಾಗಿರುವುದರಿಂದ ಸದನದಲ್ಲಿ ಶೂನ್ಯ ವೇಳೆಯ ಅವಧಿಯಲ್ಲಿ ಪ್ರಸ್ತಾಪಿಸುತ್ತೇನೆ.

ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತನ್ನದೇ ಆದ ಆಡಳಿತದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ಸ್ವಾಯತ್ತ ಸಂಸ್ಥೆಯಾಗಿ ರೂಪಿಸಲಾಗಿದೆ.

ಬೆಂಗಳೂರು ನಗರದ ವ್ಯಾಪ್ತಿಗೆ ಬರುವ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ ೧೪೩ ರಲ್ಲಿ ಬರುವ ಪಾರ್ವತಿಪುರಂ ಹಳೆಯ ಪ್ರದೇಶವಾಗಿದ್ದು, ಈ ಪ್ರದೇಶದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ಮಿಸಿ ನಿರ್ವಹಿಸುತ್ತಿದ್ದ ಒಳಚರಂಡಿ ಕೊಳವೆಗಳನ್ನು ಬದಲಿಸುವ ಕಾಮಗಾರಿಯನ್ನು ಬಿಬಿಎಂಪಿ ಕಳೆದ ೧ ವರ್ಷದಿಂದ ಜಲಮಂಡಳಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಬಿಬಿಎಂಪಿ ನಿರ್ವಹಿಸಲು ಸರ್ಕಾರದ ಒಪ್ಪಿಗೆ ಪಡೆಯಲಾಗಿದೆಯೇ? ೧೫ನೇ ಹಣಕಾಸು ಆಯೋಗದ ಅಡಿಯಲ್ಲಿ ಸದರಿ ಕಾಮಗಾರಿಗೆ ಅನುಮೋದನೆ ದೊರಕಿದೆಯೇ? ಬಿಬಿಎಂಪಿ ಕೈಗೊಂಡಿರುವ ಕೊಳವೆ ಬದಲಿಸುವ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ದೊರಕಿದೆಯೇ: ದೊರಕಿದ್ದಲ್ಲಿ ಒಳಚರಂಡಿ ಕಾಮಗಾರಿ ಬಿಬಿಎಂಪಿ ವತಿಯಿಂದ ನಿರ್ವಹಿಸಲು ಕಾನೂನು ಹಾಗೂ ನಿಯಮಗಳಲ್ಲಿ ಅವಕಾಶ ಇದೆಯೇ, ಸದರಿ ಕಾಮಗಾರಿಗಳು ಪೂರ್ಣಗೊಂಡ ನಂತರ ತಾಂತ್ರಿಕ ಲೋಪಗಳು ಇದ್ದಲ್ಲಿ ಅದನ್ನು ಯಾರು ಸರಿಪಡಿಸುತ್ತಾರೆ? ಬಿಬಿಎಂಪಿ ಕೈಗೊಂಡಿರುವ ಕೊಳವೆ ಬದಲಿಸುವ ಕಾಮಗಾರಿಯನ್ನು ಜಲಮಂಡಳಿ ಮೇಲ್ವಿಚಾರಣೆಗೆ ನೀಡಲಾಗಿದೆಯೇ? ನೀಡಿದ್ದಲ್ಲಿ ಬಿಬಿಎಂಪಿ ಎಷ್ಟು ಸೂಪರವೈಸ್ ಚಾರ್ಜಸ್ ನೀಡುತ್ತಿದೆ.

ಸದರಿ ಒಳಚರಂಡಿ ಕಾಮಗಾರಿಗಳು ಪರಿಣಿತಿ ಹೊಂದಿರುವ ಇಂಜಿನಿಯರ್‌ಗಳ ಮುಖಾಂತರ ಬಿಬಿಎಂಪಿ ಯಿಂದ ಅನುಷ್ಠಾನಗೊಳಿಸಲಾಗುತ್ತಿದೆಯೇ? ಸದರಿ ಕಾಮಗಾರಿ ಕೇವಲ ಗುತ್ತಿಗೆದಾರರ ಪ್ರಭಾವದಿಂದ ಬಿಬಿಎಂಪಿ ಮುಖಾಂತರ ನಿರ್ವಹಿಸುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ರೀತಿ ಕಾಮಗಾರಿಗಳನ್ನು ಪಾಲಿಕೆಗೆ ವಹಿಸಲು ಕಾರಣಗಳೇನು ಮತ್ತು ಅವಶ್ಯವೇನು ಎಂದು ಈ ಸದನಕ್ಕೆ ಸ್ಪಷ್ಟ ಉತ್ತರ ನೀಡಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಪಡೆದು ಸದನದಲ್ಲಿ ಮಂಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

**ಎ) ವಿಷಯ:- ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿರುವ 'ರನ್ನ ಶುಗರ್ಸ್ ಕಾರ್ಖಾನೆ' ಕಳೆದ 2 ವರ್ಷಗಳಿಂದ ಸ್ಥಗಿತಗೊಂಡಿದ್ದು, ಕಾರ್ಮಿಕರು ಕಷ್ಟಕ್ಕೆ ಸಿಲುಕಿರುವ ಬಗ್ಗೆ.**

- - - - -

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ರನ್ನ ಶುಗರ್ಸ್ ಕಾರ್ಖಾನೆ ಕಳೆದ ಎರಡು ವರ್ಷಗಳಿಂದ ಬಂದ್ ಆಗಿದ್ದು, ಇದನ್ನೇ ನಂಬಿಕೊಂಡಿದ್ದ ಕಾರ್ಮಿಕ ಕುಟುಂಬಗಳು ಬೀದಿಗೆ ಬಿದ್ದಿರುತ್ತವೆ. ಈ ಸಂಬಂಧ ಕಾರ್ಖಾನೆ ಪ್ರಾರಂಭಿಸುವಂತೆ ಕೋರಿ ತಹಶೀಲ್ದಾರ್ ಅವರಿಗೆ ಬಹಳಷ್ಟು ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿರುವುದಿಲ್ಲ. ಅಲ್ಲದೇ, ಜಲಸಂಪನ್ಮೂಲ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರು ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಎಂದು ರನ್ನ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದ ನೌಕರ ಸಂಘದ ಪದಾಧಿಕಾರಿಗಳು ತರಾಟೆಗೆ ತೆಗೆದುಕೊಂಡಿರುವುದು ಸಹ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಸುಮಾರು ರೂ. ೩೫೦ ಕೋಟಿ ಹಗರಣ ನಡೆಸಿ ಕಾರ್ಖಾನೆ ದಿವಾಳಿ ಮಾಡಿದ ಆಡಳಿತ ಮಂಡಳಿ ಮೇಲೆ ಕ್ರಮ ಕೈಗೊಳ್ಳುವಂತೆ ಹಾಗೂ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ವಿವಿಧ ಸಂಘಟನೆಗಳು ಸುವರ್ಣ ವಿಧಾನ ಸೌಧದ ಮುಂಭಾಗ ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ವಿಷಯದ ಬಗ್ಗೆ ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಿ, ಕಾರ್ಮಿಕರ ದೃಷ್ಟಿಯಿಂದ ಕೂಡಲೇ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಕ್ಕರೆ ಸಚಿವರಿಂದ ಉತ್ತರವನ್ನು ಪಡೆದು ಸದನದಲ್ಲಿ ಮಂಡಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1134)/16.12.2021/5.40/ಹೆಚ್‌ವಿ:ಜಿಆರ್

**ಏ) ವಿಷಯ: ಡಾ||ನಂಜುಂಡಪ್ಪ ವರದಿಯಂತೆ ಪ್ರಾದೇಶಿಕ ಅಸಮಾನತೆ ಸರಿದೂಗಿಸಲು ಬಾಗಲಕೋಟೆಯಲ್ಲಿ ವೈದ್ಯಕೀಯ ಕಾಲೇಜ್ ಪ್ರಾರಂಭಿಸುವ ಬಗ್ಗೆ.**

------

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಪ್ರಾದೇಶಿಕ ಅಸಮಾನತೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ಡಾ||ನಂಜುಂಡಪ್ಪನವರ ವರದಿಯಂತೆ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾದ ಬಾಗಲಕೋಟೆ ಜಿಲ್ಲೆಗೆ ಮಂಜೂರಾಗಿರುವ ವೈದ್ಯಕೀಯ ಕಾಲೇಜಿನ ಕಾರ್ಯಾರಂಭಕ್ಕೆ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸದೇ ಇರುವ ವಿಚಾರವು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಸದನದಲ್ಲಿ ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ವೈದ್ಯಕೀಯ ಕಾಲೇಜು ಸ್ಥಾಪನೆಯಿಂದ ರಾಜ್ಯದ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಕಡಿಮೆ ವೆಚ್ಚದಲ್ಲಿ ಉನ್ನತ ವ್ಯಾಸಂಗವನ್ನು ಪಡೆದು ವೈದ್ಯರಾಗಿ ರಾಜ್ಯದಲ್ಲಿ ಕೊರತೆ ಇರುವ ನಾನಾ ವಿಭಾಗಗಳ ವೈದ್ಯರ ಕೊರತೆಯನ್ನು ನಿವಾರಿಸಿದಂತಾಗಿ, ಚಿಕಿತ್ಸೆಯ ಗುಣಮಟ್ಟ ವೃದ್ಧಿಯಾಗಿ, ಬಡರೋಗಿಗಳ ಮಾರಣಾಂತಿಕ ಖಾಯಿಲೆಗೆ ಉತ್ತಮ ಗುಣಮಟ್ಟದ ಚಿಕಿತ್ಸೆಯು ದೊರೆಯುತ್ತದೆ. ಆದರೆ, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಲ್ಲಿ ಒಂದಾದ ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಎಂಬ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಾರಂಭ ಮಾಡಲು ಸರ್ಕಾರಕ್ಕೆ ಮನಸ್ಸಿಲ್ಲದಂತಾಗಿದೆ. ಮಂಜೂರಾಗಿರುವ ಸರ್ಕಾರಿ ವೈದ್ಯಕೀಯ ಮಹಾ ವಿದ್ಯಾಲಯದ ಕಾರ್ಯಾರಂಭಗಳಿಗೆ ಅವಶ್ಯಕ ಅನುದಾನವನ್ನು ಒದಗಿಸದೇ ನಿರ್ಲಕ್ಷ್ಯ ಧೋರಣೆಯಿಂದ ವಿಳಂಬ ಮಾಡುತ್ತಿರುವುದು ಅತ್ಯಂತ ಖಂಡನೀಯ ಸಂಗತಿಯಾಗಿದೆ. ಮುಳುಗಡೆ ಜಿಲ್ಲೆ ಬಾಗಲಕೋಟೆ ಸರ್ಕಾರಿ ಮಹಾವಿದ್ಯಾಲಯಕ್ಕೆ ಸರ್ಕಾರವು ಆರ್ಥಿಕ ಸಮಸ್ಯೆ ನೆಪವೊಡ್ಡಿ ಅನುದಾನವನ್ನು ಬಿಡುಗಡೆಗೊಳಿಸದೆ ಇರುವುದನ್ನು ಪ್ರತಿಭಟಿಸಿ ಸರ್ಕಾರವನ್ನು ಜಾಗೃತಗೊಳಿಸುವ ಉದ್ದೇಶದಿಂದ ದಿನಾಂಕ:11.11.2021ರಂದು ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು, ಬಾಗಲಕೋಟೆ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ 'ಬೂಟ್ ಪಾಲಿಷ್' ಅನ್ನು ಮಾಡಿ ದೇಣಿಗೆಯನ್ನು ಸಂಗ್ರಹಿಸಿ ಸರ್ಕಾರಕ್ಕೆ ನೀಡಿದ್ದರು. ಆದರೆ, ಸ್ಥಳೀಯ ಶಾಸಕರು, 'ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಬೂಟ್ ಪಾಲಿಶ್ ಮಾಡಿದರೆ ಕಡಿಮೆ ದೇಣಿಗೆ ಸಂಗ್ರಹವಾಗಲಿದೆ ಇದರ ಬದಲು ಜಿಲ್ಲೆಯಾದ್ಯಂತ ಬೂಟ್ ಪಾಲಿಶ್ ಸಪ್ತಾಹವನ್ನು ಮಾಡಿದರೆ ದೇಣಿಗೆ ಹೆಚ್ಚಿಗೆ ಸಂಗ್ರಹವಾಗುತ್ತದೆ' ಎಂದು ವ್ಯಂಗ್ಯವನ್ನು ಮಾಡಿರುತ್ತಾರೆ. ಈ ರೀತಿಯ ಜನ ಪ್ರತಿನಿಧಿಗಳ ವರ್ತನೆಯು ಅಭಿವೃದ್ಧಿಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ವಿಚಾರದಲ್ಲಿರುವುದು ತಕ್ಕದಲ್ಲವಾಗಿದೆ. ಆದುದರಿಂದ ಈ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಕೂಡಲೇ ಅನುದಾನವನ್ನು ಬಿಡುಗಡೆಗೊಳಿಸಿ, ಕಾಲೇಜು ಕಾರ್ಯಾರಂಭ ಮಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಿ ಸ್ಥಳೀಯ ಜನರ ಕಷ್ಟ ಕಾರ್ಪಣ್ಯಗಳಿಗೆ ನೆರವಾಗಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ: ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, 2014-15ನೇ ಸಾಲಿನ ಆರ್ಥಿಕ ವರ್ಷದಲ್ಲಿ ಬಾಗಲಕೋಟೆ ವೈದ್ಯಕೀಯ ಕಾಲೇಜಿಗೆ ಗುಲ್ಬರ್ಗಾ, ಗದಗ, ಕೊಪ್ಪಳ, ಕಾರವಾರ, ಕೊಡಗು ಜಿಲ್ಲೆಗಳ ರೀತಿಯಲ್ಲಿಯೇ ಇದಕ್ಕೂ ಮನ್ನಣೆ ದೊರೆತಿತ್ತು. ಆದರೆ, ಆರ್ಥಿಕ ಲಭ್ಯತೆ ಇಲ್ಲದೇ ಇದ್ದ ಕಾರಣದಿಂದಾಗಿ ಅದನ್ನು ಕೈಬಿಡಲಾಗಿತ್ತು. 2019-20ನೇ ಸಾಲಿನಲ್ಲಿ ನಾವು ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದೇವೆ. ಉಳಿದಂತೆ, ಬಾಗಲಕೋಟೆಯನ್ನು ಒಳಗೊಂಡಂತೆ ಸುಮಾರು 10 ಜಿಲ್ಲೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ನಮ್ಮ ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ಆ ನಿಟ್ಟಿನಲ್ಲಿ ಬಾಗಲಕೋಟೆಯಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜನ್ನು ಅಭಿವೃದ್ಧಿಪಡಿಸಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲಾಗುವುದು ಎಂದರೆ ಏನರ್ಥ? 2014-15ನೇ ಸಾಲಿನಲ್ಲಿ ಈ ಭಾಗಕ್ಕೆ ವೈದ್ಯಕೀಯ ಕಾಲೇಜು ಮಂಜೂರಾಗಿತ್ತು. ಅದನ್ನು ಬಿಟ್ಟು ಈಗ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಯೋಜನೆಯಡಿಯಲ್ಲಿ ಪ್ರಾರಂಭಿಸುತ್ತೇವೆ ಎಂದರೆ, ಸರ್ಕಾರ ಹಣವನ್ನು ಕೊಡುವುದಿಲ್ಲವೆಂದು ಅರ್ಥವಲ್ಲವೇ?

**ಡಾ: ಕೆ.ಸುಧಾಕರ್:-** ಸನ್ಮಾನ್ಯ ಸಭಾಪತಿಯವರೇ, ಈಗ ಒಂದು ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸುಮಾರು 680 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಕೇಂದ್ರ ಸರ್ಕಾರ 2018-19 ಮತ್ತು 2019-20 ನೇ ಸಾಲಿನಲ್ಲಿ ಕೆಲವು ನಿಬಂಧನೆಗಳನ್ನು ವಿಧಿಸಿದೆ. ಯಾವ ಜಿಲ್ಲೆಯಲ್ಲಿ ಖಾಸಗಿ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳು ಯಾವುದೂ ಇಲ್ಲದೇ ಹೋದರೆ, ಅವರು ಆರ್ಥಿಕವಾಗಿ ಅನುದಾನವನ್ನು ಶೇಕಡಾ 60:40ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುತ್ತಿದ್ದವು. ಆ ಯೋಜನೆಯೂ ಮುಕ್ತಾಯಗೊಂಡಿದೆ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಈಗಾಗಲೇ ಖಾಸಗಿ ವೈದ್ಯಕೀಯ ಕಾಲೇಜು ಇರುವುದರಿಂದ ಆ

ಯೋಜನೆಯಡಿಯಲ್ಲಿಯೂ ಇದು ಬರುವುದಿಲ್ಲ. ಆ ಕಾರಣದ ಹಿನ್ನೆಲೆಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ಸ್ಥಾಪನೆ ಮಾಡಬೇಕೆಂದು ಯೋಚಿಸಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಬಾಗಲಕೋಟೆ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಯಾದರೆ ಉತ್ತಮ.

**ಡಾ: ಕೆ.ಸುಧಾಕರ್:-** ಸನ್ಮಾನ್ಯ ಸಭಾಪತಿಯವರೇ, ಆ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತದೆ.

**ಸಭಾಪತಿಯವರು:-** ಮುಂದಿನ ಶೂನ್ಯವೇಳೆಯ ಪ್ರಸ್ತಾಪ ಮಾನ್ಯ ಎಂ.ಎ.ಗೋಪಾಲಸ್ವಾಮಿಯವರದಿತ್ತು. ಆದರೆ ಅವರು ಸದನಕ್ಕೆ ಗೈರುಹಾಜರಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ</u>**

**ವಿಷಯ: ವೈದ್ಯಕೀಯ ಸೀಟು ದೊರೆತು ಇಂಜಿನಿಯರಿಂಗ್ ಸೀಟು ಬಿಟ್ಟು ಕೊಟ್ಟಲ್ಲಿ ಆ ಸೀಟನ್ನು ಮುಂದಿನ ಶ್ರೇಣಿಯಲ್ಲಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ನೀಡಿ ಪ್ರಕ್ರಿಯೆ ಮುಂದುವರೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ**

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಶ್ರೀ ಶಶೀಲ್ ಜಿ.ನಮೋಶಿಯವರು ದಿನಾಂಕ:15.12.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸರ್ಕಾರದ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 6. ಪ್ರಕಟಣೆ

**ಸಭಾಪತಿಯವರು:-** ದಿನಾಂಕ:15.12.2021ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ದಿನಾಂಕ:16.12.2021 ರಿಂದ 24.12.2021ರವರೆಗೆ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಲಾಯಿತು.

1. ಪ್ರಶ್ನೋತ್ತರ, ಶೂನ್ಯವೇಳೆ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ; ಗಮನ ಸೆಳೆಯುವ ಸೂಚನೆಗಳು, ನಿಯಮ 330ರ ಮೇರೆಗೆ ಚರ್ಚೆ, ನಿಯಮ 68ರಡಿ ಚರ್ಚೆ ಹಾಗೂ ಖಾಸಗಿ ಕಾರ್ಯಕಲಾಪಗಳು

ಕಾರ್ಯಕಲಾಪಗಳ ಸಲಹಾ ಸಮಿತಿಯ ಈ ವರದಿಗೆ ಸದನದ ಅಂಗೀಕಾರವಿದೆ ಎಂದು ನಾನು ಭಾವಿಸುತ್ತೇನೆ.

## 7. ಚುನಾವಣಾ ಪ್ರಸ್ತಾವ

**ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ 1992 ಪ್ರಕರಣ 18(1)(9)ರನ್ವಯ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರುಗಳನ್ನು ಚುನಾಯಿಸಬೇಕೆನ್ನುವ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

## 8. ನಿಯಮ 68ರ ಮೇರೆಗೆ ಚರ್ಚೆ

**ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಠಿಯಿಂದ ರೈತರ ಬೆಳೆಗಳು ನಾಶವಾಗಿ, ಜಾನುವಾರುಗಳ ಪ್ರಾಣ ಹಾನಿಯಾಗಿ ಸಾರ್ವಜನಿಕ ಆಸ್ತಿಗಳಿಗೆ ಧಕ್ಕೆ ಉಂಟಾಗಿರುವ ಸಮಸ್ಯೆಗಳ ಕುರಿತು.**

------

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸಂಭವಿಸಿರುವ ಅತಿವೃಷ್ಠಿ ಮತ್ತು ಮಹಾಪೂರದಿಂದ ಜನರು ತತ್ತರಿಸಿ ಹೋಗಿದ್ದಾರೆ. ರೈತರು ಭೂಮಿಯಲ್ಲಿ ಬೆಳೆದ ಬೆಳೆಗಳನ್ನು ಮತ್ತು ಜಾನುವಾರುಗಳನ್ನು ಕಳೆದುಕೊಳ್ಳುವುದರ ಜೊತೆಗೆ ಸಾಕಷ್ಟು ಜೀವಹಾನಿ ಮತ್ತು ಪ್ರಾಣಹಾನಿ ಆಗಿರುವ ವಿಚಾರದ ಬಗ್ಗೆ ನಾನು ಹಾಗೂ ನನ್ನ ಸ್ನೇಹಿತರು ಸದನ ಪ್ರಾರಂಭವಾದ ದಿನದಂದು ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಿದ್ದೆವು ಅದನ್ನು ತಾವು ನಿಯಮ 68ಕ್ಕೆ ಪರಿವರ್ತನೆ ಮಾಡಿ ಇಂದಿಗೆ 3 ದಿನಗಳು ಕಳೆದಿವೆ, ಈಗ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಲಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಟಿಯಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬೆಳೆಯುಂತ ರೈತರ ಬೆಳೆ ಸೇರಿದಂತೆ ರಸ್ತೆ, ಸೇತುವೆ, ಸರ್ಕಾರಿ ಕಟ್ಟಡಗಳು ಸಾರ್ವಜನಿಕ ಮನೆಗಳಿಗೆ ಹಾನಿಯುಂಟಾಗಿದೆ. ಇದರ ಜೊತೆಗೆ ಜಾನುವಾರುಗಳ ಪ್ರಾಣ ಹಾನಿಯಾಗಿದೆ. ಇದರಿಂದಾಗಿ ಸಾವಿರಾರು ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಹಲವಾರು ಕಾರಣಗಳಿಂದ ಸಂಕಷ್ಟದಲ್ಲಿರುವ ರೈತರು ಹಾಗೂ ರಾಜ್ಯದ ಜನತೆಯನ್ನು ಅತಿವೃಷ್ಠಿಯು ಇನ್ನಷ್ಟು ಸಂಕಷ್ಟಕ್ಕೆ ದೂಡಿದೆ. ರಾಜ್ಯದ ಪಾಲಿಗೆ ಸಂಕಷ್ಟವನ್ನು ತಂದೊಡ್ಡಿರುವ ಈ ಸಮಸ್ಯೆಯನ್ನು ನಿಭಾಯಿಸಲು ರಾಜ್ಯ ಸರ್ಕಾರ ವಿಫಲವಾಗಿರುವುದರಿಂದ ಇದು ಅತ್ಯಂತ ಮಹತ್ವದ ವಿಚಾರವಾಗಿರುವುದರಿಂದ ನಾನು ಈ ನಿಲುವಳಿ ಸೂಚನೆಯನ್ನು 13ನೇ ತಾರೀಖಿನಂದೆಯೇ ಮಂಡಿಸಿದ್ದೆ. ಈ ವಿಚಾರವಾಗಿ ಮಾತನಾಡಲು ಹೆಚ್ಚು ಸಮಯ ತೆಗೆದುಕೊಳ್ಳದೇ ಬೇಗನೇ ಮುಗಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಇದೇ ವರ್ಷ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮಳೆಯಿಂದ ಅಪಾರ ಹಾನಿಯಾಗಿದೆ. ರಾಜ್ಯದಲ್ಲಿ ರೈತರ ಬೆಳೆಗಳಿಗೆ, ಜಾನುವಾರುಗಳಿಗೆ ಹಾಗೂ ಸಾಕಷ್ಟು ಮನೆಗಳಿಗೆ ಹಾನಿಯಾಗಿವೆ. ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವುಂಟಾಗಿದೆ. ಸತತವಾಗಿ ನಾಲ್ಕನೇ ವರ್ಷವೂ ರಾಜ್ಯಕ್ಕೆ ಪ್ರವಾಹ ಮತ್ತು ಭೂ ಕುಸಿತದಿಂದ ಅಪಾರ ಹಾನಿಯುಂಟಾಗಿದೆ. ನಮ್ಮ ಭಾಗದಲ್ಲಿ ಭೂ ಕುಸಿತ ಎನ್ನುವುದು ಕಡಿಮೆ. ಆದರೆ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಭೂ ಕುಸಿತ ಹೆಚ್ಚಾಗಿತ್ತು. ಅದರಿಂದಲ್ಲೂ ಸಹ ಜನರು ಹಾನಿಯನ್ನು ಅನುಭವಿಸಿದ್ದಾರೆ. ಈ ಬಾರಿ ಈಶಾನ್ಯ ಮಾನ್‌ಸೂನ್‌ನಲ್ಲಿ ದಾಖಲೆ ಪ್ರಮಾಣದ ಮಳೆಯಿಂದಾಗಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪಾರ ಪ್ರಮಾಣದ ಹಾನಿಯುಂಟಾಗಿದೆ. ಈ ಬಾರಿ ರಾಜ್ಯದಲ್ಲಿ ಸುಮಾರು 307 ಮಿಲಿಮೀಟರ್‌ನಷ್ಟು ಮಳೆಯಾಗಿದೆ. ರಾಜ್ಯದಲ್ಲಿ ವಾಡಿಕೆ ಮಳೆಯ ಪ್ರಮಾಣ 166 ಮಿಲಿಮೀಟರ್ ಆಗಿದೆ. ಅಂದರೆ, ಸುಮಾರು 141 ಮಿಲಿ ಮೀಟರ್‌ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ಶೇಕಡಾ 85ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ರಾಜ್ಯದ ಒಟ್ಟು 31 ಜಿಲ್ಲೆಗಳಲ್ಲಿ ಸುಮಾರು 8 ಜಿಲ್ಲೆಗಳನ್ನು ಹೊರತುಪಡಿಸಿ 23 ಜಿಲ್ಲೆಗಳು ಅಧಿಕ ಮಳೆಯಿಂದ ಹಾನಿಗೊಳಗಾಗಿವೆ. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ಕಳೆದ 60 ವರ್ಷಗಳಲ್ಲಿ ಬಿದ್ದಿರದಂತಹ ಮಳೆ ಈ ಬಾರಿ ಅಂದರೆ, ನವೆಂಬರ್ 2021 ರಲ್ಲಿ ಬಿದ್ದಿದೆ. ಇದು ವಾಸ್ತವಕ್ಕಿಂತ ಶೇಕಡಾ 592ರಷ್ಟು ಹೆಚ್ಚು ಮಳೆಯಾಗಿದೆ. ಇದರ ಜೊತೆಗೆ ಹಾನಿಯೂ ಸಹ ಉಂಟಾಗಿದೆ. ಈ ಬಾರಿ ಬಿದ್ದಂತಹ ಮಳೆಯಿಂದಾಗಿ ರಾಜ್ಯದ ರೈತರು ಬೆಳೆದಂತಹ ಭತ್ತ, ರಾಗಿ, ಕಡಲೇಕಾಯಿ, ಜೋಳ, ಹತ್ತಿ ಮತ್ತು ಮೆಣಸಿನಕಾಯಿ ಮೊದಲಾದ ಬೆಳೆಗಳು ಸಂಪೂರ್ಣ ಹಾನಿಗೊಳಗಾಗಿ ರೈತರಿಗೆ ದಿಕ್ಕು ತೋಚದಂತಾಗಿದೆ.

(ಮುಂದು)

(1135) 16.12.2021 5.50 ಪಿಕೆ:ಎಂಡಿ

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದಿದೆ)**

ರೈತರು ಕಣ್ಣೀರಿನಲ್ಲಿ ಕೈತೊಳೆಯುವಂತಹ ದುರ್ಭರ ಪ್ರಸಂಗ ಒದಗಿ ಬಂದಿದೆ. ಸಣ್ಣ ನೀರಾವರಿ ಇಲಾಖೆಯ ವತಿಯಿಂದ ನಿರ್ಮಿಸಿದಂತಹ ಕೆರೆಗಳು ಒಡೆದು ಹೋಗಿವೆ, ಬೆಳೆಗಳು ಕೊಚ್ಚಿಕೊಂಡು ಹೋಗಿವೆ. ಅಲ್ಲದೇ ರಾಜ್ಯದಲ್ಲಿರುವ ರಸ್ತೆಗಳು, ಸೇತುವೆಗಳು, ಶಾಲಾ ಕಟ್ಟಡಗಳು ಇತರ ಎಲ್ಲಾ ಸರ್ಕಾರಿ ಕಚೇರಿಗಳು ಬಹಳಷ್ಟು ಹಾನಿಗೊಳಗಾಗಿವೆ. ಈ ಬಾರಿ ಮಳೆಯಿಂದ 42 ಜನ ಪ್ರಾಣವನ್ನು ಕಳೆದುಕೊಂಡಿದ್ದಾರೆ. ವಿಶೇಷವಾಗಿ ಮೂಲಭೂತ ಸೌಕರ್ಯಗಳಾದಂತಹ ರಸ್ತೆಗಳು, ಸೇತುವೆಗಳು, ವಿದ್ಯುತ್ ಸಂಪರ್ಕ, ಶಾಲೆಗಳು, ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು ಹೀಗೆ ಬಹುತೇಕ ಸರ್ಕಾರಿ ಕಟ್ಟಡಗಳು ಹಾನಿಗೊಳಗಾಗಿವೆ. ನವೆಂಬರ್-ಡಿಸೆಂಬರ್ ತಿಂಗಳುಗಳಲ್ಲಿ ಬಿದ್ದ ಮಳೆಯಿಂದ 19,360 ಕಿ.ಮೀ.ನಷ್ಟು ರಾಜ್ಯದ ಹೆದ್ದಾರಿಗಳು ಹಾಳಾಗಿವೆ. 1258 ಸೇತುವೆಗಳು ಹಾಳಾಗಿ ಕೊಚ್ಚಿಕೊಂಡು ಹೋಗಿವೆ. 7204 ವಿದ್ಯುತ್ ಕಂಬಗಳು ಸಹ ಕೊಚ್ಚಿಕೊಂಡು ಹೋಗಿವೆ. ವಿದ್ಯುತ್ ಸರಬರಾಜು ಮಾಡುವ 1108 ಟ್ರಾನ್ಸ್‌ಫಾರ್ಮರ್‌ಗಳು ಕೂಡ ನೀರಿನಲ್ಲಿ ಮುಳುಗಿ ವರ್ಕಿಂಗ್ ಕಂಡೀಷನ್‌ನಲ್ಲಿ ಇಲ್ಲದಂತಾಗಿದೆ. 446 ಕಿ.ಮೀ.ನಷ್ಟು ಪವರ್ ಸಪ್ಲೈ ಲೈನ್‌ಗಳು ಕಿತ್ತುಕೊಂಡು ಹೋಗಿವೆ. 439 ಮೈನರ್ ಇರಿಗೇಷನ್ ಟ್ಯಾಂಕ್ ಒಡೆದು ಹೋಗಿವೆ. 977 ವಾಟರ್ ಸಪ್ಲೈ ಸ್ಕೀಮ್ಸ್ ನಾಮಾವಶೇಷವಾಗಿವೆ. 771 ಸರ್ಕಾರಿ ಕಟ್ಟಡಗಳು ಹಾನಿಗೊಂಡಿವೆ. ಒಟ್ಟಾರೆಯಾಗಿ ರೂ. 11,916.30 ಕೋಟಿಗಳಷ್ಟು ಹಾನಿಯಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆಯೂ ಆಗಿದೆ ನಿಜ; ನಿರೀಕ್ಷೆಗೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೀರಿ ಮಳೆಯಾಗಿದೆ, ವಾಡಿಕೆಗಿಂತ 141 ಎಂಎಂ ಮಳೆ ಹೆಚ್ಚಾಗಿದೆ. ಇದು 60 ವರ್ಷದಲ್ಲೇ 2ನೇ ಬಾರಿ ಇಂತಹ ದೊಡ್ಡ ಮಳೆ ಬಂದು ಅನಾಹುತವಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕಟ್ಟಡಗಳು ಹಾಳಾಗಿವೆ ಎಂದರೆ, ಕಳಪೆ ಕಾಮಗಾರಿಯ ಕಾರಣದಿಂದ ಆಗಿರಬಹುದೆನ್ನುವ ಸಂಶಯ ಬರುತ್ತದೆ. ರಸ್ತೆ, ಸೇತುವೆ, ಮನೆಗಳು ಎಲೆಕ್ಟ್ರಿಕಲ್ ಇನ್‌ಫ್ರಾಸ್ಟ್ರಕ್ಚರ್ ಅಂದರೆ, ವೈರಿಂಗ್, ಟ್ರ್ಯಾನ್ಸ್‌ಫಾರ್ಮರ್‌ಗಳು ಕೊಚ್ಚಿಕೊಂಡು ಹೋಗಿವೆ. ಇವುಗಳು ಕಳಪೆ ಕಾಮಗಾರಿಯಿಂದ ಕೂಡಿದ್ದವೇನೋ ಎನ್ನುವ ಅನುಮಾನ ನನ್ನನ್ನು ಕಾಡುತ್ತಿದೆ.

ಮಾನ್ಯ ಸಭಾಪತಿಗಳೆ, ನೀರು ಬಿಡುವುದಕ್ಕೆ 15 ದಿವಸದ ಮೊದಲು ಕಾಲುವೆಗಳನ್ನು ಕ್ಲೀನ್ ಮಾಡಬೇಕೆಂದು ಗುತ್ತಿಗೆ ಕೊಡುತ್ತಾರೆ; ಆದರೆ ಅವರು ಕ್ಲೀನ್ ಮಾಡುವುದೇ ಇಲ್ಲ, ನೀರು ಬಿಟ್ಟುಬಿಡುತ್ತಾರೆ. ನೀರು ಬಿಟ್ಟ ಮೇಲೆ ಅಲ್ಲಿ ಹೋಗಿ ನೋಡುವುದಕ್ಕಾಗುವುದಿಲ್ಲ; ಯಾರು ಕೇಳುವವರೂ ಇರುವುದಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಇದರ ಬಗ್ಗೆ ಸರ್ಕಾರ ಬೇಗ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ವರ್ಷ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ದಾಖಲೆಯ ಬಿತ್ತನೆಯಾಗಿದೆ. ಕೃಷಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ 73 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾಗಿದೆ. ಆದರೆ ಹೆಚ್ಚು ಮಳೆಯಾಗಿದ್ದರಿಂದ ರಾಗಿ, ಭತ್ತ, ಮುಸುಕಿನ ಜೋಳ ಎಲ್ಲವೂ ಹಾಳಾಗಿವೆ. ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿ ಸದ್ಯಕ್ಕೆ ಶೇಕಡ 75 ಕ್ಕಿಂತ ಹೆಚ್ಚು ಹಾನಿಯಾಗಿದೆ. 20 ಲಕ್ಷ ಎಕರೆ ಭೂಮಿಯಲ್ಲಿ ಬೆಳೆದಂತಹ ಬೆಳೆ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿವೆ ಎಂದು ಹೇಳುವುದಕ್ಕೆ ತುಂಬಾ ನೋವೆನಿಸುತ್ತಿದೆ.

ಮಾನ್ಯ ಉಪಸಭಾಪತಿಗಳೇ, ನಮ್ಮ ಕಡೆ ಕಾಫಿ ಬೆಳೆ ಶೇಕಡ 30-40 ರಷ್ಟು ಹಾನಿಯಾಗಿದೆ ಎನ್ನುವ ದಾಖಲೆ ಇದೆ. ನಾನು ಸರ್ಕಾರಿ ದಾಖಲೆಯನ್ನು ಅವಲಂಬಿಸಿ ಮಾತನಾಡುತ್ತಿದ್ದೇನೆ. ಯಾವ ಬೆಳೆ ಕೂಡ ಉಳಿದಿಲ್ಲ.

ಮಾನ್ಯ ಸಭಾಪತಿಗಳೆ, ನಾವೆಲ್ಲಾ ಕೋವಿಡ್-19 ಹೊಡೆತಕ್ಕೆ ಸಿಕ್ಕಿಹಾಕಿಕೊಂಡಿದ್ದೆವು. ನಂತರ ನೋಟ್ ಬ್ಯಾನ್‌ನಿಂದಾಗಿ ತತ್ತರಿಸಿ ಹೋದೆವು. ಇನ್ನೇನು ಸುಧಾರಣೆ ಆಗುತ್ತಿದೆ ಎನ್ನುವಾಗ ಅತಿವೃಷ್ಟಿ ನಮ್ಮ ರೈತರ ತಲೆ ಮೇಲೆ ಅಪ್ಪಳಿಸಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಹಾನಿ ಅನುಭವಿಸಿದ್ದಾರೆ. ಇವರು ಮರುಜೀವ ಪಡೆಯಬೇಕಾದರೆ, ಸಾಮಾನ್ಯ ಜೀವನಕ್ಕೆ ಮರಳಬೇಕಾದರೆ ಕನಿಷ್ಠ ನಾಲ್ಕೈದು ವರ್ಷ ಬೇಕಾಗುತ್ತದೆ ಎಂದು ನನಗನಿಸುತ್ತಿದೆ. ಇಷ್ಟು ಸಮಯ ತೆಗೆದುಕೊಳ್ಳುವಷ್ಟು ಹಾನಿಯಾಗಿದೆ. ಈ ಮಳೆಯಿಂದ ಹೊಲದಲ್ಲೇ ಬೆಳೆ ಕೊಳೆತು ಹೋಗಿದೆ. ಮಳೆಯ ರಭಸಕ್ಕೆ ಜೋಳದ ಪೈರು ನೆಲಕ್ಕೆ ಬಿದ್ದು ತೆನೆ ನಾಶವಾಗಿ ಹೋಗಿದೆ. ಹೀಗೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಕಳೆದ ನಾಲ್ಕು ವರ್ಷದಿಂದ ರಾಜ್ಯ ನಿರಂತರವಾಗಿ ಅತವೃಷ್ಟಿ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಹಾಪೂರವನ್ನು ಎದುರಿಸುತ್ತಿದೆ. ಮೇ ತಿಂಗಳಲ್ಲಿ ತೌಕ್ತೆ ಚಂಡಮಾರುತ ಶುರು ಆಗಿ ಅದು ಡಿಸೆಂಬರ್ ತಿಂಗಳು ಬಂದರೂ ನಿಂತಿಲ್ಲ. ನನ್ನ ಪ್ರಕಾರ ಈಗ ಮಳೆಯಾಗುವ ಸಂದರ್ಭವೇ ಅಲ್ಲ. ನಮ್ಮ ಕಡೆ, ಕಬ್ಬು ಕಟಾವು ಮಾಡಿಕೊಂಡು ಕಾರ್ಖಾನೆಗೆ ತರಲು ಅಸಾಧ್ಯವಾಗಿರುವುದರಿಂದ ಕಾರ್ಖಾನೆಗಳು ಬಂದ್ ಆಗುವ ಪರಿಸ್ಥಿತಿ ಬಂದಿದೆ. ಅಷ್ಟೊಂದು ಸತತವಾಗಿ ಮಳೆ ಆಯಿತು. ಮಾನ್ಯ ನಿರಾಣಿಯವರಿಗೆ ಈ ವಿಷಯ ಚೆನ್ನಾಗಿ ಗೊತ್ತಿರುತ್ತದೆ. ಕಬ್ಬು ಕಟಾವು ಮಾಡುವುದು ಕಷ್ಟವಾಗಿ, ಆ ಕಬ್ಬನ್ನು ಕಾರ್ಖಾನೆಗಳಿಗೆ ಸಾಗಿಸುವುದು ಇನ್ನಷ್ಟು ಕಷ್ಟವಾಯಿತು. ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣ ಆಗಿರುವುದು ನನ್ನ ಗಮನದಲ್ಲಿಯೂ ಇಲ್ಲ. ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಏನು ಮಳೆಯಾಯಿತೋ ಆ ಹಿನ್ನೆಲೆಯಲ್ಲಿ 31 ಜಿಲ್ಲೆಗಳ ಪೈಕಿ 23 ಜಿಲ್ಲೆಗಳಲ್ಲಿ ಅತಿವೃಷ್ಟಿ ಆವರಿಸಿದೆ. ಅಂದರೆ, ಈಗಾಗಲೇ ನಾನು ಹೇಳಿದ ಹಾಗೆ ವಾಡಿಕೆಯಂತೆ 166 ಮಿ.ಮೀ ಮಳೆ ಬರಬೇಕಾಗಿತ್ತು, ಆದರೆ 307 ಮಿ.ಮೀ ಮಳೆಯಾಗಿದೆ. ಅಂದಾಜು 141 ಮಿ.ಮೀ.ನಷ್ಟು ಮಳೆ ಹೆಚ್ಚಾಗಿದೆ. ಶೇಕಡಾವಾರು ಹೇಳುವುದಾದರೆ, ನವೆಂಬರ್ ತಿಂಗಳಲ್ಲಿ 529 ಮಿ.ಮೀ.ರಷ್ಟು ಹೆಚ್ಚು ಮಳೆ ಸುರಿದಿದ್ದು, ಇದು ಕಳೆದ 60 ವರ್ಷದಲ್ಲಿ 2ನೇ ಅತಿ ದೊಡ್ಡ ಮಳೆಯಾಗಿದ್ದು, ರಾಜ್ಯದ ಉತ್ತರ ಒಳನಾಡಿನಲ್ಲಿ, ಈ ಭಾಗದಲ್ಲಿ 417 ಮಿ.ಮೀ, ಮಲೆನಾಡಿನಲ್ಲಿ 504 ಮಿ.ಮೀ. ಕರಾವಳಿಯಲ್ಲಿ 498 ಮಿ.ಮೀ.ರಷ್ಟು ಹೆಚ್ಚು ಮಳೆ ಸುರಿದಿದೆ. ದಕ್ಷಿಣ ಒಳನಾಡಿನಲ್ಲಿ 876 ಮಿ.ಮೀ.ನಷ್ಟು ಹೆಚ್ಚು ಮಳೆ ಸುರಿದು, ರಾಗಿ, ಜೋಳ, ಮೆಣಸಿನಕಾಯಿ, ಮೆಕ್ಕೆ ಜೋಳ, ದ್ರಾಕ್ಷಿ, ಕಾಫಿ, ಅಡಕೆ, ಮೆಣಸು ತರಕಾರಿ ಬೆಳೆಗಳು, ಹೂವುಗಳು ಎಲ್ಲವೂ ಪ್ರವಾಹದಿಂದ ಸಂಪೂರ್ಣ ಹಾನಿ ಅನುಭವಿಸಿವೆ. ರಾಜ್ಯದ ಪ್ರಾಥಮಿಕ ವರದಿ ಪ್ರಕಾರ 19366 ಕಿ.ಮೀ.ರಸ್ತೆ, 439 ಕೆರೆ-ಕಟ್ಟೆಗಳು, 7711 ಸರ್ಕಾರಿ ಕಟ್ಟಡಗಳು ನಾಶವಾಗಿವೆ. ಈ ವರ್ಷ ಮೇ ತಿಂಗಳಲ್ಲಿ ಬಂದ ತೌಕ್ತೆ ಚಂಡಮಾರುತದಿಂದ ಜುಲೈ, ಆಗಸ್ಟ್, ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಆಗಿರುವ ಹಾನಿಯನ್ನು ನಿರೀಕ್ಷೆ ಮಾಡದಂತಾಗಿದೆ. 31 ಲಕ್ಷ ಎಕರೆಯಲ್ಲಿ ಬೆಳೆದ ಬೆಳೆಗಳು ನಾಶವಾಗಿವೆ. 35321 ಮನೆಗಳು ಹಾನಿಯಾಗಿವೆ. ಕೆಲವು ಅರ್ಧಂಬರ್ಧ ಮತ್ತು ಇನ್ನೂ ಕೆಲವು ಪೂರ್ತಿಯಾಗಿ ನಾಶವಾಗಿವೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ 11,916.30 ಕೋಟಿ ಹಾನಿಯಾಗಿದ್ದು, ಎನ್‌ಡಿಆರ್‌ಎಫ್, ಎಸ್‌ಟಿಆರ್‌ಎಫ್ ನಾರ್ಮ್ಸ್ ಪ್ರಕಾರ ರೂ.1281.91 ಕೋಟಿ ಪರಿಹಾರವನ್ನು ಬಿಡುಗಡೆ ಮಾಡಬೇಕೆಂದು ಮನವಿ ಕೊಟ್ಟಿದ್ದಾರೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ನಿರಂತರವಾಗಿ ಪ್ರವಾಹ ಪರಿಸ್ಥಿತಿ ಇದೆ. ಇದು ಕಾಕತಾಳೀಯ ಸಂಬಂಧವಿರಬಹುದೆಂದು ನನಗೆ ಅನಿಸುತ್ತಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

(1136) 16-12-2021 6.00 DS-MD

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ವರುಣನ ಕೃಪೆ ನಮ್ಮ ಮೇಲಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವರುಣನ ಕೃಪೆ ಇರುತ್ತದೆ, ಆದರ್ರೆ ಈ ನಮೂನೆ ಹಾನಿಯಾಗಿರುವುದನ್ನು ಹೇಗೆ ತುಂಬುವುದು? ರಾಜ್ಯ ಸರ್ಕಾರ ೨೦೧೯ ರಿಂದ ೨೦೨೦, ೨೦೨೦- ೨೦೨೧ರವರೆಗೆ ಕೇಂದ್ರ ಸರ್ಕಾರಕ್ಕೆ memorandum ಸಲ್ಲಿಸಿದ ಬಗ್ಗೆ ಹೇಳುತ್ತೇನೆ. ೨೦೧೯ ರಲ್ಲಿ ಪ್ರವಾಹದಿಂದ ಹಾನಿಯನ್ನು ಅನುಭವಿಸಿದೆವು. ಆಗ ಕೇಂದ್ರ ಸರ್ಕಾರಕ್ಕೆ ನಾವು [illegible]೮೯೧ ಕೋಟಿ ರೂ.ಗಳನ್ನು ಕೇಳಿದ್ದೆವು. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತ ೧೬೫೨.೮೫ ಕೋಟಿ ರೂ.ಗಳು. ೨೦೨೦ರ ಆಗಸ್ಟ್‌ನಲ್ಲಿ ನಾವು ಪ್ರವಾಹದಿಂದ ಹಾನಿಯನ್ನು ಅನುಭವಿಸಿದೆವು. ಆಗ ಹಾನಿಯಾಗಿದ್ದು ಬಹಳ ಇದೆ. ಆಗ ನಾವು ಕೇಂದ್ರ ಸರ್ಕಾರಕ್ಕೆ [illegible]೫೫.೭೧ ಕೋಟಿ ರೂ.ಗಳನ್ನು ಕೇಳಿದ್ದೆವು. ಆದರೆ ಅವರು ೫೭೭.೮೪ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ನಾವು NDRF (National Disaster Response Fund) and SDRF (State Disaster Response Fund) norms ಗೆ ಅನುಗುಣವಾಗಿ ಕೇಳಿದ್ದೆವು. ನಾನು ಕಾನೂನುಬದ್ಧವಾಗಿ, ನ್ಯಾಯಸಮ್ಮತವಾಗಿ ಕೊಡತಕ್ಕಂಥ ಹಣವನ್ನು ಕೇಳಿದ್ದೆವು. ನಾವು ಹೆಚ್ಚಿನ ಹಣವನ್ನು ಕೇಳಿಲ್ಲ. ನಮಗೆ ಇಷ್ಟು ಹಾನಿಯಾಗಿದೆ, ನಮಗೆ ಎಲ್ಲಾ ಹಣವನ್ನು ಕೊಡಿ ಎಂದು ಕೇಳಿಲ್ಲ. NDRF norms ಪ್ರಕಾರ ಕೇಳಿದರೆ ಕೇಂದ್ರ ಸರ್ಕಾರದವರು ಆ ಹಣವನ್ನು ಸಹ ಕೊಟ್ಟಿಲ್ಲ. ೨೦೨೦ರ ಸೆಪ್ಟೆಂಬರ್‌ನಲ್ಲಿ ೧೫೦೫.೬೯ ಕೋಟಿ ರೂ.ಗಳನ್ನು ನಾವು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಆದ ಪ್ರವಾಹದ ಹಾನಿಗೆ ಕೇಳಿದರೆ ೭೪೦.೪೬ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಅಂದರೆ ನಾವು ಕೇಳಿದ್ದರಲ್ಲಿ ಅರ್ಧ ಹಣವನ್ನು ಬಿಡುಗಡೆ ಮಾಡಿರುತ್ತಾರೆ. ಇದು ಬಹಳ ಜುಜುಬಿ ಹಣ. ನಮ್ಮ ರೈತರ ಹಣ ತೆಗೆದುಕೊಳ್ಳುವುದಕ್ಕೆ ಹೋದರೆ ಅವರ ಖರ್ಚು-ವೆಚ್ಚ ಹಾಗೂ ಕುಡಿದ ಹಣವೂ ಸಹ ಇದರಲ್ಲಿ ಸಿಗುವುದಿಲ್ಲ. ಅದರಲ್ಲಿ ಮತ್ತೇ ಕೇಂದ್ರ ಸರ್ಕಾರ ಅರ್ಧ ಹಣವನ್ನು ಕೊಟ್ಟಿದೆ. ೨೦೨೧ ನೇ ಮೇ ತಿಂಗಳಿನಲ್ಲಿ ತೌಕ್ತೆ ಚಂಡಮಾರುತ ಅಪ್ಪಳಿಸಿ ಆದ ಹಾನಿಗಂತೂ ಪರಿಹಾರವನ್ನು ಬಿಡುಗಡೆ ಮಾಡಿಯೇ ಇಲ್ಲ. ರಾಜ್ಯ ಸರ್ಕಾರ ಕೇಳಿಲ್ಲ ಹಾಗೂ ಕೇಂದ್ರ ಸರ್ಕಾರ ಕೊಟ್ಟಿಲ್ಲ. ೨೦೨೧ರ ಜುಲೈ ತಿಂಗಳಿನಲ್ಲಿ ನಾವು ೮೪೧.೫೭ ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರಕ್ಕೆ ಕೇಳಿದ್ದೆವು. ಆದರೆ ಒಂದು ಪೈಸೆಯೂ ಸಹ ಬಿಡುಗಡೆ ಮಾಡಿಲ್ಲ. ೨೦೧೯-೨೦ನೇ ಸಾಲಿನಲ್ಲಿ ನಾವು ಕೇಳಿದ್ದರಲ್ಲಿ ಅರ್ಧ ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದು ಜುಜುಬಿ ಹಣ, ಅವರು ಕೇಳಿದ್ದಾರೆ, ಕೊಡೋಣ ಎಂದು ಸ್ವಲ್ಪ ಹಣವನ್ನು ಕೊಟ್ಟು ಕಳುಹಿಸಿದ್ದಾರೆ. ಮೊನ್ನೆಯ ೨೦೨೧ರ ನವೆಂಬರ್ ತಿಂಗಳಿನಲ್ಲಿ ೧೨೮೧.೯೨ ಕೋಟಿ ರೂ.ಗಳನ್ನು ಕೇಳಿದ್ದೆವು. ಇದನ್ನು ಬಿಡುಗಡೆ ಮಾಡಿದ್ದಾರೆಯೇ?

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸಮಗ್ರವಾದ ಮಾಹಿತಿಯನ್ನು ಸಭೆಯ ಮುಂದೆ ಇಡುತ್ತಿದ್ದಾರೆ. ನಾವು ಉತ್ತರವನ್ನು ಕೊಡುವಾಗ ವಿರೋಧ ಪಕ್ಷದ ನಾಯಕರಿಗೆ ಸಮಾಧಾನವಾಗುವಂಥ ಉತ್ತರವನ್ನು ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ನಮಗೆ ಸಮಾಧಾನವನ್ನು ಮಾಡುತ್ತಾರೆ.

**ಉಪ ಸಭಾಪತಿಯವರು:-** ಅವರ ಸ್ವಭಾವವೇ ಅದು.

**ಶ್ರೀ ಲೆಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಾಳೆಯ ದಿವಸ ಮುಂದುವರೆಸಲಿ. ಕೇಳುವವರು ಸಹ ಯಾರೂ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಇಲ್ಲಿಯೂ ಬೇಡ, ಅಲ್ಲಿಯೂ ಬೇಡ, ನಮಗೆ ನೀವೊಬ್ಬರು ಇದ್ದರೆ ಸಾಕು.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಾತನಾಡಿದರೆ press coverage ಸಿಗುವುದಿಲ್ಲ. ಹಾಗಾಗಿ ಅವರು ತಮ್ಮ ಮಾತುಗಳನ್ನು ನಿಲ್ಲಿಸುವುದು ಒಳ್ಳೆಯದು. ವಿರೋಧ ಪಕ್ಷದ ನಾಯಕರು ಮಾತನಾಡುವುದು ಮಾಧ್ಯಮಗಳಲ್ಲಿ ಬರಬೇಕು. ಹಾಗಾಗಿ ಅವರು ನಾಳೆಯ ದಿವಸ ಬೆಳಿಗ್ಗೆ ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ನಾನು ಮುಗಿಸಿಬಿಡುತ್ತೇನೆ, ಬಹಳ ಹೊತ್ತು ಮಾತನಾಡುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಒಮ್ಮೊಮ್ಮೆ ನಮ್ಮ ಸಲಹೆಯನ್ನು ತೆಗೆದುಕೊಳ್ಳಿ, ನಾಳೆಯ ದಿವಸ ಬೆಳಿಗ್ಗೆ ಮಾತನಾಡಿ. ನೀವು ವಿರೋಧ ಪಕ್ಷದ ನಾಯಕರು ಮಾತನಾಡಿದ್ದು press coverage ಆಗುವುದು ಬೇಡವೇ. ಇಷ್ಟೊತ್ತು ಆದ ನಂತರ ಯಾರೂ ಕವರ್ ಮಾಡುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅದರ ಜೊತೆಗೆ ಇವತ್ತು ಅವರ ಅಧ್ಯಕ್ಷರು ಊಟದ ವ್ಯವಸ್ಥೆಯನ್ನು ಮಾಡಿದ್ದಾರೆ.

**ಉಪ ಸಭಾಪತಿಯವರು:-** ಹಾಗಿದ್ದರೆ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಬೇಗ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನಾಳೆ ಮಾತನಾಡಿದರೆ press coverage ಸಿಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಕಾನೂನು ಸಚಿವರು ಹೇಳಿದರೆ ಹೆಚ್ಚು-ಕಡಿಮೆ ಅದು ಸರ್ಕಾರವೇ ಹೇಳಿದಂತೆ.

**ಉಪ ಸಭಾಪತಿಯವರು:-** ಅವರು ಹೇಳುತ್ತಿರುವುದು ನಿಮಗೆ political mileage ಬೇಕೆಂದರೆ ನಾಳೆಯ ದಿವಸ ಮಾಧ್ಯಮದವರು ಇದ್ದಾಗ ಮಾತನಾಡಿ ಎಂದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಅಂತಹ ರಾಜಕಾರಣಿಯಲ್ಲ. ನನಗೆ ನಾನು ಆಡುವ ಮಾತುಗಳು ಸರ್ಕಾರದ ಕಿವಿಗೆ ಬಿದ್ದರೆ ಸಾಕು. ಬಹಳ ಮಂದಿ ಮಾಧ್ಯಮದವರು ಕಡೆ ನೋಡಿ ಮಾತನಾಡುತ್ತಾರೆ. ನಾನು ಇಲ್ಲಿಯವರೆವಿಗೂ ಆ ಕೆಲಸವನ್ನು ಮಾಡಿಯೇ ಇಲ್ಲ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಉತ್ತರ ಕರ್ನಾಟಕದ ಸುವರ್ಣಸೌಧದಲ್ಲಿ ಅಧಿವೇಶನ ನಡೆಯುತ್ತಿದೆ. ಅವರು ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕವನ್ನು ಹೃದಯ ಭಾಗದಲ್ಲಿ ಇಟ್ಟುಕೊಂಡಿರುವವರು. ಅವರು ಈ ಭಾಗಕ್ಕೆ ಏನು ಬೆಳಕು ಚೆಲ್ಲುತ್ತಿದ್ದಾರೆಯೋ ಅದಕ್ಕೆ media coverage ಸಿಕ್ಕಿದರೆ ನಮಗೆಲ್ಲರಿಗೂ ಖುಷಿಯಾಗುತ್ತದೆ. ಇದು ನಮ್ಮ ಆಸೆಯಾಗಿದೆ. ಕೇವಲ ದಾಖಲೆಗೆ ಹೋಗುವ ಅವಶ್ಯಕತೆ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ನಾನು ಮಾತನಾಡುವುದನ್ನು ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಕೇಳಿಸಿಕೊಂಡರೆ ಸಾಕು.

**ಡಾ: ವೈ.ಎ.ನಾರಾಯಣಸ್ವಾಮಿ:-** ತಮ್ಮಂಥ ಹಿರಿಯರು, ವಿರೋಧ ಪಕ್ಷದ ನಾಯಕರು, ವಿಶೇಷವಾಗಿ ಈ ಭಾಗದ ಬಗ್ಗೆ ಕಾಳಜಿ ಹೊಂದಿರುವಂಥವರು.

**ಶ್ರೀ ಎಸ್.ಆರ್.ಪಾಟೀಲ್:-** ತಾವು ಹೇಳುವುದರ ಜೊತೆಗೆ ಈಗ ಸದನದಲ್ಲಿ ಮಾನ್ಯ ಕಂದಾಯ ಸಚಿವರು ಇಲ್ಲ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರ ಹತ್ತಿರ ಇರುವ ಅಂಕಿ-ಅಂಶಗಳು ಸರಿಯಾಗಿರುತ್ತದೆ. ಮಾಧ್ಯಮದಲ್ಲಿ ಬಂದರೆ ನಮಗೂ ಖುಷಿಯಾಗುತ್ತದೆ. ಅವರಿಗೂ ಖುಷಿಯಾಗುತ್ತದೆ. ಜನರಿಗೂ ಗೊತ್ತಾಗುತ್ತದೆ. ದಯವಿಟ್ಟು ಇದನ್ನು ಬೆಳಗ್ಗೆ ಹೊತ್ತು ಪ್ರಾರಂಭ ಮಾಡಿದರೆ ಚೆನ್ನಾಗಿರುತ್ತದೆ ಎನ್ನುವುದು ನನ್ನ ಅಭಿಪ್ರಾಯ. ನಾನು ಅವರ ಶ್ರೇಯೋಭಿಲಾಷಿಯಾಗಿ ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಈಗ ನಿಮ್ಮ ಕಾರ್ಯಕ್ರಮ ಏನಿದೆ?

**ಡಾ: ವೈ.ಎ.ನಾರಾಯಣಸ್ವಾಮಿ:-** ನನ್ನದೇನೂ ಕಾರ್ಯಕ್ರಮವಿಲ್ಲ. ರಾತ್ರಿ ಹತ್ತು ಗಂಟೆಯಾದರೂ ನಾನು ಇಲ್ಲೇ ಇರುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದಾದರೆ ನಾನು, ಮಾನ್ಯ ನಾರಾಯಣಸ್ವಾಮಿಯವರು ರಾತ್ರಿ ೧೨ ಗಂಟೆಯವರೆಗೂ ಇಲ್ಲೇ ಕುಳಿತುಕೊಂಡು ಕೇಳುತ್ತಿರುತ್ತೇವೆ. ನಾವು ಮಾನ್ಯ ಸಿದ್ದರಾಮಯ್ಯನವರಿಗೂಇದೇ ರೀತಿ forenoonನಲ್ಲೇ ಮುಗಿಸಿ ಎಂದು ಕೇಳಿಕೊಳ್ಳುತ್ತೇವೆ. ಅವರು ಸುಮ್ಮನೆ ಮಾತನಾಡುತ್ತಿದ್ದಾರೆಯೇ, Political mileage ಬೇಕು, ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರಿಷ್ಟ ನೋಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ನಾಳೆ ಮಾತನಾಡುತ್ತೇನೆ. ಏಕೆಂದರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದ ಮೇಲೆ ಮತ್ತೆ ಮಾತನಾಡುವುದು ಸರಿಯಲ್ಲ. ಸ್ನೇಹಿತರಾದ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಯಾವುದೋ ಕಾರ್ಯಕ್ರಮಕ್ಕೆ ಹೋಗಬಹುದೆಂದು ಕಾಣುತ್ತದೆ. ಅವರು ನನ್ನನ್ನು ಕರೆದುಕೊಂಡು ಹೋಗುತ್ತಾರೆ.

**ಉಪ ಸಭಾಪತಿಯವರು:-** ಈಗ ಸದನವನ್ನು ನಾಳೆ ಬೆಳಗ್ಗೆ ೧೧.೦೦ ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 06 ಗಂಟೆ 07 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ:17ನೇ ಡಿಸೆಂಬರ್ ಮಾಹೆ 2021ರ ಶುಕ್ರವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"